BROWEN BOOK ONLY

UNIVERSAL
LIBRARY
OU_200174
UNIVERSAL
LIBRARY

# ಕನ್ನಡಿಗರ ಕಾರಸ್ಥಾನ.

(ಐತಿಹಾಸಿಕ ಕಾದಂಬರಿ)

ಲೇಖಕ-ಪ್ರಕಾಶಕ —

ಆರ್. ಟಿ. ಕರ್ಪೂರ,

ಸಬ್-ಎಡಿಟರ, ಸ ಚ, ಆನಂದವನ

( ೨ನೆಯ ಆವೃತ್ತಿ )

೧೯೨೭

ಂದವನದ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಭಿ ಪ ಕಾಳೆ,

ಇವರಿಂದ ಮುದ್ರಿಸಲ್ಪಟ್ಟಿತು

ಬೆಲೆ ೧೦ ಆಣೆ

# ಕನ್ನಡಿಗರ ಕಾರಸ್ಥಾನ.

(ಐತಿಹಾಸಿಕ ಕಾದಂಬರಿ.)

ಆರ್. ಟಿ. ಕರ್ಪೂರ,

ಸಬ್-ಎಡಿಟರ, ಸ. ಚ. ಆನಂದವನ.

೧೯೩೭

೧೬೨ ೧೯ ಪುಸ್ತ

# ೨ನೆಯ ಆವೃತ್ತಿಯ ಪ್ರಸ್ತಾವನೆ.

ಈ ಮನೋಹರವಾದ ಐತಿಹಾಸಿಕ ಕಾದಂಬರಿಯ ೨ನೆಯ ಆವೃತ್ತಿಯನ್ನು ಹೊರಡಿಸುವ ಸಮಯ ಬಂದದ್ದಕ್ಕಾಗಿ ನಮಗೆ ತುಂಬಾ ಆನಂದವೆನಿಸುತ್ತದೆ. ಯಾವದೊಂದು ಗ್ರಂಥದ ಹಲವು ಆವೃತ್ತಿಗಳಾಗುವದು ಆ ಗ್ರಂಥದ ಲೋಕಪ್ರಿಯತೆಯನ್ನೂ ವಾಙ್ಮಯಾಭಿವೃದ್ಧಿಯನ್ನೂ ವ್ಯಕ್ತಪಡಿಸುತ್ತದಷ್ಟೇ, ಪ್ರಸ್ತುತಪುಸ್ತಕದ ಮೊದಲನೆಯ ಆವೃತ್ತಿಯ ಸಾವಿರಾರು ಪ್ರತಿಗಳು ತೀರಿ ಜನರ ಬೇಡಿಕೆ ಹೆಚ್ಚಾದ್ದರಿಂದ ಎರಡನೆಯ ಆವೃತ್ತಿ ಹೊರಡಿಸಬೇಕಾಯಿತು ಇದೊಂದೇ ಸಂಗತಿಯಿಂದ ಈ ಪುಸ್ತಕದ ಲೋಕಪ್ರಿಯತೆಯು ಒಡೆದು ಕಾಣುವಂತಿದೆ ಪ್ರತ್ಯಕ್ಷ ಪುಸ್ತಕವೇ ವಾಚಕರ ಕೈಯಲ್ಲಿರುತ್ತಿರಲು ಹೆಚ್ಚು ವರ್ಣಿಸುವ ಅವಶ್ಯಕತೆಯೇನು? ನಮ್ಮ ಪ್ರಿಯವಾಚಕರು ಮೊದಲನೆಯ ಆವೃತ್ತಿಯಂತೆ ಈ ಆವೃತ್ತಿಗೂ ಆಶ್ರಯಕೊಟ್ಟು ಬೇಗನೆ ೩ನೆಯ ಆವೃತ್ತಿಯ ಪ್ರಸಂಗವನ್ನು ತಂದು ಕೊಡುವರೆಂದು ಅಪೇಕ್ಷಿಸುವ.

ಶ್ರೀ ಕ್ಷೇತ್ರ ಆನಂದವನ.
ತಾ|| ೧೨-೯-೨೭

ತಮ್ಮ ವಿಧೇಯ,
ಪ್ರಕಾಶಕ.

# ಪ್ರಸ್ತಾವನೆ.

ನಮ್ಮ ವಾಚಕರ ಕೈಯಲ್ಲಿರುವ ಈ ಪುಸ್ತಕವು ಕನ್ನಡಿಗರ ಕಾರಸ್ಥಾನವೆಂಬ ಸುಂದರವಾದ ಐತಿಹಾಸಿಕ ಕಾದಂಬರಿಯು, ವಿಜಯನಗರದ ಸಾಮ್ರಾಜ್ಯವು ಘನತೆಗೇರಿದ ಕಾಲದಲ್ಲಿ ಕನ್ನಡಿಗರ ಉತ್ಕರ್ಷವು ಸರ್ವತೋಮುಖಗಳಿಂದ ಆಗಿತ್ತು, ಆಗಿನ ಕಾಲದಲ್ಲಿ ಕನ್ನಡ ವಾಙ್ಮಯವು ಪ್ರಸಿದ್ಧಿಯನ್ನು ಪಡೆದಿತ್ತು. ಕನ್ನಡಗ್ರಂಥ ಕರ್ತರು ಕೀರ್ತಿಶಾಲಿಗಳಾಗಿದ್ದರು! ಕನ್ನಡವೀರರು ಬೈಲಿಗೆ ಬಂದಿದ್ದರು, ಕನ್ನಡ ಮುತ್ಸದ್ದಿಗಳು-ಮಂತ್ರಿಗಳು ಜಗತ್ತನ್ನು ದಂಗುಬಡಿಸುತ್ತಿದ್ದರು. ಇಂಥ ಕನ್ನಡಿಗರ ಸುಕಾಲದಲ್ಲಿ ಜರುಗಿದ ಒಂದು ಕಥಾನಕದ ವರ್ಣನೆಯು ಈ ಕಾದಂಬರಿಯಲ್ಲಿ ಅಡಕವಾಗಿರುತ್ತದೆ

ಆ ಕಾಲದಲ್ಲಿ ಕನ್ನಡಿಗರ ಅಬ್ಬರವು ಇಷ್ಟರ ಮಟ್ಟಿಗೆ ಇದ್ದರೂ ವಿಷಯಾಂಧರಾದ ಮುಸಲ್ಮಾನರು ಅವರಿಗೆ ಹ್ಯಾಗೆ ಉಪದ್ರವ ಕೊಡುತ್ತಿದ್ದರೆಂಬದನ್ನೂ ಅವರನ್ನು ಉಪಾಯದಿಂದ ಕನ್ನಡಿಗರು ಹ್ಯಾಗೆ ಬಗ್ಗುಬಡಿಯುತ್ತಿದ್ಧರೆಂಬದನ್ನೂ ಇದರಲ್ಲಿಯ ಆಖ್ಯಾಯಿಕೆಯು ಚನ್ನಾಗಿ ಸಮರ್ಥನ ಮಾಡುತ್ತದೆ. ವಿಜಯನಗರದ ಮಂತ್ರಿಶ್ರೇಷ್ಠನಾದ ತಿಮ್ಮರಸನು ವಿಷಯಾಂಧನಾದರಾಯಚೂರ ದುರ್ಗಾಧಿಪತಿ ದಾವಲ್‌ಖಾನನಿಗೆ ಅಂಜನಹಚ್ಚಿ ಅವನು ಅಳಿಮನದಿಂದ ಸೆರೆಯಿಟ್ಟ ಪದ್ಮೆಯೆಂಬ ಸುಂದರಿಯನ್ನೂ ಅನಂಗಸೇನೆಯಂಥ ಸ್ತ್ರೀರತ್ನವನ್ನೂ ಬಿಡಿಸಿ ಕನ್ನಡಿಗರ ಕೈಯನ್ನು ಅವನಿಗೆ ಚನ್ನಾಗಿ ತೋರಿಸಿದನು ಇಷ್ಟೇ ಅಲ್ಲ, ವಿಜಾಪುರದ ಅದಿಲ್‌ಶಹನು ಸಹ ಈ ಪ್ರಸಂಗದಲ್ಲಿ ಗಾಬರಿಯಾಗಿ ರಾಯರೊಡನೆ ಒಪ್ಪಂದ ಮಾಡಿಕೊಂಡು ಸಪ್ಪಳಿಲ್ಲದೆ ಓಡಿ ಹೋದನು. ಇದರಿಂದ ಆ ಕಾಲದಲ್ಲಿ ಕನ್ನಡಿಗರ ದೇಹಸಾಮರ್ಥ್ಯವೂ ಬುದ್ಧಿಸಾಮರ್ಥ್ಯವೂ ಎಷ್ಟಿತ್ತೆಂಬದು ಚನ್ನಾಗಿ ತಿಳಿದು ಬರುತ್ತದೆ.

ನಮ್ಮ ಪ್ರಿಯ ಕನ್ನಡಿಗರು ಕನ್ನಡಿಗರ ಅಭಿಮಾನಕ್ಕೆ ಪಾತ್ರವಾದ ಈ ನೂತನ ಕಾದಂಬರಿಯನ್ನು ಓದಿಯೇ ತೀರಬೇಕೆಂದು ವಿನಯದಿಂದ ಪ್ರಾರ್ಥಿಸುವೆವು. ತೆಲಗುಭಾಷೆಯಲ್ಲಿದ್ದ ಇನ್ನೂ ಅನೇಕ ಹೊಸವಿಷಯಗಳನ್ನು ಬರೆದು ನಮ್ಮ ಕನ್ನಡಿಗರ ವಾಚನಕ್ಕೆ ಸಾಧನ ಮಾಡಿಕೊಡಬೇಕೆಂದು ಪ್ರಸ್ತುತದ ಲೇಖಕನ ಇಚ್ಛೆಯಿದೆ, ಈ ಇಚ್ಛೆಯು ಶ್ರೀಶೇಷಾಚಲ ಸದ್ಗುರುವಿನ ಕೃಪಾಪ್ರಭಾವದಿಂದ ಕೊನೆಮುಟ್ಟಲೆಂದು ಹಾರೈಸುವೆನು,

ವಿಧೇಯ,

ಆನಂದವನ. ತಾ|| ೩೦-೧-೨೩

ಆರ್. ಟಿ. ಕರ್ಪೂರ.

# ವಿಷಯಾನುಕ್ರಮಣಿಕೆ.


| ಪ್ರಕರಣ. | ವಿಷಯ. | ಪುಟ. |
|---|---|---|
| ೧ | ಅಕಲ್ಪಿತ ಸ್ನೇಹ. | ೧ |
| ೨ | ವಿಜಯನಗರ. | ೧೦ |
| ೩ | ದೂತನ ವೃತ್ತಾಂತ. | ೧೭ |
| ೪ | ರಣೋತ್ಸಾಹ | ೨೫ |
| ೫ | ಫಕೀರ | ೩೦ |
| ೬ | ಹುಚ್ಚನ ಕರಾಮತಿ | ೩೮ |
| ೭ | ಕಾರಸ್ಥಾನ. | ೪೩ |
| ೮ | ದುಃಖದಲ್ಲಿ ಸುಖ. | ೪೯ |
| ೯ | ಮಿತ್ರಲಾಭ. | ೫೭ |
| ೧೦ | ತಂತ್ರಕ್ಕೆ ಪ್ರತಿತಂತ್ರ. | ೬೫ |
| ೧೧ | ಖಾನನ ವಿಷಯಾಂಧತೆ | ೭೩ |
| ೧೨ | ಮುತ್ತಿಗೆ | ೮೧ |
| ೧೩ | ವಿಜಯನಗರದವರಿಗೆ ಜಯ. | ೮೬ |
| ೧೪ | ಉಪಸಂಹಾರ | ೯೩ |

# ಕನ್ನಡಿಗರ ಕಾರಸ್ಥಾನ.

## ೧ನೆಯ ಪ್ರಕರಣ.

### ಅಕಲ್ಪಿತ ಸ್ನೇಹ.

ಶಾಲಿವಾಹನ ಶಕೆಯು ೧೮೪೧ ನೆಯ ಸಂವತ್ಸರವು, ಮಾಘ ಮಾಸವು ಪ್ರಾರಂಭವಾಗಿದೆ. ಆದರೂ ಚಳಿಯ ಪ್ರಾಬಲ್ಯವು ಯಥಾಪ್ರಕಾರ ಹೆಚ್ಚುತ್ತಲೇ ಇದೆ. ಸಂಜೆ-ಮುಂಜಾವುಗಳಲ್ಲಿ ಶೀತಬಾಧೆಯೂ, ಮಧ್ಯಾಹ್ನದಲ್ಲಿ ಬಿಸಿಲಿನ ತಾಪವೂ ಜನರನ್ನು ನುಗ್ಗು ಮಾಡುತ್ತಲಿವೆ. ಆದರೂ ಸಂಸಾರಾಸಕ್ತರಾದ ಮನುಷ್ಯರು ಅದನ್ನು ಲೆಕ್ಕಿಸದವರಾಗಿದ್ದಾರೆ. ಕೈಸಾಗದ ಹೇಡಿಗಳು ಮಾತ್ರ ಈ ಕೆಟ್ಟ ಕಾಲವು ಎಂದು ಹೋದೀತೆಂದು ಶಪಿಸುತ್ತಲಿದ್ದರು. ಆಹಾ! ಈ ಕಾಲದ ಸೊಬಗನ್ನು ಬಣ್ಣಿಸುವದೇನು? ಕೃಷೀವಲರಿಗಂತೂ ಬಲುಹಿಗ್ಗು, ಎಲ್ಲೆಲ್ಲಿ ನೋಡಿದರೂ ಧಾನ್ಯದ ರಾಶಿಗಳು, ಕೆಲವರು ಬಂಡಿಯನ್ನು ತುಂಬಿ-ತುಂಬಿ ಮನೆಗೆ ಒಯ್ಯುವರು, ಕೆಲವರು ಮೊಪ್ಪೆಯನ್ನು ಕಟ್ಟಿ ಹೊರುವರು. ಭಿಕ್ಷುಕರಂತೂ ಭಿಕ್ಷೆಯ ಧಾನ್ಯವನ್ನು ಹೊರಲಾರದೆ ತೊಳಲಾಡುತ್ತಿರುವರು. ಎಂಥ ಸುಕಾಲವದು? ಅಂಥ ಸುಕಾಲದ ದರುಶನವು ಪ್ರಪಂಚಕ್ಕೆ ಇನ್ನು ಮುಂದೆ ಎಂದಾದರೂ ಆಗಬಹುದೆ?

ನಾರೀಜನರಲ್ಲೆಷ್ಟು ಸಂಭ್ರಮ! ಇಂದು ಈ ಊರಜಾತ್ರೆಯು, ನಾಳೆಗೆ ಮತ್ತೊಂದು ಊರಲ್ಲಿ. ಇಂದು ಈ ಮನೆಯಲ್ಲಿ ಲಗ್ನವು, ನಾಳೆ ಬೇರೊಂದು ಮನೆಯಲ್ಲಿ, ದಿನಾಲು ಹೊಸ-ಹೊಸ ಅಲಂಕಾರ! ಈ ಉಬ್ಬಿನಲ್ಲಿ ಹಿಮರಾಜನ ಕಡೆಗೆ ಹೊರಳಿ ನೋಡುವವರಾರು? ದಿನಹೋದ ಮೇಲೆ ಬೇಡಬೇಡವೆಂದು ಕೈಕೊಡಹಿದರೂ ಮೊಂಡತನದಿಂದ ಬರುವ ಈ ಹಿಮರಾಜಪುತ್ರನನ್ನು ಈ ಹಂಗಳಿಯರು ಅಲ್ಲಗಳೆಯುವರೋ ಎಂಬಂತೆ ಭಾಸವಾಗುವದು.

ಒಟ್ಟಿಗೆ ಈ ಕಾಲವು ಉದ್ಯೋಗಿಗಳಿಗೆ ಕಲ್ಪವೃಕ್ಷವಾಗಿರುವದು. ಒಕ್ಕಲತನದ ದುಡಿಮೆಯ ಸಾರವನ್ನು ಸಂಗ್ರಹಿಸಿಕೊಡುವ ಈ ಕಾಲವು ಅತ್ಯಂತ ಶ್ರೇಷ್ಠವೆಂದು ಆ ಜನರು ಭಾವಿಸುವರು ಇಂಥ ಸಾರಭೂತವಾದ ಈ ಕಾಲದಲ್ಲಿ ಕೃಷ್ಣಪಕ್ಷದ ಚತುರ್ಥಿಯ ದಿವಸ ಮೂವರು ದಾರಿಕಾರರು ತುಂಗಭದ್ರೆಯ ಉತ್ತರದ ದಂಡೆಗುಂಟ ನಡೆದಿದ್ದರು ಅವರ ಉಡಿಗೆ-ತೊಡಿಗೆಗಳು ತೀರ ಸಾಧಾರಣದವಿದ್ದವು ಅವರಲ್ಲಿ ಇಬ್ಬರ ನಿಲುವಿಕೆ ಬಲು ಎತ್ತರ, ಇನ್ನೊಬ್ಬನು ಸಾಧಾರಣ ನಿಲುವಿಕೆಯುವನಿದ್ದನು ಮೈಕಟ್ಟಿನಿಂದ ಆ ಮೂವರೂ ಗರಡೀ ಸಾಧನ ಮಾಡಿದವರಂತೆ ತೋರುತ್ತಿದ್ದರು ಅವರು ಕಾಲಿನಿಂದ ನಡೆದಿದ್ದರು ಹೀಗೆ ಕಲಹೊತ್ತು ಸಾಗಿದ ಬಳಿಕ ಅವರಲ್ಲೊಬ್ಬನು—

"ಮಿತ್ರಾ ಪ್ರತಾಪಾ, ಈ ವಿಜಯನಗರಕ್ಕೆ ಮಂತ್ರಿಯಾಗಿರುವ ತಿಮ್ಮರಸನನ್ನು ಒಲ್ಲೆಯಾ? ಆತನು ಮಹಾಬುದ್ಧಿಶಾಲಿ ರಾಜ್ಯತಂತ್ರಗಳಲ್ಲಿ ಒಳ್ಳೇ ನಿಪುಣನು. ಅವನಿಗೆ ಸಮನಾದ ರಾಜಕರಣ ನಿಪುಣರನ್ನು ಈಗಿನ ಕಾಲದಲ್ಲಿ ಕಾಣುವದು ಅಪರೂಪವೇ ಸರಿ!"

ಪ್ರತಾಪ —ಪ್ರಹಾರೇಶ್ವರಾ, ನೀನಾಡಿದ್ದು ಸತ್ಯವು ಆತನು ಅಂಥ ಭಾಗ್ಯಶಾಲಿಯೇ ಇರುವನು. ಅವನ ಪೂರ್ವದ ಚರಿತ್ರವನ್ನು ನಾನು ಕೇಳಬಲ್ಲೆನು "ಸ್ತ್ರೀಯಶ್ಚರಿತ್ರಂ ಪುರುಷಸ್ಯಭಾಗ್ಯಂ ದೇವೋನಜಾನಾತಿ ಕುತೋ ಮನುಷ್ಯಃ||" ಎಂದು ಹೇಳುವದರ ಇಂಗಿತವು ಇಂಥವರ ಪ್ರತ್ಯಕ್ಷಾವಲೋಕನದಿಂದ ಸಹಜವಾಗಿ ತಿಳಿಯುವದು.

ಪ್ರಹಾರೇಶ್ವರ —ಈ ಪುಣ್ಯಪುರುಷನ ಕಾಲದಲ್ಲಿ ಹೊಂದಿದಷ್ಟು ಸೌಖ್ಯವನ್ನು ವಿಜಯನಗರವು ಇಂದಿನವರೆಗೆ ಎಂದೂ ಹೊಂದಿದ್ದಿಲ್ಲವೆಂದು ನಾನು ಭಾವಿಸುತ್ತೇನೆ. ರುದ್ರದೇವಾ! ಏನು ವಿಲಕ್ಷಣತೇಜಸ್ಸಿದು? ನಾನು ಅನೇಕರನ್ನು ನೋಡಿರುವೆನು, ಆದರೆ ಇಷ್ಟು ಸರಸ ಮಂತ್ರಿಯನ್ನು ನಾನು ಕಂಡಿಲ್ಲ ಬಿಡು! ಕೃಷ್ಣದೇವರಾಯರ ದೊರೆತನ, ತಿಮ್ಮರಸನ ಸಚಿವತನ, ಈ ಜೋಡಿಯನ್ನು ಪರಮಾತ್ಮನು ಬಹು ಕೌಶಲ್ಯದಿಂದ ನಿರ್ಮಿಸಿರುವನು ಬಂಗಾರಕ್ಕೆ ಪರಿಮಳ ಬಂದರೆ ಅದು ಹ್ಯಾಗೆ ಉಭಯಗುಣಗಳಿಂದ ಅತ್ಯಧಿಕವಾಗಿ ಲೋಕಮಾನ್ಯವಾಗುವದೋ, ಹಾಗೆ ನಮ್ಮ ರಾಯರು ಈ ತಿಮ್ಮರಸನ ಯೋಗದಿಂದ ವಿಶೇಷವಾಗಿ ಪೂಜ್ಯರಾಗಿರುತ್ತಾರೆ. ರಾಯರಿಗೆ ಅಲಂಕಾರಪ್ರಾಯನಾದ ಈ ತಿಮ್ಮರಸನು ಎಷ್ಟು ಧನ್ಯನು!

ರುದ್ರದೇವ —ಪ್ರತಾಪ, ಇದಕ್ಕೇ ಅದೃಷ್ಟವೆಂದೆನ್ನುವರು. ದೈವಶಾಲಿಗೆ ಯಾವದು ತಾನೇ ಅಸಾಧ್ಯವು? ಮನುಷ್ಯನಿಗೆ ದೈವವು ಅನುಕೂಲವಿರಬೇಕು ಅಂದರೇ ಅವನು ಮಣ್ಣು ಹಿಡಿದರೂ ಚಿನ್ನವಾಗಿ ಪರಿಣಮಿಸುವದು. ಅದೇ ದೈವಾನುಕೂಲವಿಲ್ಲದಿದ್ದರೆ ಚಿನ್ನವನ್ನು ಹಿಡಿದರೆ ಮಣ್ಣಾಗುವದು ಈ ತಿಮ್ಮರಸನು ಮೊದಲು ಯಾವ ಸ್ಥಿತಿಯಲ್ಲಿದ್ದನು? ಈತನು ಮುಂದೆ ಹೀಗೆ ಈ ಪದವಿಗೆ ಬರುವನೆಂದು ಯಾರಿಗಾದರೂ ತಿಳಿದಿತ್ತೇ? ಯಾವನಾದರೂ ಪ್ರಸಿದ್ಧ ಜ್ಯೋತಿಷಿಯು ಈ ಮಾತನ್ನು ಹೇಳಿದ್ದರೆ ಅದು ಲೋಕದವರಿಗೆ ಒಡಂಬಡಿಕೆಯಾಗಬಹುದಾಗಿತ್ತೋ- ಹೇಳಿದವನಿಗೇ ಹುಚ್ಚನೆಂದು ಅನ್ನಬಹುದಾಗಿತ್ತಲ್ಲವೆ?

ಪ್ರಹಾರೇಶ್ವರ —ಇಲ್ಲ, ಎಂದಿಗೂ ಒಪ್ಪಿಗೆಯಾಗುತ್ತಿದ್ದಿಲ್ಲ. ಈ ತಿಮ್ಮರಸನನ್ನು ನಾನು ಚಿಕ್ಕಂದಿನಲ್ಲಿಯೇ ಬಲ್ಲೆನು ಈತನಿಗೆ ತಿನ್ನಲಿಕ್ಕೆ ಜೋಳದ ನುಚ್ಚು ಸಹ ದೊರೆಯುತ್ತಿದ್ದಿಲ್ಲ ಚಿಕ್ಕಂದಿನಲ್ಲಿ ಇವನು ಜೋಳಿಗೆ ಹಾಕಿ ಗುತ್ತಿ-ಚಂದ್ರಗಿರಿ, ಮುದಗಲ್ಲು ಮೊದಲಾದ ದುರ್ಗಗಳಲ್ಲಿ ಮಧುಕರ ವೃತ್ತಿಯಿಂದ ಜೀವಿಸಿದ್ದನ್ನು ನಾನು ಪೂರ್ಣವಾಗಿ ಬಲ್ಲೆನು. ಈ ಪರಿ ಕಷ್ಟಪಟ್ಟವನು ತುಸ ದಿವಸಗಳಲ್ಲಿಯೇ ಇಷ್ಟು ಘನತೆಗೇರಿದ್ದನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗದೆ ಇರದು!

ರುದ್ರದೇವ —ಇದರಲ್ಲಿ ಆಶ್ಚರ್ಯವೇನೆತರದು? ದೈವವಿಲಾಸದ ಮುಂದೆ ಬಡತನದ ಪಾಡೇನು? ಆತನಿಗೆ ಪೂರ್ವಜನ್ಮದ ಸುಕೃತವು ಒದಗಿ ಬಂದದ್ದರಿಂದ ಯಾವ ದುರ್ಗದಲ್ಲಿ ಅವನು ಮಧುಕರ ವೃತ್ತಿಯಿಂದ ಜೀವಿಸುತ್ತಿದ್ದನೋ, ಆ ದುರ್ಗಾಧಿಪತಿಗಳೇ ಅವನಿಗೆ ಆಶ್ರಯಕೊಟ್ಟರು ಮಹಾ ಬುದ್ಧಿಶಾಲಿಯಾದ ಅವನು "ಎಳೆಸಿಕ್ಕರೆ ಹಚ್ಚಡ ನುಂಗಿದರೆ"ಂಬಂತೆ ಘನತೆಗೇರುತ್ತ ಈಗ ಸಾಮ್ರಾಜ್ಯದ ಮುಖ್ಯಾಮಾತ್ಯನಾಗಿ ಕುಳಿತನು ಇದಕ್ಕಾಗಿ ನಾವು ಅವನ ಸುದೈವವನ್ನು ಬೇಕಾದಷ್ಟು ಕೊಂಡಾಡಬಹುದು

ಪ್ರತಾಪ (ನಡುವೇ ಬಾಯಿಹಾಕಿ) —ನೀವು ಬರಿಯ ದೈವವನ್ನೇ ಹೊಗಳುತ್ತಿರುವಿರಲ್ಲ? ಬರಿಯ ದೈವವಾದಿಯಾದರೆ ಇಂಥ ಪದವಿಯು ಬರಲಾರದು. ತಿಮ್ಮರಸನು ಎಂಥ ಸಾಹಸಿಯು! ಎಷ್ಟು ಎದೆಗಾರನು! ಅವನು ಈ ಉನ್ನತ ಪದವಿಯನ್ನು ಪಡೆಯಲಿಕ್ಕೆ ಹ್ಯಾಗೆಹ್ಯಾಗೆ ಪ್ರಯತ್ನಪಟ್ಟನು? ಎಂಬದನ್ನೇನೂ ಅರಿಯದೆ, ನೀವು ಹೀಗೆ ಬರಿಯ ದೈವವನ್ನೇ ಮುಂದುಮಾಡಿದರೆ ನಾನು ಒಪ್ಪಿಕೊಳ್ಳುವದಿಲ್ಲ. ಆತನ ಈ ಶ್ರೇಷ್ಠತೆಗೆ ಅವನ ಚಾತುರ್ಯ-ಸಾಹಸ

ಗಳೇ ಕಾರಣವೆಂದು ನಾನು ತಿಳಿಯುತ್ತೇನೆ.

ರುದ್ರದೇವ (ನಸುನಕ್ಕು) —ಪ್ರತಾಪ, ನಿನಗೊಂದು ಹುಚ್ಚು; ಪ್ರಯತ್ನದಿಂದ ಇಂಥ ಶ್ರೇಷ್ಠತೆಯು ಬರುತ್ತಿದ್ದರೆ, ಕೋಟ್ಯವಧಿ ಜನರು ಪ್ರಯತ್ನ ಮಾಡುತ್ತಿದ್ದರು, ಈಗ ನಮ್ಮೆಲ್ಲರಿಗೆ ಅಂಥ ಶ್ರೇಷ್ಠಪದವಿಯು ಬೇಡಾಗಿರುವದೇನು? ಹಾಗಾದರೆ ನಾವೆಲ್ಲರೂ ಅದಕ್ಕೆ ಯಾಕೆ ಪ್ರಯತ್ನ ಮಾಡುವದಿಲ್ಲ? ಮಾಡಿದರೂ ಸಿದ್ಧಿಗೆ ಯಾಕೆ ಹೋಗುವದಿಲ್ಲ? ನಾವೇನು ಸುಮ್ಮನೆ ಕುಳಿತಿರುವೆವ್ರೋ? ನಮ್ಮ ಉತ್ಕರ್ಷವಾಗಬೇಕೆಂದು ಶಕ್ತಿಮೀರಿ ಹೆಣಗುವವು ಆದರೆ ಇದುವರೆಗೆ ನಮ್ಮ ಇಚ್ಛಿತವು ಯಾಕೆ ಸಾಧಿಸಿರುವದಿಲ್ಲ? ಇದಕ್ಕೆ ಉತ್ತರಕೊಡುವದೆಂದರೆ, ಪ್ರಾರಬ್ಧವನ್ನೇ ಬೊಟ್ಟು ಮಾಡಿ ತೋರಿಸುವದು, ಪುನರ್ಜನ್ಮವನ್ನು ನಂಬದ ಎಷ್ಟೋ ಜನರು ಜಗತ್ತಿನಲ್ಲಿದ್ದ ಈ ವ್ಯತ್ಯಾಸವನ್ನು ನೋಡಿ ದಂಗಾಗಿ ಹೋಗುವರು ಅವರಿಂದ ಮುಂದೆ ಮಾತುಗಳೇ ಹೊರಡುವದಿಲ್ಲ ಸುಮ್ಮನೆ ಪುನರ್ಜನ್ಮಕ್ಕೆ ಒಪ್ಪಿಕೊಂಡು ಹೋಗುವ ಪ್ರಸಂಗವು ಅವರಿಗೆ ಬರುವದು ಅದರಂತೆ ನೀನಾದರೂ ಪ್ರಯತ್ನವಾದವನ್ನು ಮಾಡುವಿ. ಕಡೆಗೆ ದೈವವಾದದ ಮುಂದೆ ನೀನು ನಿಶ್ಚಯವಾಗಿ ನಿರುತ್ತರನಾಗುವಿ

ಪ್ರಹಾರೇಶ್ವರ —ಸಾಕು ಬಿಡು ರುದ್ರದೇವಾ, ನೀನು ದೈವವಾದಿಯು, ಪ್ರತಾಪನು ಪ್ರಯತ್ನವಾದಿಯು ನೀವಿಬ್ಬರೂ ಹೀಗೆಯೇ ಎಷ್ಟು ವರುಷಗಳ ವರೆಗೆ ಮಾತು ಬೆಳಿಸುತ್ತ ಕುಳಿತರೂ ಅದೇನೂ ಮುಗಿಯುವದಿಲ್ಲ. ದೈವಕ್ಕೆ ಪ್ರಯತ್ನವು ಸಾಧನವಾಗಿದೆಯೆಂಬದು ನಿಮ್ಮ ಲಕ್ಷದಲ್ಲಿ ಬಾರದಿರುವದರಿಂದ ನೀವು ಹೀಗೆ ಮಾತಾಡುವಿರಿ ಪ್ರಯತ್ನವಿಲ್ಲದೆ ಬರಿಯ ದೈವವು ಸಿದ್ಧಿಯನ್ನು ಕೊಡಲಾರದು ಅಲ್ಪ ಪ್ರಯತ್ನವಾದರೂ ಅದಕ್ಕೆ ಬೇಕು ಅದರಂತೆ ಪ್ರಯತ್ನವಾದರೂ ದೈವಾನುಕೂಲವಿಲ್ಲದಿದ್ದರೆ ತನ್ನ ಕರ್ತೃತ್ವಶಕ್ತಿಯನ್ನು ಮೆರಯಿಸಲಾರದು ಇವೆರಡೂ ಪರಸ್ಪರ ಸಂಬಂಧಗಳಿಂದ ಬಿಗಿಯಲ್ಪಟ್ಟಿರುವದರಿಂದ ಇವಕ್ಕೆ ಒಂದನ್ನೊಂದು ಬಿಟ್ಟರೆ ಗತಿಯಿಲ್ಲ

ರುದ್ರದೇವ (ಹಾಸ್ಯದಿಂದ) —ಅಹಾ! ನಮ್ಮ ಪ್ರಹಾರೇಶ್ವರರು ಬಲು ಬುದ್ಧಿವಂತರು ಪ್ರಯತ್ನ-ದೈವಗಳೆರಡರಲ್ಲಿ ದಾಂಪತ್ಯಭಾವವನ್ನು ಕಲ್ಪಿಸಿ ಬಿಟ್ಟರು ಇಂಥ ಬುದ್ಧಿವಂತರಿದ್ದರೆ ಇನ್ನೇನು ಕಡಿಮೆ?

ಪ್ರಹಾರೇಶ್ವರ (ಸಿಟ್ಟಿನಿಂದ) —ಯಾಕೆ ರುದ್ರದೇವಾ, ನಾಲಿಗೆಯನ್ನು ಬಿಗಿಹಿಡಿದು ಮಾತಾಡು. ಇಲ್ಲದಿದ್ದರೆ ..

ಈಮೇರೆಗೆ ಪ್ರಹಾರೇಶ್ವರನು ಮಾತಾಡಲು ರುದ್ರದೇವನು ಸಂತಪ್ತನಾದನು. ಮಾತಿಗೆ ಮಾತು ಬೆಳೆದು ಅವರಿಬ್ಬರಲ್ಲಿ ಜಗಳಕ್ಕೆ ಆರಂಭವಾಯಿತು. ಪ್ರತಾಪದೇವನು ಬೆಪ್ಪನಾಗಿ ನಿಂತುಬಿಟ್ಟನು ಆಡ ಆಡುತ್ತ ಇವರು ಅಡವೀ ಕೂಡಿದ್ದರಿಂದ ಇವರಿಗೆ ಏನು ಹೇಳಬೇಕೆಂಬದು ಆತನಿಗೆ ತಿಳಿಯದಾಯಿತು. ಆದರೂ ಅವನು ಬಳ್ಳೆ ವ್ಯಾವಹಾರಿಕನಿದ್ದನು ಆದ್ದರಿಂದ ಅವನು ಸ್ವಲ್ಪ ಹೊತ್ತು ಯೋಚಿಸಿ ಅವರನ್ನು ಹಾದಿಗೆ ತರಬೇಕೆಂದು ನಿಶ್ಚಯಿಸಿದನು. ಇನ್ನು ಅವನು ಏನೋ ಹೇಳತಕ್ಕವನು ಅಷ್ಟರಲ್ಲಿ ಕುದುರೆಗಳ ಖುರಪುಟಗಳ ಅಸ್ಪಷ್ಟ ಧ್ವನಿಯು ಕೇಳತೊಡಗಿತು ಆಗ ಆ ಮೂವರ ಎದೆಗಳೂ ಧಸ್ಸೆಂದವು ಪ್ರಹಾರೇಶ್ವರನೂ-ರುದ್ರದೇವನೂ ಕಲಹವನ್ನು ನಿಲ್ಲಿಸಿ ಕುತೂಹಲದಿಂದ ಆ ಸಪ್ಪಳವು ಕೇಳಬರುವ ಕಡೆಗೆ ನೋಡತೊಡಗಿದರು ಆ ಮೂವರೂ ನಾನೂಂಕಿತ ವೀರರಾದ್ದರಿಂದ ಶತ್ರುಭಯವು ಅವರನ್ನು ಮುಟ್ಟಲಿಲ್ಲ ಮೊಟ್ಟಮೊದಲು ಆ ಸಪ್ಪಳವು ಕೇಳಿದಾಗ ಅವರ ಮನಸ್ಸು ಸ್ವಲ್ಪ ಭಯಗ್ರಸ್ತವಾದರೂ ಮುಂದೆ ಅದು ಅವರಲ್ಲಿ ಬಹಳ ಹೊತ್ತು ನಿಲ್ಲಲಿಲ್ಲ 'ನಾವು ಕನ್ನಡ ಭೂಮಾತೆಯ ಉದರದಲ್ಲಿ ಜನಿಸಿದ ವೀರರಿದ್ದೇವೆ. ನಮ್ಮ ಪಿತೃಗಳು ಇಂಥಿಂಥ ಪರಾಕ್ರಮದ ಕಾರ್ಯಗಳನ್ನು ಮಾಡಿರುವರು' ಎಂಬ ವಿಚಾರಗಳು ಅವರಲ್ಲಿ ಹುಟ್ಟಲು, ಅವರ ಆವೇಶವು ಹೆಚ್ಚಿತು ಮನುಷ್ಯನಿಗೆ ಪೂರ್ವಜರ ಕೀರ್ತಿಯ ಸ್ಮರಣದಿಂದ ವಿಲಕ್ಷಣ ಸ್ಫೂರ್ತಿಯುಂಟಾಗುವದೆಂಬದು ಸುಳ್ಳಲ್ಲ ಒಂದುವೇಳೆ ಆ ಕುದುರೆಗಳ ಖುರಪುಟಗಳ ಸಪ್ಪಳವು ಶತ್ರುಗಳದಾಗಿದ್ದರ ಅವರಿಗೆ ಎದುರಾಗಿ ಕನ್ನಡಿಗರ ಕೈಯನ್ನು ತೋರಿಸಬೇಕಂಬ ವೀರೋಚಿತ ವಿಚಾರಗಳು ಅವರ ಮನೋಭೂಮಿಕೆಯಲ್ಲಿ ಉದಯವಾದವು ಹೀಗೆ ಅವರು ತಮ್ಮಷ್ಟಕ್ಕೆ ತಾವೇ ತನ್ಮು ತಮ್ಮ ಮನಸ್ಸಿನಲ್ಲಿ ಯೋಚಿಸುತ್ತಿರಲು, ಒಮ್ಮಿಂದೊಮ್ಮೆ ಆ ಸಪ್ಪಳವು ಕೇಳದಂತಾಯಿತು. ಇದೇನು ಸ್ವಪ್ನವೋ ಎಂಬ ಭ್ರಾಂತಿಯು ಅವರಲ್ಲುಂಟಾಯಿತು. ಆಗ ಅವರು ಸಮೀಪದಲ್ಲಿರುವ ಒಂದು ದಿನ್ನೆಯನ್ನೇರಿ ಸುತ್ತಲೂ ನೋಡಿದರು. ಸ್ವಲ್ಪದೂರದಲ್ಲಿ ಕೆಲವು ಕುದುರೆಗಳು ತುಂಗಭದ್ರೆಯಲ್ಲಿ ಜಲಪಾನಮಾಡುವದನ್ನು ಕಂಡರು. ಕುದುರೆಗಳು ಸರಾಸರಿ ಒಂದು ನೂರರವರೆಗೆ ಇರಬಹುದು. ಅವುಗಳ ಮೇಲೆ ಕುಳಿತ ರಾಹುತರು ಇಂದವರೇ ಎಂಬ ನಿರ್ಧಾರವು ಆಗದೆ ಹೋಯಿತು. ತಮಗೆ ಕೇಳಿದ ಸಪ್ಪಳವು ಇವೇ ಕುದುರೆಗಳದಿರಬೇಕೆಂದು ಅವರು ತರ್ಕಿಸಿದರು, ಆದರೆ ಆ ರಾವುತರು ಶತ್ರುಗಳೋ ಮಿತ್ರರೋ ಯಾರೆಂಬದನ್ನು ತಿಳಿ

ಯುಲಾರದೆ ಕ್ಷಣಹೊತ್ತು ಅಲ್ಲಿಯೇ ನಿಂತರು.

ಕ್ಷಾತ್ರದೀಕ್ಷೆಯು ಬಲು ಕಠೋರವಾದದ್ದು. ಅದನ್ನು ಅವಲಂಬಿಸಿದ ಮನುಷ್ಯನು ಆ ದೀಕ್ಷೆಗೆ ಭಂಗಬಾರದಂತೆ ನಡೆಯಬೇಕಾದರೆ ಜೀವಿತವನ್ನು ತೃಣದಂತೆ ಭಾವಿಸಬೇಕಾಗುತ್ತದೆ. ಅದರಂತೆ ಪ್ರಸ್ತುತ ನಮ್ಮ ಮೂವರು ವೀರರು ತಮ್ಮ ಕೆಚ್ಚೆದೆಯ ಪ್ರಭಾವವನ್ನು ತೋರಿಸಬೇಕು, ಇಲ್ಲವೆ ಮಡಿಯಬೇಕು, ಎಂದು ನಿರ್ಧರಿಸಿದರು ಕರ್ಮಧರ್ಮಸಂಯೋಗದಿಂದ ಆ ರಾವುತರು ಶತ್ರುಪಕ್ಷದವರಾದ್ದರಿಂದ ನಮ್ಮ ಮೂವರು ವೀರರಮೇಲೆ ಕಠಿಣತರವಾದ ಗಂಡಾಂತರವು ಕರೆಕಳುಹಿಸಿದ ಹಾಗೆ ಬಂದಿತು. ಬಳಿಕ ಕೇಳುವದೇನು? ಆ ರಾವುತರು ಕುದುರೆಯನ್ನೋಡಿಸುತ್ತ ಬಂದು, ಆ ದಿನ್ನೆಯನ್ನು ಮುತ್ತಿದರು. ದಿನ್ನೆಯ ಮೇಲೆ ನಮ್ಮ ಮೂವರು ವೀರರು, ಕೆಳಗೆ ನೂರಾರು ಜನ ಶತ್ರುಪಕ್ಷದ ರಾವುತರು. ಆದರೆ ಮೇಲಿನ ವೀರತ್ರಯಿಗಳ ಕೌಶಲ್ಯದಿಂದ ರಾವುತರಿಗೆ ದಿನ್ನೆಯನ್ನೇರಲು ಅನುವು ದೊರೆಯದೇ ಹೋಯಿತು. ಈ ಮೂವರೂ ಪಟ್ಟಾಕತ್ತಿಯನ್ನು ತಿರುವುತ್ತ ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಇಳಿಯಲು, ಅವರ ಕತ್ತಿಯ ಪೆಟ್ಟಿಗೆ ಶತ್ರುಪಕ್ಷದ ರಾವುತರು ಪಟ ಪಟ ನೆಲಕ್ಕುರುಳಿದರು ಪ್ರತಿಯೊಬ್ಬನು ತಲೆಗೆ ಇಪ್ಪತ್ತರಂತೆ ಅರವತ್ತು ಜನರನ್ನು ಯಮನಗರಿಗೆ ಅಟ್ಟಿದರು ಆದರೆ ಇವರಿಗೆ ದೈವಾನುಕೂಲವು ತಪ್ಪಿದ್ದರಿಂದ ಉಳಿದ ನಾಲ್ವತ್ತು ಜನರು ಒಮ್ಮೆಲೆ ಈ ಮೂವರಿಗೆ ಮುಗಿಬಿದ್ದು, ಅವರ ಆಟವನ್ನು ಸಾಗಗೊಡದೆ ಅವರನ್ನು ಕೈಸೆರೆ ಹಿಡಿದರು. ಈ ದೊಡ್ಡ ವ್ಯಕ್ತಿಗಳು ಅನಾಯಾಸವಾಗಿ ಸೆರೆಸಿಕ್ಕರೆಂದು ಉಬ್ಬುಬ್ಬಿ ಆ ರಾವುತರ ಮುಖ್ಯಸ್ಥನು ಮುಂದೆ ಸ್ವಲ್ಪ ದಾರಿಯನ್ನು ಕ್ರಮಿಸಲು, ದೈವಕೊಟ್ಟದ್ದನ್ನು ಕರ್ಮವು ಕಚ್ಚಿಕೊಂಡು ಹೋಯಿತೆಂಬ ನ್ಯಾಯದಂತೆ ಎತ್ತ ಕಡೆಯಿಂದಲೋ ನೂರಾರು ಜನ ಹಿಂದುಗಳು ಸದ್ದಿಲ್ಲದ ಒಂದು ಅವರ ಮೇಲೆ ಬಿದ್ದರು ಆ ಕ್ಷಣದಲ್ಲಿ ಆ ಉಭಯಪಕ್ಷದವರಲ್ಲಿ ಕಡುಕಾಳಗ ನೆಸಗಿತು. ಆದರೆ ನೂರಾರು ಜನ ಶತ್ರುಗಳೆದುರಿಗೆ ರಾವುತರ ಆಟವು ಸಾಗದೆ ಇದ್ದದ್ದು ಆಶ್ಚರ್ಯವಲ್ಲ ಕೊನೆಗೆ ರಾವುತರಲ್ಲಿ ಅರ್ಧಮರ್ಧ ಜನರು ಮಡಿಯಲು, ಉಳಿದವರು ಪಲಾಯನ ಹೇಳಿಸಿದರು ಸೆರೆಸಿಕ್ಕ ನಮ್ಮ ಮೂವರು ವೀರರು ಮಾತ್ರ ಉಳಿದರು. ಅವರ ಕೈಗಳು ಬಲವಾದ ಹಗ್ಗಗಳಿಂದ ಬಿಗಿಯಲ್ಪಟ್ಟಿದ್ದವು ಅವರು ಎಡಕ್ಕೂ ಬಲಕ್ಕೂ ಹೊರಳಿ ಸಹ ನೋಡುವ ಹಾಗಿದ್ದಿಲ್ಲ ಇಂಥ ಪರಾಧೀನತೆಯಲ್ಲಿ ಅವರು ಅಧೋವದನರಾಗಿ ನಿಂತಿರಲು, ರಾವುತರನ್ನು

ಹೊಡೆದೋಡಿಸಿ ಜಯಶಾಲಿಯಾದ. ಸೈನಿಕರ ಮುಖ್ಯಸ್ಥನು ಅವರ ಮುಂದೆ ಬಂದು ನಿಂತನು

ಆ ವೀರ ನರಪುಂಗವನು ಅತ್ಯಂತ ಉಗ್ರರೂಪಿಯಾಗಿದ್ದನು. ಅವನ ಮೈಮೇಲಿನ ಕರೀಬಟ್ಟೆಗಳು ಅವನ ರೌದ್ರತೆಯನ್ನು ಮತ್ತಿಷ್ಟು ಹೆಚ್ಚಿಸತೊಡಗಿದವು ಅವನ ನಿಲುವಿಕೆ ಎತ್ತರ, ಮೈಕಟ್ಟು ಪುಷ್ಟವಾದದ್ದು, ಮೈಬಣ್ಣವು ಸಾದಗಪ್ಪಿನದು, ಆದರೂ ತೇಜಸ್ಸುಳ್ಳದ್ದು ಅವನು ಬೆಲೆಯುಳ್ಳ ವಸ್ತ್ರಾಭರಣಗಳಿಂದ ವಿಭೂಷಿತನಾಗಿದ್ದನು ಅವನನ್ನು ನೋಡಿ ಅವನ ಗುರುತು ಹತ್ತಿತೋ ಎಂಬಂತೆ ನಮ್ಮ ಮೂವರೂ ವೀರರು ಲಜ್ಜಿತರಾದರು ಆಗ ಆ ವೀರಪುಂಗವನು ಅವರನ್ನು ಕುರಿತು ಆಶ್ಚರ್ಯದಿಂದ—ಓಹೋ, ವೀರಶಿರೋಮಣಿಗಳೇ, ಇದೇನು? ನಿಮ್ಮಂಥವರ ಗತಿಯು ಹೀಗೆ ಆಗಬೇಕೇ? ಈ ಸಮಯದಲ್ಲಿ ದೇವರು ನನ್ನನ್ನು ಇಲ್ಲಿಗೆ ಬರಮಾಡದಿದ್ದರೆ, ನೀವು ಯವನರ ಕಾರಾಗೃಹವನ್ನು ಪವಿತ್ರಮಾಡಲಿಕ್ಕೆ ಹೋಗುತ್ತಿದ್ದಿರಿ ಎಂದು ನುಡಿದು ತನ್ನ ಜನರಿಂದ ಅವರ ಹೆಡಮುರಿಗೆಯನ್ನು ಬಿಚ್ಚಿಸಿದನು "ಶತ್ರುಗಳ ಸೆರೆಮನೆಯಲ್ಲಿ ಕೊಳೆಯುತ್ತ ಬಿದ್ದಿದ್ದರೂ ನಮಗೆ ಭೂಷಣವಿತ್ತು ಈ ಮಹಾರಾಯನು ಬಂದು ನಮ್ಮನ್ನು ಬಿಡಿಸಿದ್ದೇನೂ ಒಳಿತಾಗಲಿಲ್ಲ"ವೆಂದು ಅವರು ಖಿನ್ನಮನಸ್ಕರಾದರು. ಅವರಿಗೆ ಆ ವೀರಪುಂಗವನ ಉಪಕಾರವು ಅಸಹ್ಯವಾಯಿತು

ಪ್ರಿಯವಾಚಕರೇ, ಹೀಗೆ ಆಗಲು ಕಾರಣವೇನಿರಬಹುದು? ಶತ್ರುಗಳ ಕೈಸೆರೆಯಿಂದ ಮುಕ್ತರಾದ ಅವರು ತಮ್ಮನ್ನು ಬಿಡಿಸಿದ ಆ ವೀರಪುಂಗವನನ್ನು ಕೊಂಡಾಡಬಹುದಾಗಿತ್ತಲ್ಲವೇ? ಲೋಕದಲ್ಲಿ ಸಾಮಾನ್ಯವಾಗಿ ಜನರಿಗೆ ತಮಗೆ ಆಗದವನ ಉಪಕಾರವು ಬೇಡಾಗುತ್ತದೆ ಯಾರನ್ನು ತಾವು ಕ್ಷುದ್ರರೆಂದು ಭಾವಿಸುವರೋ ಪ್ರಸಂಗದಲ್ಲಿ ಅವರಿಂದ ಉಪಕಾರಹೊಂದುವದೆಂದರೆ ಅಥವಾ ಅವರ ದಯಾಗುಣಕ್ಕೆ ಪಾತ್ರರಾಗುವದೆಂದರೆ ತಮಗೆ ಅತ್ಯಂತಲಾಂಛನಾಸ್ಪದವಾದದ್ದೆಂದು ಬಹುಜನರ ತಿಳುವಳಿಕೆಯಿರುತ್ತದೆ ಆದರಂತೆ ನಮ್ಮ ಈ ಮೂವರು ವೀರರ ಸ್ಥಿತಿಯಾಗಿತ್ತು

ಆ ವೀರ ನರಪುಂಗವನು ವಿಜಯನಗರದ ಸಾಮ್ರಾಜ್ಯದಲ್ಲಿ ಒಬ್ಬ ಪಾಳಯಗಾರನು, ಅವನಿಗೆ ರಾಮನಾಯಕನೆಂದು ಅನ್ನುತ್ತಿದ್ದರು. ಅವನು ಅತ್ಯಂತ ಪರಾಕ್ರಮಶಾಲಿಯಿದ್ದನು ಅವನು ದುರ್ಗದಲ್ಲಿ ಬಹಳ ದರ್ಪವನ್ನಿಟ್ಟಿದ್ದನು. ತನ್ನ ಸಾಮರ್ಥ್ಯದ ಬಗ್ಗೆ ಅವನಲ್ಲಿ ವಿಶೇಷವಾಗಿ ಅಭಿಮಾನವು ಇತ್ತು. ನಿಜವಾಗಿ

ನೋಡಿದರೆ ಅವನು ಅಂಥ ಪೌರುಷಶಾಲಿಯೂ ಆಗಿದ್ದನು ಆದರೆ ಅವನ ಈ ಬಿಂಕದ ವರ್ತನವು ಅವನ ಸರಿಕರಾದ ಪಾಳೆಯಗಾರರಿಗೆ ಸರಿದೋರುತ್ತಿದ್ದಿಲ್ಲ. ಆ ಬಗ್ಗೆ ಅವರು ಅವನೊಡನೆ ಮೇಲಿಂದಮೇಲೆ ವಾದಮಾಡುತ್ತಿದ್ದರು. ಹೀಗೆ ವಾದವ ಮಾಡುವವರಲ್ಲಿ ನಮ್ಮ ಈ ಮೂವರು ವೀರರೂ ಸಮಾವಿಷ್ಟರಾಗಿದ್ದರು. ಕಿಂಬಹುನಾ ಇವರೇ ಅಗ್ರಗಣ್ಯರೆಂದು ಹೇಳಿದರೆ ನಡಿಯಬಹುದಾಗಿತ್ತು. ರುದ್ರದೇವ, ಪ್ರತಾಪ, ಪ್ರಹಾರೇಶ್ವರೆಂಬ ಈ ಮೂವರು ರಾಮನಾಯಕನನ್ನು ಜರೆಯುತ್ತ ಅವರಿಗಿಂತ ತಾವು ಶ್ರೇಷ್ಠರೆಂಬ ಭಾವವನ್ನು ವ್ಯಕ್ತಗೊಳಿಸುತ್ತಿದ್ದರು ಇಷ್ಟೇ ಅಲ್ಲ, ಇವರು ಅವನನ್ನು ಒಂದು ಪ್ರಸಂಗದಲ್ಲಿ ಅವಮಾನಗೊಳಿಸಿ ತಮ್ಮ ಪ್ರೌಢಿಮೆಯನ್ನು ಸ್ಥಾಪಿಸಿಕೊಂಡಿದ್ದರು ರಾಮನಾಯಕನಾದರೂ ಪರಮತೇಜಸ್ವಿಯಾದ್ದರಿಂದ ಪ್ರಸಂಗಬಂದಾಗ ಇವರ ಕುನಸು ತೀರಿಸಿಕೊಳ್ಳಬೇಕೆಂದು ಆ ಸಿಟ್ಟನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ನಡೆಯುತ್ತಿದ್ದನು.

ಈ ದಿವಸ ನಾಯಕನು ನಿಯಮಿತ ಪರಿವಾರದೊಡನೆ ಯಾವದೋ ಒಂದು ಮಹತ್ವದ ಕೆಲಸದಸಲುವಾಗಿ ವಿಜಯನಗರಕ್ಕೆ ಹೊರಟಿದ್ದನು ನಮ್ಮ ಆ ತ್ರಿವರ್ಗವೀರಮಂಡಲವೂ ವಿಜಯನಗರಕ್ಕೆ ಹೊರಟಿತ್ತು. ಪರಸ್ಪರರ ಕೆಲಸದ ಕಾರಣಗಳುಮಾತ್ರ ಬೇರೆ ಬೇರೆ ಒಬ್ಬರು ಹೋಗುವ ಸುದ್ದಿ ಮತ್ತೊಬ್ಬರಿಗಿದ್ದಿಲ್ಲ ಆದರೆ ಕಾರಣಾಂತರದಿಂದ ಪರಿವಾರವರ್ಜಿತರಾದ ನಮ್ಮ ಆ ವೀರತ್ರಯಿಯು ಶತ್ರುಗಳ ಕೈಗೆಬಿದ್ದು ಪೇಚಾಡುತ್ತಿರಲು, ಮೇಲೆ ಹೇಳಿದಂತೆ ರಾಮನಾಯಕನು ತನ್ನ ಪರಿವಾರದೊಡನ ಅಲ್ಲಿಗೆ ಒಂದು ಶತ್ರುಗಳನ್ನು ಹೊಡದೋಡಿಸಿ ಮೇಲೆ ಹೇಳಿದಂತೆ ಆ ವೀರತ್ರಯಿಯನ್ನು ಬಿಡಿಸಿದನು

ದುರಭಿಮಾನ ಪೀಡಿತರಾದ ಆ ನಮ್ಮ ಮೂವರು ವೀರರು ಇದಕ್ಕಾಗಿ ಮನದಲ್ಲಿ ಬಹಳ ನೊಂದುಕೊಂಡರು ಇಷ್ಟು ದಿವಸಗಳವರೆಗೆ ತಾವು ಗಳಿಸಿದ ಪೌರುಷವು ಈ ದಿವಸ ಒಂದೇ ಕ್ಷಣದಲ್ಲಿ ಹಾನಿಯಾದಂತಾದ್ದರಿಂದ ಅವರ ಮನಸ್ಸು ಅದೇ ವಿಷಯದಲ್ಲಿ ಗುಂಗಾಗಿಬಿಟ್ಟಿತು. ಅವರು ರಾಮನಾಯಕನನ್ನು ಪಿಳಿಪಿಳಿ ನೋಡುತ್ತ ನಿಂತುಬಿಟ್ಟರೇ ಹೊರತು, ಅವನೊಡನೆ ಹ್ಯಾಗೆ ವ್ಯವಹರಿಸಬೇಕೆಂಬ ಹವಣಿಕೆಗೆ ಹೋಗಲಿಲ್ಲ ಮಾನಭಂಗವಾಯಿತೆಂದು ಗ್ರಹಿಕೆಯಾದ ಮನುಷ್ಯರ ಸ್ಥಿತಿಯು ಹೀಗಾಗುವದು ಸ್ವಾಭಾವಿಕವಾಗಿದೆ ಚಾಣಾಕ್ಷನಾದ ರಾಮನಾಯಕನು ಕೂಡಲ ಅವರ ಮನೋಭಾವವನ್ನು ಕಂಡು ಒಡನೆ ಅವರನ್ನು ಕುರಿತು.—

ರಾಮನಾಯಕ—ಮಿತ್ರರೇ, ನನ್ನ ಆಗಮನದಿಂದ ನಿಮಗೆ ಸಮಾಧಾನವಾದಂತೆ ತೋರಲಿಲ್ಲ ಶತ್ರುಗಳಿಂದ ಆದ ಅಪಮಾನವನ್ನು ಒಂದುವೇಳೆ ಸಹಿಸಿದರೂ ಸಹಿಸಬಹುದು ನನ್ನಿಂದಾದ ಈ ಉಪಕಾರವನ್ನು ಸಹಿಸಲಾರದವರಾದಂತೆ ನಿಮ್ಮ ಮನೋಭಾವದಿಂದ-ವರ್ತನದಿಂದ ವ್ಯಕ್ತವಾಗುತ್ತದೆ ಈ ಮಾತು ನಿಮ್ಮ ದೃಷ್ಟಿಯಿಂದ ಹೇಗೇ ಇರಲಿ, ನನ್ನ ದೃಷ್ಟಿಯಿಂದಮಾತ್ರ ತಪ್ಪೆಂದು ತೋರುತ್ತದೆ ಯಾಕಂದರೆ ನಾವೂ ನೀವೂ ಸಮಾನಸ್ಕಂದರು. ಒಬ್ಬ ಸಾಮ್ರಾಜ್ಯಾಧಿಪತಿಯ ಆಳಿಕೆಗೆ ಒಳಪಟ್ಟವರು ಪ್ರಸಂಗ ಬಂದಾಗ ನನ್ನ ನೆರವು ನಿಮಗೆ ಬೇಕು, ನಿಮ್ಮ ನೆರವು ನನಗೆ ಬೇಕು ಹೀಗಿದ್ದು, ನೀವು ಪರಕೀಯ ಶತ್ರುಗಳಾದ ಆ ಮುಸುಂಡಿಗಳಿಗಿಂತ ನನ್ನನ್ನು ಕಡೆಯಾಗಿ ಭಾವಿಸುತ್ತೀರಿ, ಇದಿಲ್ಲಿಯ ನ್ಯಾಯವು? ನಮ್ಮ ನಿಮ್ಮಲ್ಲಿ ಜನ್ಮಸಿದ್ಧವಾದ ದ್ವೇಷವಿಲ್ಲ, ಇಲಿ-ಬೆಕ್ಕು, ಕುದುರೆ ಹಾಗು ಎಮ್ಮೆ ಇವುಗಳಲ್ಲಿರುವಂತೆ ನಮಗೂ ನಿಮಗೂ ಸ್ವಭಾವಸಿದ್ಧ ಶತ್ರುತ್ವವಿಲ್ಲವಷ್ಟೆ, ಮನುಷ್ಯಸ್ವಭಾವಕ್ಕನುಸರಿಸಿ ಒಮ್ಮೆ ನನ್ನಿಂದ ತಪ್ಪಾಗಬಹುದು, ಮತ್ತೊಮ್ಮೆ ನಿಮ್ಮಿಂದ ತಪ್ಪಾಗಬಹುದು, ಆ ಪ್ರಸಂಗಗಳಲ್ಲಿ ಉಭಯತರಲ್ಲಿ ವೈಮನಸ್ಯವೂ ಹೆಚ್ಚಬಹುದು ಆದರೆ ಅದು ಎಷ್ಟರಮಟ್ಟಿಗೆ, ಆ ಎರಡುದಿವಸಗಳು ಕಳೆದು ಹೋಗುವವರೆಗಷ್ಟೇ ಅಲ್ಲವೆ? ಮುಂದೆ ಸುಪ್ರಸಂಗಗಳಿಂದ ನಮ್ಮ ನಿಮ್ಮಲ್ಲಿ ಸ್ನೇಹವು ಬೆಳೆಯಬಾರದೇಕೆ? ನನಗಾದರೂ ಮೊದಲು ನಿಮ್ಮಂತೆಯೇ ದುರಭಿಮಾನಮೂಲವಾದ ತಿಳುವಳಿಕೆಯಿತ್ತು ಆದರೆ ಇಂದು ನೀವು ಅಕಸ್ಮಾತ್ ಶತ್ರುಗಳ ವಿಪತ್ತಿಗೆ ಗುರಿಯಾಗಿ ನನ್ನ ಪರಾಕ್ರಮಕ್ಕೆ ಫಲಾಂಶರೂಪದಿಂದ ನನ್ನ ಮುಂದೆ ನಿಂತುಕೊಂಡಾಗ ನಿಮ್ಮ ಸ್ಥಿತಿಯನ್ನು ನೋಡಿ ನನ್ನ ಮೊದಲಿನ ಆ ಸ್ವಭಾವವು ಬದಲಿಸಿಹೋಯಿತು ಈಗ ನಾನು ಅಂತಃಕರಣಪೂರ್ವಕವಾಗಿ ನಿಮ್ಮ ಸ್ವಾಗತವನ್ನು ಮಾಡುತ್ತೇನೆ ''

ಈ ಮೇರೆಗೆ ರಾಮನಾಯಕನ ಸರಸಭಾಷಣವನ್ನು ಕೇಳಿ ಆ ಮೂವರ ದುರಭಿಮಾನವು ಇಳಿದು ಹೋಯಿತು ಅವರು ಪಶ್ಚಾತ್ತಾಪಪಡಲಾರಂಭಿಸಿದರು, ಅವರ ಮುಖಗಳ ಮೇಲೆ ಒಂದುಬಗೆಯ ಸಮಾಧಾನದ ಕಳೆಯು ಮಿನುಗಹತ್ತಿದ ಗಿತು. ಆಗ ರುದ್ರದೇವನು ಮುಂದರಿದು ರಾಮನಾಯಕನನ್ನು ಅಭಿನಂದಿಸಿ—ನಾಯಕಾ, ನಾವೂ ನಮ್ಮ ಮನಸ್ಸಿನ ಪ್ರಮಾದವನ್ನು ಬಿಡಲೊಲ್ಲೆವು ಇನ್ನು ಮುಂದೆ ನಾವೂ ನೀನೂ ಅಖಂಡ ಸ್ನೇಹಿತರಾಗಿರೋಣ, ಎಂದು ನುಡಿಯಲು ಪ್ರಹಾರೇಶ್ವರ-ಪ್ರತಾಪದೇವ ಇವರಿಬ್ಬರೂ ಆದಕ್ಕೆ ತಲೆಯನ್ನು ಅಲ್ಲಾಡಿಸಿ

ಸಮ್ಮತಿಯನ್ನು ಕೊಟ್ಟರು" ಆಗ ಆ ನಾಲ್ವರ ಮನಸ್ಸಿನ ಕಲ್ಪನಾತರಂಗಗಳು ಒಮ್ಮೆಲೇ ಅಡಗಿ ಅವರಿಗೆ ವಿಲಕ್ಷಣ ಆನಂದವಾಯಿತು. ಅವರು ಈ ಅಕಲ್ಪಿತ ಸ್ನೇಹದಿಂದ ಬದ್ಧರಾಗಿ ವಿಜಯನಗರದ ಕಡೆಗೆ ಸಾಗಿದರು.

## ೨ನೆಯ ಪ್ರಕರಣ.

### ವಿಜಯನಗರ

— (೧) —

ಉತ್ತರ ಕರ್ನಾಟಕದಲ್ಲ ಕೃಷ್ಣೆಯ ತರುವಾಯ ತುಂಗಭದ್ರೆಯು ದೊಡ್ಡ ನದಿಯೆನಿಸಿಕೊಳ್ಳುವದು ಈ ನದಿಯು ಶೃಂಗೇರಿಯ ನೆರೆಯಲ್ಲಿ ಹುಟ್ಟಿ ಈಶಾನ್ಯ ವಾಹಿನಿಯಾಗಿ ಹರಿದು ಕೃಷ್ಣೆಯನ್ನು ಕೂಡಿಕೊಳ್ಳುವದು ಇದರ ದಂಡೆಯ ಮೇಲಿರುವ ದೊಡ್ಡದೊಡ್ಡ ಪಟ್ಟಣಗಳಲ್ಲಿ ವಿಜಯನಗರವು ಪ್ರಾಮುಖ್ಯವಾಗಿತ್ತು.

ಈ ನಗರಿಯ ವೈಭವವನ್ನು ಎಷ್ಟು ವರ್ಣಿಸಿದರೂ ತೀರದು ಇದಕ್ಕೆ ವಿದ್ಯಾನಗರವೆಂಬ ನಾಮಧೇಯವೂ ಇರುವದು ತಪೋನಿಧಿಗಳಾದ ಶ್ರೀವಿದ್ಯಾರಣ್ಯರ ಪುಣ್ಯಪ್ರಭಾವದಿಂದ ಪ್ರಾಣಪ್ರತಿಷ್ಠೆಯನ್ನು ಪಡೆದ ಈ ನಗರದ ತೇಜಸ್ಸು ಕನ್ನಡಿಗರ ಪ್ರಭಾವವನ್ನು ದಶದಿಕ್ಕುಗಳಲ್ಲಿ ಪ್ರಸರಿಸುತ್ತಿರುವದು ಆಗ ಇಲ್ಲಿದಿಗ್ದಂತಿಗಳಾದ ಪಂಡಿತರು ಗೀರ್ವಾಣ ವಿದ್ಯಾವೈಭವವನ್ನು ಬೈಲಿಗಿಡುತ್ತಿದ್ದರು. ಮನೆ-ಮನೆಗೆ ಶಾಸ್ತ್ರಚರ್ಚೆಗಳು-ವೇದಾಂತಾದಿ ಪ್ರವಚನಗಳು ನಡೆಯುತ್ತಿದ್ದವು. ಇದರಿಂದ ಇದಕ್ಕೆ ವಿದ್ಯಾನಗರವೆಂಬ ನಾಮಕರಣವು ಸಾರ್ಥಕವಾಗಿತ್ತು

ಈ ನಗರಕ್ಕೆ ನೈಸರ್ಗಿಕ ಸೌಂದರ್ಯದ ಬೆಂಬಲವೂ ಚನ್ನಾಗಿರುವದು. ಉತ್ತರಭಾಗದಲ್ಲಿ ನಿರ್ಮಲೋದಕದಿಂದ ಮೆರೆಯುವ ತುಂಗಭದ್ರೆಯು, ಮತ್ತು ಬೆಟ್ಟಗಳ ಶ್ರೇಣಿಯು, ಋಷ್ಯಮೂಕಾದಿ ಪರ್ವತಶಿಖರಗಳು, ಇವುಗಳಿಂದ ನಗರದ ಶೋಭೆಯು ಅವರ್ಣನೀಯವಾಗಿತ್ತು, ಇಷ್ಟೇ ಅಲ್ಲ, ಈ ನಗರಿಯ ಪೂರ್ವ ದಕ್ಷಿಣ-ಪಶ್ಚಿಮ ದಿಟ್ಟುಗಳ ಪ್ರದೇಶಗಳಲ್ಲಿ ನೆಲ್ಲು ಕಬ್ಬುಗಳ ಬೆಳೆಯು ಸರ್ವದಾ ಇರುವದರಿಂದ ಈ ನಗರಿಯು ಹಸಿರುದುಕೂಲವನ್ನು ಪರಿಧಾನ ಮಾಡಿರುವಂತೆ ಶೋಭಿಸುವದು

ಇಂತೊಪ್ಪುವ ಈ ನಗರದ ಪರಿಘವು ಬಹು ದೀರ್ಘವಾಗಿತ್ತು, ಇದರ ಭರಭರಾಟೆಯ ಕಾಲದಲ್ಲಿ ೩೦ಲಕ್ಷ ಜನವಸತಿಯು ಇದರಲ್ಲಿತ್ತು. ಕಡಲೆಯ ಗಣ

ಪತಿ, ಸಾಸುವೆಯ ಗಣಪತಿ ಎಂಬ ಎರಡು ಅದ್ಭುತ ಶಿಲಾಪ್ರತಿಮೆಗಳು ಈ ನಗರ ಭರಾಟೆಯ ಕಾಲದಲ್ಲಿ ಕೊರೆಯಲ್ಪಟ್ಟವು. ಮುಖ್ಯವಾಗಿ ಈ ನಗರದ ರಾಯರು ಕಲಾಕೌಶಲ್ಯಕ್ಕೂ-ಅಧ್ಯಯನಕ್ಕೂ ಹೆಚ್ಚು ಉತ್ತೇಜನ ಕೊಡುತ್ತಿದ್ದುದರಿಂದ ಬಹು ಜನ ಕಲಾವಂತರು ಅವರನ್ನು ಆಶ್ರಯಿಸಿದ್ದರು. ಒಬ್ಬನು ಒಂದು ಮೂರ್ತಿಯನ್ನು ರುಕ್ಷವಾದ ಬಂಡೆಯಲ್ಲಿ ಕೊರೆಯಲು, ಇನ್ನೊಬ್ಬನು ಅದಕ್ಕೂ ಹೆಚ್ಚು ಸುಂದರವಾದ ಮೂರ್ತಿಯನ್ನು ಕೊರೆದಿಡುವನು. ಹೀಗೆ ಈ ಕಲಾವಂತರ ಮೇಲಾಟದಿಂದ ಈ ನಗರಿಯಲ್ಲಿ ಮೇಲೆ ಹೇಳಿದ ಎರಡು ಸಿದ್ಧಿವಿನಾಯಕಮೂರ್ತಿಗಳಲ್ಲದೆ ಬಡವಿಯಲಿಂಗ, ಉಗ್ರನರಸಿಂಹ, ಉದ್ದನ್ನವೀರಭದ್ರ ಮುಂತಾದ ಅದ್ಭುತ ಮೂರ್ತಿಗಳು ಕೊರೆಯಲ್ಪಟ್ಟಿರುವವು ಈ ಮೂರ್ತಿಗಳ ಕೀರ್ತಿಯಿಂದ ವಿಜಯನಗರವು ಆಶ್ಚರ್ಯಕರವಾದ ಪಟ್ಟಣವೆಂಬಹೆಸರನ್ನು ಹೊಂದಿತು.

ಈ ಮಹಾನಗರಿಗೆ ಏಳು ಪ್ರಾಕಾರಗಳಿದ್ದವು. ಮೊದಲಿನ ಮೂರು ಪ್ರಾಕಾರಗಳಲ್ಲಿ ಕೃಷಿವಲರ ವಾಸ್ತವ್ಯ, ಇವರು ನಾನಾಬಗೆಯ ಪೈರುಗಳನ್ನು ಬೆಳೆಯಿಸಿ ಸಾಮ್ರಾಜ್ಯದ ಧನಾಭಿವೃದ್ಧಿಯನ್ನು ಮಾಡುತ್ತಿದ್ದರು ಉಳಿದ ಪ್ರಾಕಾರಗಳಲ್ಲಿ ಎರಡು ಪ್ರಾಕಾರಗಳು ಸಾಮಾನ್ಯಜನರ ಅಂದರೆ ಸುಖವಸ್ತಿಗಾರರ ಮಂದಿರಗಳಿಂದ ತುಂಬಿಹೋಗಿದ್ದವು. ಇನ್ನುಳಿದ ಎರಡು ಬಹು ದೊಡ್ಡ ಪ್ರಾಕಾರಗಳಲ್ಲಿ ಸೌಂದರ್ಯದ ರಾಶಿಯೋ, ಸೌದಾಮಿನಿಯ ಹೊಳಪೋ ಎಂಬಂತೆ ತೋರುವ ರಾಜಮಂದಿರಗಳು ಒಪ್ಪುತ್ತಿದ್ದವು ಮಂತ್ರಿಗಳು, ಸೇನಾನಾಯಕರು, ನ್ಯಾಯಾಧೀಶರು ಇವರೇ ಮೊದಲಾದ ಅಧಿಕಾರಿಗಳು ಆರನೇ ಪ್ರಾಕಾರದಲ್ಲಿ ವಾಸಿಸುತ್ತಿದ್ದರು. ಇವರ ಮನೆಗಳಲ್ಲದೆ ಹಲವು ಸುಂದರ ದೇವಮಂದಿರಗಳು, ಟಂಕಸಾಲೆ, ಅಶ್ವಶಾಲೆ, ಗಜಶಾಲೆ, ಕಾಲಾಳುಗಳ ನಿಲಯ ಮೊದಲಾದವುಗಳು ಒಂದಕ್ಕಿಂತಲೂ ಒಂದು ಆಶ್ಚರ್ಯವನ್ನುಂಟುಮಾಡುತ್ತಿದ್ದವು. ಏಳನೆಯ ಪ್ರಾಕಾರದಲ್ಲಿ ರಾಯರ ಮಂದಿರಗಳಿದ್ದವು ಇವುಗಳಲ್ಲಿ ರಾಣೀವಾಸದ ಮಂದಿರಗಳ ಸೊಬಗು ಎಲ್ಲಕ್ಕೂ ಶ್ರೇಷ್ಠವಾಗಿತ್ತು

ವಿಜಯನಗರದಲ್ಲಿರುವ ಅಸಂಖ್ಯ ದೇವಸ್ಥಾನಗಳಲ್ಲಿ ನೋಡತಕ್ಕಂಥ ಕಟ್ಟಡಗಳೆಂದರೆ ವಿಜಯವಿಠ್ಠಲ ಹಾಗು ವಿರೂಪಾಕ್ಷೇಶ್ವರರ ದೇವಾಲಯಗಳು ರಾಯರು ಈ ಎರಡು ಕಟ್ಟಡಗಳ ವಿಷಯವಾಗಿ ತೋರಿಸಿದಷ್ಟು ಆದರವನ್ನು ಇನ್ನಾವ ಕಟ್ಟಡಗಳಿಗೂ ತೋರಿಸಿಲ್ಲವೆಂಬದನ್ನು ಇವು ಘಂಟಾಘೋಷವಾಗಿ ಹೇಳುತ್ತವೆ. ಇವುಗಳಲ್ಲಿ ವಿರೂಪಾಕ್ಷೇಶ್ವರನ ಮಂದಿರವು ಮುಖ್ಯವಾದದ್ದು.

ಇದರ ಭವ್ಯಸ್ವರೂಪವು ಇದುವರೆಗೂ ಅಚ್ಚಳಿಯದಂತೆ ಕಂಗೊಳಿಸುತ್ತಿರುವದು.

ಈಮೇರೆಗಿರುವ ಈ ಭಾಗ್ಯಶಾಲೀ ನಗರದಲ್ಲಿ ಒಂದುದಿನ ಮುಚ್ಚಂಜೆಯು ಮುಂದೆ ಒಬ್ಬ ದೂತನು ಕಾಲಿಟ್ಟನು ಅವನು ಮೊದಲನೇ ಪ್ರಾಕಾರದ ಹೆಬ್ಬಾಗಿಲಲ್ಲಿ ಕಾಲಿಡಲು ಕಾವಲುಗಾರರು ಅವನನ್ನು ತಡೆದರು ಆಗ ಆ ದೂತನು ಬೆದರದ ತನ್ನ ಒಳಿಯಲ್ಲಿದ್ದ ಯಾವದೋ ಒಂದು ಗುರುತನ್ನು ತೋರಿಸಿದನು ಕಾವಲುಗಾರರು ಒಳಗೆ ಹೋಗಗೊಟ್ಟರು. ಹೀಗೆ ಅವನು ಕಾವಲುಗಾರರು ತಡೆದಾಗೆಲ್ಲ ಆ ಗುರ್ತನ್ನು ತೋರಿಸುತ್ತ ಒಂದರಹಿಂದೊಂದರಂತೆ ೩ ಪ್ರಾಕಾರಗಳನ್ನು ದಾಟಿ, ೪ನೇ ಪ್ರಾಕಾರದಲ್ಲಿ ಕಾಲಿಟ್ಟನು ಆದರೆ ಅಲ್ಲಿಯ ಕಾವಲುಗಾರನು ಬಲು ಹಟದ ಮನುಷ್ಯನಿದ್ದದರಿಂದ ದೂತನು ಎಷ್ಟು ಹೇಳಿದರೂ ಅವನನ್ನು ಒಳಗೆ ಬಿಡದಾದನು ಕಡೆಗೆ ದೂತನು ಬೇಸತ್ತನು ಆಗ ಅವನು ಒಳಗೆ ಹೋಗುವ ಉಪಾಯವನ್ನು ಬಿಟ್ಟು ಅಲ್ಲಿಂದ ಹಿಂದಿರುಗಿದನು ಮುಂಜಾವಿನಿಂದ ಸಂಜೆಯುವರೆಗೆ ಒಂದೇಸವನೆ ದಾರೀ ನಡೆದದ್ದರಿಂದ ದೂತನು ಹೈರಾಣಾಗಿದ್ದನು ಅವನು ಒಂದು ಬಗೆಯ ಉತ್ಸಾಹದಿಂದ ದಣುವನ್ನು ಲೆಕ್ಕಿಸದೆ ಇದುವರೆಗೆ ನಡೆದಿದ್ದನು, ಆದರೆ ಮೇಲೆ ಹೇಳಿದಂತೆ ಕಾವಲುಗಾರನು ಅವನನ್ನು ತಡೆದು, ಅವನ ಉತ್ಸಾಹವನ್ನು ಭಂಗಪಡಿಸಿದ್ದರಿಂದ ದೂತನಿಗೆ ಮುಂದಕ್ಕೆ ಹಜ್ಜೆ ಇಡದಹಾಗಾಯಿತು ಒಂದು ಕ್ಷಣಕ್ಕಿಂತ ಮೊದಲು ಅವನಲ್ಲಿದ್ದ ಶಕ್ತಿಯೆಲ್ಲ ಈಗ ನಶಿಸಿಹೋಯಿತು. ಕಾರ್ಯಕ್ಕೆ ಉತ್ಸಾಹವೇ ಮೂಲಕಾರಣವಾದುದರಿಂದ ಉತ್ಸಾಹಭಂಗವಾದ ಮನುಷ್ಯನ ಸ್ಥಿತಿಯು ಹೀಗೆ ಆಗುವದು ಸ್ವಾಭಾವಿಕವೇ ಆಗಿರುವದು!

ವ್ಯಕ್ತಿಯು ಸಣ್ಣದೇ ಇರಲಿ, ದೊಡ್ಡದೇ ಇರಲಿ, ಪ್ರಸಂಗ ಬಂದಮೇಲೆ ಅದಕ್ಕನುಸರಿಸಿ ನಡೆಯಲೇಬೇಕಾಗುವದು ಅದರಂತೆ ಪ್ರಸ್ತುತದ ದೂತನು ಎಲ್ಲಿಯಾದರೂ ಸ್ಥಳನೋಡಿ ಮಲಗಿಕೊಳ್ಳುವಹವಣಿಕೆಯನ್ನು ನಡಿಸಿದನು. ಆದರೆ ಅವನಿಗೆ ಆ ನಗರಿಯಲ್ಲಿ ನಿರುಪದ್ರವಿಯಾದ ಸ್ಥಳ ದೊರಯುವದು ದುರ್ಲಭವಾಯಿತು ಆಗ ರಾತ್ರಿಯು ಮೂರು ತಾಸಿನವರೆಗೆ ಒಂದದ್ದರಿಂದ ಆತನು ಅತ್ತಿತ್ತ ಸುಳಿದಾಡಿ ಹೊತ್ತುಗಳೆಯುವಹಾಗಿದ್ದಿಲ್ಲ ಆದ್ದರಿಂದ ಅವನು ಬೇಗನೆ ತುಂಗಭದ್ರೆಯ ಒಂದು ವಿಶಾಲವಾದ ಕಾಲುವೆಗೆ ಹೋಗಿ ಕೈಕಾಲು ತೊಳೆದುಕೊಂಡು-ಹೊಟ್ಟೆತುಂಬ ನೀರು ಕುಡಿದು ಎಲ್ಲಿಯಾದರೊಂದು ಹಾಳುದೇಗುಲ ಸಿಕ್ಕರೆ ಒರಗಿಕೊಳ್ಳಬೇಕಂದು ಮತ್ತೆ ಮತ್ತೆ ಆಲೋಚಿಸಿ ನಡೆದನು. ಮನುಷ್ಯನ ದೇಹದಲ್ಲಿ ನಾಡಿಗಳಿರುವಂತೆ ವಿಜಯನಗರದಲ್ಲಿ ನೀರಿನ ಕಾಲುವೆಗಳು ಇದ್ದದರಿಂದ ನೀರಡಿಕೆ

ಯನ್ನು ಹೋಗಲಾಡಿಸಿಕೊಳ್ಳುವದಕ್ಕೆ ಆ ದೂತನಿಗೆ ಜಡವಾಗಲಿಲ್ಲ ಆದರೆ ಅವನ ಅಪೇಕ್ಷೆಯಂತೆ ಹಾಳುದೇಗುಲವು ಮಾತ್ರ ಅವನ ದೃಷ್ಟಿಗೆ ಬೀಳಲಿಲ್ಲ. ಈಗಿನ ಕಾಲದ ವಿಜಯನಗರವಾಗಿದ್ದರೆ ಬೇಕಾದಷ್ಟು ಮುರುಕ ದೇವಾಲಯಗಳು ಸಿಗುತ್ತಿದ್ದವು, ಆದರೆ ಆ ಯೌವನಾವಸ್ಥೆಯ ಏರಿಕೆಯ ಕಾಲದ ಪಟ್ಟಣದಲ್ಲಿ ಸಿಗುವ ಬಗೆಯೆಂತು? ಮನುಷ್ಯನಿಗಾಗಲಿ, ಪಟ್ಟಣಕ್ಕಾಗಲಿ, ರಾಷ್ಟ್ರಕ್ಕಾಗಲಿ ಅವಸ್ಥಾತ್ರಯಗಳು ಪರ್ಯಾಯದಿಂದ ಇದ್ದೇ ಇರುವವು ಕಾಲಮಾಹಾತ್ಮ್ಯವು ಯಾರನ್ನೂ ಬಿಟ್ಟಿರುವದಿಲ್ಲ ಅಂತೇ ದೊಡ್ಡವರು "ಕಾಲಾಯ ತಸ್ಮೈನಮಃ" ಎಂದು ನಮಸ್ಕರಿಸುವರು

ಕಡೆಗೆ ನಿರ್ವಾಹವಿಲ್ಲದೆ ಆ ದೂತನು ಒಂದು ಗಿಡದ ಬುಡಕ್ಕೆ ಜನರ ಸುಳಿದಾಟವಿಲ್ಲದ ಒಂದು ಹುಲ್ಲು ಗುಡಿಸಲವನ್ನು ಕಂಡು ತಡವಿಲ್ಲದೆ ಅದರಲ್ಲಿ ಹೊಕ್ಕನು, ಗುಡಿಸಲು ಚಿಕ್ಕದಾಗಿದ್ದರೂ ಬೆಚ್ಚಗಿತ್ತು, ದೂತನು ಹೆಚ್ಚಿನ ವಿಚಾರವನ್ನೇನೂ ಮಾಡದೆ ಮೈಮೇಲಿದ್ದ ಹಚ್ಚಡವನ್ನು ಬಿಚ್ಚಿ ಅರ್ಧ ಬುಡಕ್ಕೆ ಅರ್ಧ ಮೈಮೇಲೆ ಆಗುವ ಹಾಗೆ ಹೊತ್ತುಕೊಂಡು ನೆಲದಮೇಲೆ ಒರಗಿಕೊಂಡನು; ಮಲಗಿದ್ದೊಂದೇ ತಡ, ಅವನಿಗೆ ಗಡದ್ದು ನಿದ್ದೆ ಹತ್ತಿತು.

ಮಧ್ಯರಾತ್ರಿಯು ಮೀರಿದ ಬಳಿಕ ಅವನಿಗೊಂದು ಸ್ವಪ್ನಬಿದ್ದಿತು. ಅದರಲ್ಲಿ ತಾನು ರಾಯರ ಕಡೆಗೆ ಹೋದಂತೆಯೂ, ಅವರ ಮುಂದೆ ತಾನು ತಂದಿರುವ ಗುಪ್ತಸುದ್ದಿಯನ್ನು ಹೇಳಿದಂತೆಯೂ ಅದಕ್ಕೆ ರಾಯರ ಅಭಿವಚನವು ಸಿಕ್ಕಂತೆಯೂ ಕಂಡನು ಇಂಥ ಅಪೂರ್ವ ಪ್ರಸಂಗದಿಂದ ಸ್ವಪ್ನದಲ್ಲಿಯೇ ಅವನ ಮೈಯು ಉಬ್ಬಿತು ಮಲಗುವ ಕಾಲಕ್ಕೆ ಅವನು ಎಷ್ಟು ವ್ಯಸನತಾಳಿ ಮಲಗಿದ್ದನೋ ಅಷ್ಟು ಆನಂದವು ಈಗ ಸ್ವಪ್ನದಲ್ಲಿ ಅವನಿಗೆ ಆಯಿತು ಅದೇ ಸ್ವಪ್ನದಲ್ಲಿ ಅವನು ರಾಯರಿಂದ ಅಭಿವಚನ ತಕ್ಕೊಂಡು ಮುಂದೆ ಹೊರಟಂತಾಗಲು ದಾರಿಯಲ್ಲಿ ಅವನಿಗೆ ಒಂದು ಭಯಂಕರ ನೋಟವು ಕಣ್ಣಿಗೆ ಬಿತ್ತು ಆಗ ಅವನು ಅಂಜಿ ಚಿಟ್ಟನೇ ಚೀರಿದನು ಸ್ವಪ್ನದಲ್ಲಿ ವಿಪತ್ತು ಬಂದಕೂಡಲೆ ಮನುಷ್ಯನಿಗೆ ಎಚ್ಚರವಾಗುತ್ತಿರುತ್ತದೆ. ಅದರಂತೆ ಅವನಿಗೂ ಗಾಬರಿಯಿಂದ ಎಚ್ಚರಿಕೆಯಾಯಿತು. ಅವನು ಕಕ್ಕಾವಿಕ್ಕಿಯಾಗಿ ಕಣ್ಣು ತೆರೆದು ನೋಡಲು, ನಿಜವಾಗಿಯೇ ಅವನ ಮುಂದೆ ಮೂವರು ಟೊಣಪರು ನಿಂತಿದ್ದರು!

ನೋಡನೋಡುವಷ್ಟರಲ್ಲಿ ಆ ಟೊಣಪರು ಅವನನ್ನು ಹೆಡಮುರಿಗೆ ಕಟ್ಟಿದರು. ದೂತನು ಹೌಹಾರಿ ಹೋದನು. ಹೀಗೆ ತನ್ನನ್ನು ಬಿಗಿಯುವವರು

ಯಾರೆಂಬದು ಅವನಿಗೆ ತಿಳಿಯದೆ ಹೋಯಿತು ಕ್ಷಣದಲ್ಲಿ ಆ ಟೊಣಪರು ಅವನನ್ನು ಅಲ್ಲಿಂದ ಎಬ್ಬಿಸಿದರು. ಹಾ, ಹಾ ಅನ್ನುವಷ್ಟರಲ್ಲಿ ಅವನನ್ನು ಹೊತ್ತುಕೊಂಡೊಯ್ದು ಎಲ್ಲಿಯೋ ಒಂದು ಗುಪ್ತವಾದ ಸ್ಥಳದಲ್ಲಿರಿಸಿದರು ಪ್ರಿಯವಾಚಕರೇ, ನೋಡಿದಿರಾ? ಪ್ರಸಂಗಗಳು ಹೇಗೆ ಬರುತ್ತವೆಂಬದನ್ನು? ಯಾವ ದೂತನು ತನ್ನ ಉದ್ದಿಷ್ಟಹೇತುವನ್ನು ಸಾಧಿಸಿಕೊಳ್ಳುವದಕ್ಕಾಗಿ ಧಾಪಿಸಿ ಬಂದನೋ ಆ ದೂತನು ಪರಾಧೀನನಾಗಿ ತನ್ನ ಜೀವಿತವು ಕೂಡಾ, ನಿಶ್ಚಿತವಿಲ್ಲದೆ ಶತ್ರುಗಳ ಸೆರೆಯೊಳಗೆ ಬಿದ್ದನು. ಹಾಯ್! ಹಾಯ್! ಮನುಷ್ಯನ ಅಜ್ಞಾನವೆಷ್ಟು? ತನ್ನ ಗತಿಯು ಮುಂದಿನ ಕ್ಷಣದಲ್ಲಿ ಯಾವಪಥಕ್ಕೆ ಹತ್ತುವದೆಂಬದು ತಿಳಿಯಲಶಕ್ಯವಾಗಿದ್ದರೂ ಪರರನ್ನು ಹಿಂಸೆಪಡಿಸಿ ಸುಖಪಡಬೇಕೆಂಬ ಅವನ ಭ್ರಮೆಯು ಮಾತ್ರ ತಪ್ಪುವದಿಲ್ಲ ಇದೇ ಆಶ್ಚರ್ಯವು! ಇರಲಿ

ಪ್ರಸ್ತುತದಲ್ಲಿ ನಮ್ಮ ದೂತನ ಸ್ಥಿತಿಯೂ ಹೀಗೆಯೇ ಆಯಿತು. ಅವನು ಆ ಕತ್ತಲೆಯ ಕೋಣೆಯಲ್ಲಿ ಕೈಕಾಲುಗಳು ಬಂಧಿಸಲ್ಪಟ್ಟಿರುವಾಗ ಯೋಚಿಸತೊಡಗಿದನೇನಂದರೆ—"ನಾನು ಸ್ವಲ್ಪದರಲ್ಲಿ ಕೆಲಸ ಕೆಡಿಸಿಕೊಂಡೆನು. ನಿನ್ನೆ ನಾನು ವಿಶ್ವಪ್ರಯತ್ನಮಾಡಿ ರಾಯರ ಸನ್ನಿಧಿಯನ್ನು ಸೇರಿದ್ದರೆ ಬಂಗಾರದಂಥ ಕೆಲಸವಾಗುತ್ತಿತ್ತು. ಅದನ್ನು ಬಿಟ್ಟು ನಾನು ಏನೋ ಒಂದು ಮನದಲ್ಲಿ ಆಲೋಚಿಸಿ, ಹುಲ್ಲುಗುಡಿಸಲಿಗೆ ಹೋದದ್ದು ಸರ್ವಥಾ ತಪ್ಪಾಯಿತು ನಾನು ಸ್ವಾಮಿದ್ರೋಹಿಯಾದೆನು. ಶಿವ! ಶಿವ! ಇನ್ನೇನು ಮಾಡಲಿ? ಇನ್ನು ಮುಂದೆ ನಾನು ಸ್ವಾಮಿಯ ಕಾರ್ಯವನ್ನು ಹ್ಯಾಗೆ ಸಾಧಿಸುವೆನು ನನ್ನ ಜೀವದ ಪರವೆಯು ನನಗಿಲ್ಲ, ಆದರೆ ನನ್ನ ಸ್ವಾಮಿಯ ಚಿಂತೆಯು ಮಾತ್ರ ನನ್ನನ್ನು ಚನ್ನಾಗಿ ಬಾಧಿಸುತ್ತಿರುವದು. ನಿಜವಾದ ಸ್ವಾಮಿಭಕ್ತರಿಗೆ ಸ್ವಾಮಿಯ ಸಂರಕ್ಷಣೆಗಿಂತ ಹೆಚ್ಚಿನ ಮಹತ್ವದ ಕೆಲಸವಿನ್ನಾವುದಿರುವದು? ಅಯ್ಯೋ ಸ್ವಾಮಿಯೇ ನಾನು ನಿಮ್ಮನ್ನು ಎಷ್ಟು ಮೋಸಗೊಳಿಸಿದೆನಲ್ಲ! ನಿಮಗೆ ನಾನು ವಚನಕೊಟ್ಟು ಬಂದು, ಇಲ್ಲಿ ಹೀಗೆ ಪರಾಧೀನನಾಗಿ ಬಿದ್ದದ್ದರಿಂದ ನನ್ನಿಂದ ಯಾವ ಮಹತ್ವದ ಕಾರ್ಯವೂ ಸಾಧಿಸದಾಯಿತು. ಇದು ನಿಮಗೆ ತಿಳಿಯುವ ಬಗೆಯಾದರೂ ಹೇಗೆ? ಇಂದು ಬರುವನು, ನಾಳೆಬರುವನು ಎಂದು ನೀವು ಮಾತ್ರ ನನ್ನ ನಿರೀಕ್ಷಣೆ ಮಾಡಿ ಸುಮ್ಮನೆ ಹೈರಾಣಾಗುವಿರಿ!"

ಈ ಪ್ರಕಾರ ಆ ದೂತನು ಬಹುವಿಧವಾಗಿ ಚಿಂತಿಸಿ ಕಡೆಗೆ ಧೈರ್ಯವತಂದುಕೊಂಡು ಅಲ್ಲಿಂದ ಪಾರಾಗಲು ಏನಾದರೂ ಮಾರ್ಗ ದೊರೆಯುವದೋ

ಹೇಗೆಂದು ಸುತ್ತಲೂ ನೋಡಿದನು ಅವನನ್ನು ಸೆರೆಯಿಟ್ಟ ಸ್ಥಳವು ನೆಲಮನೆಯಾಗಿತ್ತು. ಆದರೆ ಮೇಲ್ಗಡೆಯಲ್ಲಿ ಎಲ್ಲಿಯೋ ಒಂದು ಮೂಲೆಯಲ್ಲಿ ಸೂರ್ಯನ ಬೆಳಕು ಕಂಡದ್ದರಿಂದ ಆ ದೂತನಿಗೆ ತುಸ ಧೈರ್ಯವುಂಟಾಯಿತು. ಆಗ ಅವನು ಬಂಧನಗಳನ್ನು ಸಡಿಲಿಸಿಕೊಳ್ಳುವ ಪ್ರಯತ್ನವನ್ನು ನಡಿಸಿದನು. ದೂತನಾದರೂ ಸಾಮಾನ್ಯನಿದ್ದಿಲ್ಲ ಮೈ-ಕೈಯಿಂದ ಧಷ್ಟಪುಷ್ಟನಾಗಿದ್ದನು ಮೇಲಾಗಿ ಅವನಿಗೆ ಈಗ ತನ್ನ ಶಕ್ತಿಸರ್ವಸ್ವವನ್ನು ಉಪಯೋಗಿಸುವ ಪ್ರಸಂಗ ಒಂದದರಿಂದ ಅವನ ಶಕ್ತಿಯು ದ್ವಿಗುಣಿತವಾಯಿತು

ಆ ದೂತನು ಅತ್ಯಂತ ಕಸುವಿನಿಂದ ಒಮ್ಮೆ ಕೈಕೊಡವಿದನು ಆದರೆ ಕೈಗೆ ಬಿಗಿದ ಹಗ್ಗವು ಬಲವಾದದ್ದಿದ್ದದರಿಂದ ಇವನ ಕೈಗೇ ಕಂಡುಬಿದ್ದು ರಕ್ತ ಸುರಿಯಿತಲ್ಲದೆ, ಹಗ್ಗ ಹರಿಯಲಿಲ್ಲ ಆಗ ಅವನು ಅಷ್ಟಕ್ಕೇ ಹತಾಶನಾಗದೆ ಕೈಗೆ ಆದ ನೋವನ್ನು ಲಕ್ಕಿಸದೆ ಮತ್ತೊಮ್ಮೆ ಅದಕ್ಕೂ ಹೆಚ್ಚು ಕಸುವಿನಿಂದ ಕೈಕೊಡವಲು ಆ ಹಗ್ಗದ ಒಂದೆರಡು ಹುರಿಗಳು ಚಟ್ಟ-ಚಟ್ಟೆಂದು ಹರಿದವು. ಅದರಿಂದ ಅವನಿಗೆ ಹೊಸಹುರುಪು ಬಂದು, ಪುನಃ ಕೊಡವಲು, ಕೈಗೆ ಕಟ್ಟಿದ್ದ ಆ ಹಗ್ಗವು ಪೂರಾ ಹರಿದುಹೋಯಿತು. ಬಳಿಕ ಅವನು ಕಾಲಿಗೆ ಕಟ್ಟಿದ ಹಗ್ಗವನ್ನು ಹರಿದುಹಾಕಿ ಹೊರಗೆ ಹೋಗುವದಕ್ಕೆ ಮಾರ್ಗಶೋಧಿಸುವದಕ್ಕಾಗಿ ಎದ್ದುನಿಂತನು. 'ಕೊಲ್ಲುವ ದೇವರಿಗಿಂತ ಕಾಯುವ ದೇವರು ದೊಡ್ಡವನೆಂ''ಬ ನಾಣ್ಣುಡಿಯು ಯಥಾರ್ಥವಿರುವದೆಂಬ ಅನುಭವವು ಆಗ ಆ ದೂತನಿಗೆ ಬಂದಿತು ಅವನು ಬೆಳಕು ಕಾಣುವ ಸ್ಥಳವನ್ನು ಸೂಕ್ಷ್ಮವಾಗಿ ನೋಡಿ ಅಲ್ಲಿಂದಲೇ ಪಾರಾಗಬೇಕೆಂದು ಎಣಿಕೆ ಹಾಕಿದನು ಕರ್ಮ-ಧರ್ಮ ಸಂಯೋಗದಿಂದ, ಆ ಸ್ಥಳವು ಅವಸರ ಪ್ರಸಂಗದಲ್ಲಿ ಕೈದಿಗಳನ್ನು ಮೇಲಿನಿಂದ ಕೆಳಕ್ಕೆ ತಳ್ಳುವ ಬೆಳಕಿಂಡಿಯಾಗಿತ್ತು.

ಹೀಗೆ ಅನುಕೂಲ ಕಾಲ ಒದಗಲು ಆ ದೂತನ ಸಂತೋಷಕ್ಕೆ ಪಾರವೇ ಉಳಿಯಲಿಲ್ಲ ಮನುಷ್ಯನಿಗೆ ಸ್ವಲ್ಪ ಪ್ರತಿಕೂಲ ಕಾಲ ಒದಗಿದಾಗ ದುಃಖವಾಗುವದೂ ತಡವಿಲ್ಲ ಅನುಕೂಲ ಕಾಲ ಒದಗಿದಾಗ ಸಂತೋಷವಾಗುವದೂ ತಡವಿಲ್ಲ. ಅದರಂತೆ ಪ್ರಸ್ತುತದಲ್ಲಿ ಆ ದೂತನಿಗೂ ಆಯಿತು? ಅವನು ತಾನು ಪ್ರತಿಬಂಧದಲ್ಲಿರುತ್ತೇನೆಂಬದನ್ನು ಪೂರಾ ಮರೆತನು. ಆಗ ಅವನು ಆ ಬೆಳಕಿಂಡಿಯೊಳಗಿಂದ ಸಹಜ ಪಾರಾಗಬಹುದೆಂದು ಯೋಚಿಸಿ, ರಾತ್ರಿಯಾಗುವವರೆಗೆ ನಿಶ್ಚಿಂತೆಯಿಂದಿದ್ದನು. ಇವನ ಮನೋಭೀಷ್ಟವನ್ನು ಪೂರೈಸಲಿಕ್ಕೆಂದೋ ಎಂಬಂತೆ ಸೂರ್ಯದೇವನು ತನ್ನ ೧೨ ತಾಸಿನ ಕೆಲಸವನ್ನು ಮುಗಿಸಿ ವಿಶ್ರಾಂತಿಗಾಗಿ ಪಶ್ಚಿ

ಮುಸಾಗರದ ಅಂತರಂಗವನ್ನು ಪ್ರವೇಶಿಸಿದನು. ದಿನಮಣಿಯು ಪ್ರಭೆಯಡಗಲು ಹಕ್ಕಿಪಕ್ಕಿಗಳು ಗೂಬರಿಯಾದ ಲಕ್ಷಣವನ್ನು ತೋರ್ಪಡಿಸುವಂತೆ ಅತ್ತಿಂದ ಇತ್ತ, ಇತ್ತಿಂದ ಅತ್ತ ಹಾರಾಡತೊಡಗಿದವು. ಕಣ್ಣು-ಕಪ್ಪಡಿಗಳ ಗತಿಗಂತೂ ಪ್ರತಿಬಂಧವೇ ಉಳಿಯದಾಯಿತು ಮೆಲ್ಲಮೆಲ್ಲನೆ ಕತ್ತಲವು ಬೀಳತೊಡಗಿತು. ಹಗಲೆಲ್ಲ ದುಡಿದು ಶ್ರಾಂತಗೊಂಡ ಜನರು ಮನೆಯನ್ನು ಸೇರಿ ವಿಶ್ರಾಂತಿಯನ್ನು ಹೊಂದತೊಡಗಿದರು.

ಈ ಕಾಲದ ಮಾರ್ಗಪ್ರತೀಕ್ಷೆಯನ್ನೇ ಮಾಡುತ್ತಿದ್ದ ಆ ದೂತನು ಸುಮಾರು ನಾಲ್ಕುತಾಸು ರಾತ್ರಿಯುವರೆಗೆ ಸುಮ್ಮನಿದ್ದು, ಆಬಳಿಕ ತನ್ನ ಕಾಯಕವನ್ನು ನಡಿಸಿದನು ಅವನನ್ನು ಆ ಕತ್ತಲೆಯ ಕೋಣೆಯಲ್ಲಿ ಹಾಕಿದಬಳಿಕ ಅವನಕಡೆಗೆ ಇದುವರೆಗೆ ಯಾರೂ ಸುಳಿದಿದ್ದಿಲ್ಲ ಅವನನ್ನು ಅಲ್ಲಿ ಸೆರೆಯಿಟ್ಟವರ ಮನಸ್ಸಿನಲ್ಲಿ ಸುಳಿಯಬೇಕೆಂಬ ಇಚ್ಛೆಯೂ ಇದ್ದಿಲ್ಲ ಯಾಕಂದರೆ, ಅವನು ಅನ್ನ-ನೀರುಗಳಿಲ್ಲದೆ ಹಾಗೇ ಮೃತನಾಗಲೆಂದು ಅವರ ಕೋರಿಕೆಯಿತ್ತು. ಆದರೆ ದೈವಸಂಕಲ್ಪವು ಬೇರೆಯಾಗಿದ್ದದರಿಂದ ಆ ಸೆರೆಯಾಳಾದ ದೂತನ ಪ್ರಯತ್ನಗಳೆಲ್ಲ ಕೈಗೂಡುತ್ತ ಬಂದವು. ಅವನು ತಟ್ಟನೆ ಆ ಬೆಳಕಿಂಡಿಯ ಸಲಿಗೆಯನ್ನು ಕಿತ್ತೊಗೆದು, ಕಷ್ಟಬಟ್ಟು ಮೇಲಕ್ಕೆ ಹತ್ತಿದನು ಆಗ ಎಲ್ಲ ಕಾವಲುಗಾರರಿಗೂ ಗಡದ್ದು ನಿದ್ದೆಹತ್ತಿತ್ತು, ಮೇಲಕ್ಕ ಬಂದಬಳಿಕ ಅವನಿಗೆ ಆ ಸ್ಥಳದ ಗುರುತು ಚನ್ನಾಗಿ ಹತ್ತಿತು. ಅವನು ಹಲವು ಸಾರ ಆ ಸ್ಥಳದಲ್ಲ ಅಡ್ಡಾಡಿದ್ದನು ಆದ್ದರಿಂದ ಅವನು ತಡಮಾಡದೆ ಗುಪ್ತದ್ವಾರದ ಕಡೆಗೆ ತಿರುಗಿ ಅಲ್ಲಿಯೂ ಕಾವಲುಗಾರರು ಗಡದ್ದಾಗಿ ಮಲಗಿದ್ದನ್ನು ಕಂಡು ಆ ಬಾಗಿಲಸಿಂದ ಸುರಕ್ಷಿತವಾಗಿ ಪಾರಾದನು. ಬಳಿಕ ಅವನು ಆ ವಿಶಾಲವಾದ ನಗರಿಯಲ್ಲ ಎತ್ತೋ ಮಾಯವಾದನು

# ೩ನೆಯ ಪ್ರಕರಣ.

## ದೂತನ ವೃತ್ತಾಂತ.

ಪ್ರಿಯವಾಚಕರೇ, ಹಿಂದಿನ ಪ್ರಕರಣದಲ್ಲಿ ವಿವರಿಸಿದಂತೆ ವಿಜಯನಗರದಲ್ಲಿ ಅದೃಶ್ಯನಾದ ದೂತನು ಯಾರು? ಅವನು ಬಂದ ಕಾರ್ಯಗೌರವವೇನು? ಅವನನ್ನು ಹೀಗೆ ವಿಪತ್ತಿಗೆ ಗುರಿಮಾಡಿದವರು ಯಾರು? ಎಂಬ ಸಂಗತಿಗಳನ್ನು ತಿಳಕೊಳ್ಳುವ ವಿಷಯವಾಗಿ ನಿಮ್ಮಲ್ಲಿ ಅತುಲವಾದ ಅಭಿಲಾಷೆಯುಂಟಾಗಿರಬಹುದು, ಆದ್ದರಿಂದ ಮೊದಲು ನಿಮ್ಮ ಆತುರತೆಯನ್ನು ತೃಪ್ತಿಗೊಳಿಸಿ ಮುಂದಿನ ಸಮೀಚೀನವಾದ ಕಥಾಭಾಗದ ಕಡೆಗೆ ಹೊರಳುವಾ

ಕೊಂಡಪಲ್ಲಿ ಎಂಬ ದುರ್ಗದಲ್ಲಿ ವೀರನಾರಾಯಣ ಗಜಪತಿಯೆಂಬೊಬ್ಬ ಪಾಳಯಗಾರನು ಆಳುತ್ತಿದ್ದನು ಆತನು ಮಹಾಪರಾಕ್ರಮಶಾಲಿಯು, ರೂಪದಲ್ಲಿ ಮನ್ಮಥನಿಗೆ ಸರಿಯಾದವನು, ರಾಜತಂತ್ರದಲ್ಲಿ ಕುಶಲನು, ಶಕ್ತಿಯಲ್ಲಿ ಪ್ರತ್ಯಕ್ಷ ಕಲಿಭೀಮನು, ಅವನಿಗೆ ಈಗ ೩೦-೩೫ ವರುಷಗಳು ನಡೆಯುತ್ತಿದ್ದವು.

ಈ ವೀರನಾರಾಯಣಗಜಪತಿಗೆ ಪದ್ಮಯೆಂಬ ಸುಂದರಿಯು ಧರ್ಮಪತ್ನಿಯಾಗಿದ್ದಳು ಈ ಸತಿ-ಪತಿಗಳ ಜೋಡನ್ನು ರತಿ-ಮನ್ಮಥರ ಜೋಡಿಗೆ ಹೋಲಿಸಬಹುದಾಗಿತ್ತು ಭೂಲೋಕದ ಸ್ತ್ರೀಯರಲ್ಲಿ ಅಲೌಕಿಕವಾದ ಸೌಂದರ್ಯವಿದ್ದರೆ, ಅದು ಪದ್ಮೆಯನ್ನೇ ಆಶ್ರಯಿಸಿತ್ತೆಂದು ಹೇಳಬಹುದಾಗಿತ್ತು ಆಹಹ! ಪದ್ಮೆಯ ಚಲ್ವಿಕೆಯನ್ನೇನು ಬಣ್ಣಿಸೋಣ! ಅವಳ ಪೂರ್ಣಿಮೆಯ ಚಂದ್ರನಂತಿರುವ ಮುಖಮಂಡಲ, ವಕ್ಷಸ್ಥಲದಿಂದ ಕೊಬ್ಬೇರಿ ಕೊಡಬಕೂಂಡೆದ್ದ ಸ್ತನಮಂಡಲ, ತುಂಬಿತುಳಕುವ ನಿತಂಬಮಂಡಲ, ಈ ಮಂಡಲತ್ರಯಗಳು ಋಷಿಮಂಡಲದ ಧೈರ್ಯವನ್ನು ಕೂಡಾ ಸೂರೆಗೊಳ್ಳುತ್ತಿದ್ದವು ಬಹಳ ಹೇಳುವದೇನು? ಅವಳ ಕಣ್ಣುಗಳ ಹೊಳಪು ಪಾಘಾತದ ಬನಪು, ಹೆಚ್ಚಾದ ಪೈಗಂಪು ಕಾಮುಕರ ದೈನ್ಯವನ್ನು ಹೆಚ್ಚಿಸುತ್ತಿದ್ದವು ಅವಳ ಸರಳವಾದ ತನುಲತೆಗೆ ಆಶ್ರಯಕೊಟ್ಟ ಪುರುಷನೇ ಪುಣ್ಯವಂತನೆಂಬ ಧನ್ಯೋದ್ಗಾರಗಳು ಅವಳ ದರ್ಶನಮಾತ್ರದಿಂದ ಪ್ರತಿಯೊಬ್ಬರ ಬಾಯಿಂದಲೂ ಹೊರಬೀಳುತ್ತಿದ್ದವು

ಪದ್ಮೆಯು ರೂಪದಲ್ಲಿ ನಿಷ್ಕಲಂಕಳಿದ್ದಂತೆ ಸದ್ಗುಣಗಳಲ್ಲಿಯೂ ಪರಿಪೂರ್ಣಳಿದ್ದಳು. ಚಾತುರ್ಯ, ಸಾಹಸಾದಿಗಳಿಗಂತೂ ತವರುಮನೆಯೇ ಆಗಿದ್ದಳೆಂದರೂ ಅತಿಶಯೋಕ್ತಿಯಾಗದು. ಆದರೆ "ಅತಿರೂಪಾದ್ಧೃತಾ ಸೀತಾ" "ಅತಿ ಸರ್ವತ್ರವರ್ಜಯೇತ್" ಎಂಬ ಸುಭಾಷಿತಕಾರನ ಅಭಿಪ್ರಾಯದಂತೆ ಪದ್ಮೆಯ ಈ ರೂಪಾತಿಶಯವೇ ಅವಳಿಗೆ ಕೆಲಕಾಲ ತೊಂದರೆ ಕೊಟ್ಟಿತು.

ಜಗತ್ತಿನಲ್ಲಿ ವಿಶೇಷವಾಗಿ ಭರತಖಂಡದಲ್ಲಿ ಇತಿಹಾಸದ ಅಭಿವೃದ್ಧಿಗೆ ಸ್ತ್ರೀಯರ ಸೌಂದರ್ಯವೇ ಒಂದು ಬಗೆಯಿಂದ ಕಾರಣವಾಗಿದೆಯೆಂದು ಹೇಳಬಹುದು ಕವಿಗಳ ಪ್ರಸ್ಥ ಬೆಳೆಯುವಕ್ಕೂ ಇವರೇ ಕಾರಣರು, ಇದಕ್ಕೂ ಹೆಚ್ಚು ಹೇಳುವದೆಂದರೆ ಜಗತ್ತಿನ ಮೂಲಾಧಾರವೇ ಈ ಪೂಃಹಿನೀರೂಪವು. ಕಿಂಬಹುನಾ ಮೂಲಬ್ರಹ್ಮವೆಂಬ ಅರ್ಥವು ಅನರ್ಥವಾಗಿ ಪರಿಣಮಿಸಲಿಕ್ಕೆ ಈ ರೂಪವೇ ಕಾರಣವು, ಹೀಗೆ ಅನರ್ಥಕಾರಿಯಾದ ಸ್ತ್ರೀರೂಪದ ಯೋಗದಿಂದ ಯಾವ ಯಾವ ಅನರ್ಥಗಳು ಉಂಟಾಗುತ್ತವೆಂಬದನ್ನು ಹೇಳಲು ಯಾರಿಗೂ ಶಕ್ಯವಿಲ್ಲ. ಹೀಗಿದ್ದರೂ ಅದರ ಹಂಬಲವನ್ನು ಹಚ್ಚಿಕೊಂಡವರ ಸಂಖ್ಯೆಯೇ ಹೆಚ್ಚು, ಇರಲಿ.

ಪದ್ಮೆಯ ಸೌಂದರ್ಯದ ಪ್ರಸಿದ್ಧಿಯು ನಾಲ್ಕೂಕಡೆಗೆ ಹಬ್ಬಿತ್ತು. ಆಕೆಯು ವೀರನಾರಾಯಣಗಜಪತಿಯ ಕೊರಳಿಗೆ ಮಾಲೆ ಹಾಕಿದ್ದರಿಂದ ಪರಸ್ತ್ರೀಯಾದಳೆಂದು ಸುಜನರು ಆಕೆಯ ಸುದ್ದಿಯನ್ನು ಬಿಟ್ಟರು ಆದರೆ ದುರ್ಜನರಿಗೆ ಇಂಥ ವಿವೇಕವಿಲ್ಲದ್ದು ಆಶ್ಚರ್ಯವಲ್ಲ. ಅವರು ಸರ್ವದಾ ಪರರ ಸೊತ್ತನ್ನೇ ಅಪೇಕ್ಷಿಸುತ್ತಿರುವರು ಅದರಲ್ಲಿಯೂ ಹೆಣ್ಣೆಂಬ ಸೊತ್ತನ್ನು ಬಲು ಕಂಗಾಲತನದಿಂದ ಹರಣಮಾಡಲಿಚ್ಛಿಸುವರು ರಾಯಚೂರ ದುರ್ಗಾಧಿಪತಿಯಾದ ದಾವಲ್‌ಖಾನನೆಂಬವನು ಪದ್ಮೆಯನ್ನು ಹರಣಮಾಡಲಿಚ್ಛಿಸುತ್ತಿದ್ದನು ಆತನು ಸ್ಥೂಲಕಾಯನಿದ್ದು, ವಿಷಯೋಪಭೋಗದಲ್ಲಿ ಅತ್ಯಂತ ಆಸಕ್ತನಿದ್ದನು.

ಕೃಷ್ಣಾ ತುಂಗಭದ್ರೆಗಳ ಪ್ರದೇಶದಲ್ಲಿ ರಾಯಚೂರವೇ ಬಲವಾದ ಕೋಟೆಯು, ಇದು ನೆಲಕೋಟೆಯಾಗಿದ್ದರೂ ಶತ್ರುಗಳಿಗೆ ದುರ್ಜಯವಾಗಿತ್ತು. ಈ ಕೋಟಯು ಮೊದಲು ವಿಜಯನಗರದ ರಾಯರ ವಶದಲ್ಲಿತ್ತು. ಮುಂದೆ ಕೆಲ ಕಾಲದನಂತರ ವಿಜಾಪುರದವರ ವಶಕ್ಕೆ ಹೋಯಿತು. ಈ ಕೋಟೆಯು ಕೈಬಿಟ್ಟಾಗಿನಿಂದ ವಿಜಯನಗರದವರಿಗೂ, ವಿಜಾಪುರದವರಿಗೂ ವಿಶೇಷವಾಗಿ ವೈಮನಸ್ಸುಂಟಾಯಿತು ಇದಕ್ಕೂ ಮೊದಲು ಆವೆರಡೂ ರಾಜ್ಯಗಳು ಪ್ರೇಮದಿಂದ ನಡಕೊಳ್ಳುತ್ತಿದ್ದವು. ನಮ್ಮ ಈ ಕಥಾನಕವು ನಡೆದ ಕಾಲದಲ್ಲಿ ಈ ಕೋಟೆಯು

ಮುಖ್ಯ ಸ್ವಾಮಿತ್ವವು ವಿಜಾಪುರದವರ ಕಡೆಗಿತ್ತು. ಅವರ ಹಸ್ತಕನಾಗಿ ದಾವಲ್‌ಖಾನನು ದುರ್ಗಾಧಿಪತ್ಯವನ್ನು ಅನುಭವಿಸುತ್ತಿದ್ದನು.

ಕೊಂಡಪಲ್ಲಿಯ ದುರ್ಗಾಧಿಪತಿಯು ವಿಜಯನಗರದ ರಾಯರ ಸ್ನೇಹಿತನೆಂಬದು ದಾವಲ್‌ಖಾನನಿಗೆ ಮೊದಲಿನಿಂದಲೂ ಗೊತ್ತಿತ್ತು. ಆದರೂ ಅವನು ನ್ಯೂನೊಕ್ಕಿನಿಂದ ಆ ದುರ್ಗದ ಪಟ್ಟಮಹಿಷಿಯನ್ನು ಇಚ್ಛಿಸುತ್ತಿದ್ದನು. ಅದಕ್ಕೆ ಅವನಿಗೆ ವಿಜಾಪುರದವರ ಬೆಂಬಲವೂ ಇತ್ತು

ಈಮೇರೆಗೆ ದಾವಲ್‌ಖಾನನು ಪದ್ಮೆಯನ್ನು ಇಚ್ಛಿಸುತ್ತಿರಲು, ಕೊಂಡಪಲ್ಲಿಯ ಗಜಪತಿಯು ರಾಯಚೂರ ಕೋಟೆಯನ್ನು ಕೈವಶಮಾಡಿಕೊಳ್ಳುವದಕ್ಕಾಗಿ ವಿಜಯನಗರದವರಿಗೆ ಸಹಾಯಮಾಡಬೇಕೆಂದು ತನ್ನ ಸೈನ್ಯದ ಮುಕ್ಕಾಲುಪಾಲನ್ನು ರಾಯರ ಬಳಿಗೆ ಕಳಿಸಿದನು ಈ ಸುದ್ದಿಯು ಹಾ ಹಾ ಅನ್ನುವಷ್ಟರಲ್ಲಿ ದಾವಲ್‌ಖಾನನಿಗೆ ಹತ್ತಿತು ಅನಾಯಾಸವಾಗಿ ದೊರೆತ ಈ ಸಂಧಿಯನ್ನು ಖಾನನು ವ್ಯರ್ಥವಾಗಿ ಕಳೆದುಕೊಳ್ಳಲಿಲ್ಲ. ಅವನು ರಾಯಚೂರ ಕೋಟೆಯನ್ನು ಕಾಯುವ ಭಾರವನ್ನು ವಿಜಾಪುರದವರಿಗೆ ಒಪ್ಪಿಸಿ, ತಾನು ಆರಿಸಿದ ಸೈನ್ಯದೊಡನೆ ಕೊಂಡಪಲ್ಲಿಯ ಮೇಲೆ ಸ್ವಾರೀಮಾಡಿದನು.

ಈ ದುರ್ಗವು ಭದ್ರವಾಗಿದ್ದರೂ, ಕಡಿವಿಗೆಬಿದ್ದು ಬಡಿದಾಡುವವರನ್ನುಂದೆ ತಡೆಯುವಷ್ಟು ಬಲವಾದದ್ದಿದ್ದಿಲ್ಲ, ಮೇಲಾಗಿ ಇದ್ದ ಸೈನ್ಯವೆಲ್ಲ ವಿಜಯನಗರದ ಕಡೆಗೆ ಹೊರಟುಹೋದದ್ದರಿಂದ ಗಜಪತಿಯು ವೀರಪುರುಷನಾಗಿದ್ದರೂ ಬೆದರಿದನು. ಖಾನನ ದುರ್ಬುದ್ಧಿಯು ಅವನಿಗೆ ಈ ಮೊದಲೇ ಗೊತ್ತಿತ್ತು ಆದ್ದರಿಂದ ಮುಂದೇನು ಮಾಡಬೇಕೆಂದು ಅವನು ಯೋಚಿಸುತ್ತಿರಲು, ಖಾನನ ಸೈನಿಕರು ಕೋಟೆಗೆ ಬಲವಾಗಿ ಮುತ್ತಿಗೆಯನ್ನಿಟ್ಟರು ಒಂದು ದಿನವಾಯಿತು, ಎರಡು ದಿನಗಳಾದವು, ಮೂರು ದಿನಗಳು ಕಳೆದುಹೋದವು, ಗಜಪತಿಯು ತಾಟಸ್ಥ್ಯವನ್ನು ತಾಳಿದನು ಶತ್ರುಗಳಿಗೆ ಯಾವ ಬಗೆಯಿಂದ ಪ್ರತೀಕಾರ ಮಾಡಬೇಕೆಂಬದು ಅವನಿಗೆ ತಿಳಿಯದೆಹೋಯಿತು ಖಾನನಾದರೂ ಗಜಪತಿಯು ತಾನೇ ಶರಣುಬರುವನೆಂಬ ಉಬ್ಬಿನಿಂದ ಕೈತಡೆದು ಸುಖವಸ್ತಿಯನ್ನು ಮಾಡಿದನು.

ಪತಿಯ ಈ ತಾಟಸ್ಥ್ಯವು ಪದ್ಮೆಗೆ ಸರಿದೋರಲಿಲ್ಲ ಆಕೆಯು ವೀರಪುತ್ರಿಯೂ-ವೀರಪತ್ನಿಯೂ-ವೀರಸ್ನುಷೆಯೂ ಆಗಿದ್ದಳು ಖಾನನ ದುಷ್ಟ ಉದ್ದೇಶವು ಆಕೆಗೆ ತಿಳಿಯಲು, ಅವನ ಗಂಟಲವನ್ನು ಹರಿದು ರಕ್ತಪಾನ ಮಾಡಲಿಯಾ! ಎಂಬ ಸಿಟ್ಟು ಆಕೆಯಲ್ಲಿ ಓತಪ್ರೋತವಾಗಿ ತುಂಬಿತು. ಆಗ ಅವಳು ಕಾಲಿಯೋ,

ಚಂಡಿಯೋ, ಮಾರಿಯೋ ಎಂಬಂತೆ ತೋರಿದಳು. ಸ್ವಾಭಾವಿಕವಾದ ಅವಳ ಮನೋಹರ ಸ್ವರೂಪವು ಎತ್ತೋ ಅಡಗಿತು ಅದರ ಸ್ಥಳವನ್ನು ನೋಡಿದರೆ ಅಂಜುವಷ್ಟು ಉಗ್ರತೆಯು ವ್ಯಾಪಿಸಿತು ಇಂಥ ಸ್ಥಿತಿಯಲ್ಲಿಯೇ ಅವಳು ಪತಿಯ ಬಳಿಗೆ ಹೋದಳು ಆಗ ಆತನಾದರೂ ಮನಸ್ಸಿನಲ್ಲಿ ಖಾನನ ಪಾರುಪತ್ಯದ ವಿಚಾರವನ್ನೇ ಚರ್ಚಿಸುತ್ತ ಕುಳಿತುಕೊಂಡಿದ್ದನು ಅವನ ಸಂಪೂರ್ಣ ಮನಸ್ಸೆಲ್ಲ ತದಾಕಾರವಾಗಿತ್ತು ತನ್ನ ಸುತ್ತುಮುತ್ತಿನ ವ್ಯವಹಾರಗಳು ಕೂಡಾ ತಿಳಿಯದಷ್ಟು ಅವನು ತಲ್ಲೀನನಾಗಿದ್ದನು ಪದ್ಮೆಯು ಅವನ ಹಿಂದೆ ಹೋಗಿ ನಿಂತಳು. ಬಳಿಕ ಮುಂದೆ ಬಂದು ನಿಂತಳು ಆದರೂ ಅವನಿಗೆ ಅದರ ಅರಿವೇ ಇರಲಿಲ್ಲ ಆಗ ಒದರಿ ಅವನನ್ನು ಎಚ್ಚರಿಸಲಿಯಾ! ಎಂಬ ವಿಚಾರಗಳು ಆಕೆಯ ಮನಸ್ಸಿನಲ್ಲಿ ಬಂದುಹೋದವು ಆದರೆ ಅವಳು ಜಾತ್ಯಾ ಪತಿನಿಷ್ಠಳಾದ್ದರಿಂದ ಆ ಪ್ರಮಾದಕ್ಕೆ ವಶಳಾಗಲಿಲ್ಲ ಪತಿವ್ರತೆಯರ ಮೇಲೆ ದುರ್ಜನರು ದುರ್ಬುದ್ಧಿಯನ್ನು ವ್ಯಕ್ತಗೊಳಿಸಿದರೆ ಅವರ ಸ್ಥಿತಿಯು ಹ್ಯಾಗೆ ಆಗುವದೋ, ಅವರಲ್ಲಿ ಎಷ್ಟು ಸಂತಾಪ ಉಂಟಾಗುವದೋ ಎಂಬದು ಪ್ರಸ್ತುತದಲ್ಲಿ ಪದ್ಮೆಯ ಸ್ಥಿತಿಯಿಂದ ಗೊತ್ತಾಗುವಂತಿತ್ತು ಆದರೆ ಗಂಡನ ದರುಶನದಿಂದ ಅವಳ ಸಂತಾಪವು ಇಳಿದುಹೋಗಿ ಅವಳು ಕ್ಷಣದಲ್ಲಿ ತನ್ನ ಸುಮನೋಹರ ಮುಖಭಾವದಿಂದ ಒಪ್ಪ ಹತ್ತಿದಳು.

ಗಜಪತಿಯು ವಿಚಾರಮಾಡುತ್ತಿರಲು, ಯಾವದೋ ಒಂದು ಯುಕ್ತಿಯು ಬಗೆಹರಿದಂತಾಯಿತು ಕೂಡಲೇ ಅವನು ತಲೆಯಮೇಲಿನ ಭಾರವು ಒಮ್ಮೆಲೇ ಹೊರಟುಹೋಗಿ ನಿರ್ವ್ಯಥೆಯುವನಾದ ಮನುಷ್ಯನಂತೆ ಹಗುರಾದನು ಅಷ್ಟರಲ್ಲಿ ಅವನು ಅಲ್ಲಿಯೇ ಪಕ್ಕದಲ್ಲಿ ಕುಳಿತ ಪಂಡಿತಿಯನ್ನು ನೋಡಿ "ಪ್ರಿಯೇ ಇದೇನು, ಇಲ್ಲ ಬಂದೆ?" ಎಂದು ಕೇಳಿದನು ಪದ್ಮೆಯು ಆ ಪ್ರಶ್ನೆಗೆ ಉತ್ತರವನ್ನೇನೂ ಕೊಡದೆ, ಖಾನನ ಪಾರುಪತ್ಯಕ್ಕಾಗಿ ಏನು ಮಾಡಿದಿರಿ? ಎಂದು ಪ್ರಶ್ನಮಾಡಿದಳು ಆಗ ಅವನು ತನಗೆ ತೋಚಿದ ಉಪಾಯುವನ್ನು ಮಾಜದೆ ಹೇಳಿದನು ಆ ಹಂಚಿಕೆಯು ವಿಷಯವಾಗಿ ಅವರಿಬ್ಬರಲ್ಲಿ ಬಹಳ ಚರ್ಚೆಯಾಯಿತು ಕಡೆಗೆ ಪದ್ಮೆಯು ಒಂದು ಉಪಸೂಚನೆಯನ್ನು ಮಾಡಿ ಆ ಹಂಚಿಕೆಯನ್ನು ಒಪ್ಪಿಕೊಂಡಳು

ಮರುದಿನ ಒಬ್ಬ ಪ್ರತಿಷ್ಠಿತ ದರ್ಬಾರಿ ಮನುಷ್ಯನು ಖಾನನ ಬಳಿಗೆ ಹೋದನು. ಅವನು ಗಜಪತಿಯಿಂದ ಪ್ರೇರಿತನಾಗದೆ ತಾನಾಗಿಯೇ ಹೋದಂತೆ

ನಟನೆಯನ್ನು ಮಾಡಿದನು ಆ ಮನುಷ್ಯನ ಮಾತು-ಕಥೆಗಳನ್ನು ಕೇಳಿ ಖಾನನಿಗೆ ಆಶ್ಚರ್ಯವಾಯಿತು ಹೋದ ಮನುಷ್ಯನು ಹೇಳಿದ್ದೇನಂದರೆ "ಖಾನಬಹಾದ್ದೂರರೇ, ನಾನು ಗಜಪತಿಯ ಚಾಕರಿಯನ್ನು ಬಿಸುಟಿ ಬಂದಿರುತ್ತೇನೆ ನೀವು ಚಾಕರಿಗೆ ಇಟ್ಟುಕೊಂಡರೆ ನಿಮ್ಮಲ್ಲಿರುತ್ತೇನೆ ಇಲ್ಲದಿದ್ದರೆ ಯಾವದಾದರೊಂದು ಹಳ್ಳಿಗೆ ಹೋಗಿ ಸುಖವಾಗಿ ಜೀವನ ಮಾಡಿಕೊಂಡಿರುತ್ತೇನೆ. ಯಾಕಂದರೆ ಗಜಪತಿಯು ಕೈಚೋಳಿಗಿಗೆ ಬಂದಿರುವನು ಅವನಲ್ಲಿ ಸೈನ್ಯವಿಲ್ಲ, ಇದ್ದ ಸೈನಿಕರಿಗೆ ಹೊಟ್ಟೆಗೆ ಹಾಕಲಿಕ್ಕೆ ಧನವಿಲ್ಲ, ಧಾನ್ಯವಿಲ್ಲ ದುರ್ಗದ ಮೇಲೆ ನೀರು ಸಹ ಇಲ್ಲ. ಇನ್ನು ನಾಲ್ಕೆಂಟು ದಿನಗಳಲ್ಲಿ ಇದ್ದ ಜಾಂಡವಳವೆಲ್ಲ ತಿಂದುಹೋಗುವದು ಮುಂದೆ ಗಜಪತಿಗೆ ಸಾಲ್ಗುಣವಾಸವೇ ಗತಿಯಾಗುವದು. ಅದರ ಇಂಗಿತವನ್ನು ತಿಳಿದು ನಾನು ಅವರ ನೌಕರಿಗೆ ರಾಮು ರಾಮು ಮಾಡಿ ಬಂದೆನು ಸಾಕು ಮಹಾರಾಯಾ, ಇಂಥ ಹೇಡಿಜನರ ಚಾಕರೀಮಾಡಿ ಕೂಳಿಲ್ಲದೆ ಸಾಯುವದಕ್ಕಿಂತ ಓಡಿ ಹೋಗಿ ಎಲ್ಲಿಯಾದರೂ ಇರುವದು ಲೇಸಾಗಿರುವದು. ಇಂಥವನು ನಿಮ್ಮಂಥ ದೊಡ್ಡ ಸರದಾರರ ಮುತ್ತಿಗೆಯನ್ನು ತಡಕೊಳ್ಳುವನೇ? ಖಾನಸಾಹೇಬರೇ ನೀವು ಬಂದ ಸಂಧಿಯು ಬಹಳ ಉತ್ತಮವಿರುವದು. ನೀವು ಹೆಚ್ಚಿಗೆ ಆಯಾಸಪಡುವ ಕಾರಣವೇ ಇಲ್ಲ ಯುದ್ಧಮಾಡುವ ಅವಶ್ಯಕತೆಯಿಲ್ಲ, ರಕ್ತಪಾತದ ಪ್ರಸಂಗವಿಲ್ಲ ಇನ್ನು ೧೦-೧೨ ದಿನಗಳು ಹೋದರೆ ಗಜಪತಿಯು ಹೊಟ್ಟೆಗಿಲ್ಲದೆ ತಾನೇ ದಿಂಡುರುಳಿಕೆ ಉರುಳುತ್ತ ನಿಮ್ಮೆಡೆಗೆ ಬರುತ್ತಾನೆ, ಹೊರಗಿನ ಪದಾರ್ಥಗಳು ಬರುವದು ಕಟ್ಟಾದ್ದರಿಂದ ಈಗಾಗಲೇ ನಾವು ಕಣ್ಣು ಬಿಡಹತ್ತಿದ್ದೆವು"

ಈ ಮೇರೆಗೆ ಆ ಮನುಷ್ಯನು ಮಾತಾಡಲು, ಪದ್ಮೆಯು ದೊರೆಯುವಳೆಂದು ಖಾನಸಾಹೇಬರು ಗಡ್ಡದಮೇಲೆ ಕೈ ಎಳೆಯುತ್ತ ಮನದಲ್ಲಿ ಅಲ್ಲಾನ ಉಪಕಾರವನ್ನು ಸ್ಮರಿಸತೊಡಗಿದರು ಇಷ್ಟೇ ಅಲ್ಲ, ಈ ಆನಂದದ ಭರದಲ್ಲಿ ಅವರು ಆ ಮನುಷ್ಯನನ್ನು ಕುರಿತು—"ನೀವು ಹೇಳುವ ಸಂಗತಿಯು ನಿಜವೇ? ನೀವು ಯಾವ ಕೆಲಸವನ್ನು ನೋಡುತ್ತಿದ್ದಿರಿ?" ಎಂದು ಕೇಳಲು,

ಮನುಷ್ಯ—ಖಾವಿಂದ, ನಿಮ್ಮಂಥವರ ಮುಂದೆ ಸುಳ್ಳು ಹೇಳಿದರೆ ನನ್ನ ಅವಸ್ಥೆ ಏನಾದೀತೆಂಬದು ನನಗೆ ಗೊತ್ತಿಲ್ಲವೇ? ಆದ್ದರಿಂದ ನಾನು ಹೇಳಿದ ಮಾತುಗಳಲ್ಲಿ ಒಂದು ಶಬ್ದವಾದರೂ ಸುಳ್ಳಿಲ್ಲ ನಾನು ಗಜಪತಿಯಲ್ಲಿ ಉಗ್ರಾ

ಣದ ಮುಖ್ಯಸ್ಥನ ಕೆಲಸವನ್ನು ನೋಡುತ್ತಿದ್ದೆನು ಅಂತೇ ನನಗೆ ಪ್ರತಿಯೊಂದು ಸಂಗತಿಯೂ ಗೊತ್ತಿರುವದು.

ಖಾನ—ಹಾಗಾದರೆ ಇತ್ತ ಬಾ, ನೀನು ನಮ್ಮಲ್ಲಿಯೇ ಇದ್ದುಕೋ, ನಾನು ಕೆಲವು ಸಂಗತಿಗಳನ್ನು ಕೇಳುತ್ತೇನೆ, ಅವುಗಳಿಗೆ ಸರಿಯಾದ ಉತ್ತರವನ್ನು ಕೊಡುತ್ತೀಯಾ?

ಮನುಷ್ಯ—ಓಹೋ, ಅವಶ್ಯವಾಗಿ ಕೇಳಬೇಕು ನನಗೆ ಗೊತ್ತಿದ್ದ ಮಟ್ಟಿಗೆ ನಿಮಗೆ ಎಲ್ಲ ಸಂಗತಿಗಳ ವಿಷಯವಾಗಿಯೂ ಹೇಳುವೆನು.

ಖಾನ—ನನಗೆ ಬೇರೆ ವಿಷಯವೇನೂ ಬೇಕಿಲ್ಲ ಪದ್ಮೆಯು ಬಹು ರೂಪವತಿಯೇನು?

ಮನುಷ್ಯ—(ಮನದಲ್ಲಿ ಬೈಯುತ್ತ) ಆಕೆಯ ಸಮಾನ ಸುಂದರಿಯರು ಭೂಲೋಕದಲ್ಲಿ ಇನ್ನಾರಾದರೂ ಉಂಟೇ? ಛೇ, ಸುಂದರಿಯನಬೇಕು ಆಕೆಗೆ!

ಖಾನ—ಆಕೆಗೆ ಈಗೆಷ್ಟು ವರುಷ?

ಮನುಷ್ಯ—ಇಪ್ಪತ್ತರ ಮೇಲೆ, ಇಪ್ಪತ್ತೆರಡರ ಒಳಗೆ

ಖಾನ—(ನಗುತ್ತ) ಗ—ಗ

ಮನುಷ್ಯ—ಯಾಕೆ ಖಾವಿಂದರೆ, ಯಾವ ಸಂಗತಿಯನ್ನು ಕೇಳಬೇಕೆಂದಿರುವಿರಿ? ಅದಕ್ಕೇಕೆ ಇಷ್ಟು ಸಂಕೋಚ?

ಖಾನ—ಸಂಕೋಚವಿಲ್ಲ ಆದರ ಗಂಡನಲ್ಲಿ ಆಕೆಯು ಅನುರಾಗವಿದೆಯೋ?

ಮನುಷ್ಯ—ರಾಗವಿದೆ-ಅನುರಾಗವಿಲ್ಲ.

ಖಾನ—ಯಾಕೆ?

ಮನುಷ್ಯ—ತನ್ನ ಯೋಗ್ಯತೆಗೆ ತಕ್ಕ ವೈಭವವಿಲ್ಲೆಂದು.

ಈ ಮೇರೆಗೆ ಅವರಿಬ್ಬರಲ್ಲಿ ಸಂಭಾಷಣವಾಗಲು, ಖಾನನಿಗೆ ಸ್ವರ್ಗವು ಮೂರೇ ಬೆರಳು ಉಳಿಯಿತು ಆ ಮನುಷ್ಯನು ಹೇಳಿದ ಮಾತುಗಳೆಲ್ಲ ನಿಜವೆಂತಲೇ ಭಾವಿಸಿದನು ಪರರ ಹೆಣ್ಣಿಗೆ ಹಂಬಲಿಸುವ ಮರುಳರ ಬಾಳು ಹೀಗೆಯೇ ಸರಿ! ಬಳಿಕ ಆ ಮನುಷ್ಯನು ಒಳ್ಳೇ ಮಾತುಗಳಿಂದ ಖಾನನನ್ನು ರಮಿಸಿ ಇಲ್ಲಿಯೇ ನೆರೆಹಳ್ಳಿಯಲ್ಲಿ ನಮ್ಮ ಆಪ್ತರ ಮನೆಯಿರುವದು, ಅಲ್ಲಿಗೆ ಹೋಗಿಬರುತ್ತೇನೆಂದು ಹೇಳಿ ಖಾನನ ಅಪ್ಪಣೆಪಡೆದು ಹೊರಟು ಹೋದನು ಅವನು ಹೋದಬಳಿಕ ಖಾನನು ಏಕಾಂತಸ್ಥಳವನ್ನು ಹಿಡಿದು ಪದ್ಮೆಯ ಕಾಲ್ಪನಿಕ ಸುಖವನ್ನು ಅನುಭವಿಸತೊಡಗಿದನು.

ಹೀಗೆ ಭಸ್ಮಾಸುರನಿಗೆ ಮೋಹವನ್ನುಂಟು ಮಾಡಿದ ಮೋಹಿನಿಯಂತೆ ಖಾನನಮೇಲೆ ಮೋಹಿನ್ಯಾಸ್ತ್ರವನ್ನುಎಳೆದ ಬಹಾದ್ದೂರನು ಗಜಪತಿಯ ಮುಖ್ಯಾ ಮಾತ್ಯನಾದ ಸದಾಶಿವನು, ಅವನು ಬಹು ಕುಶಲತೆಯಿಂದ ಖಾನನನ್ನು ಮರು ಳುಗೊಳಿಸಿ, ಅವನು ಹದಿನೈದು ದಿವಸಗಳವರೆಗೆ ಕೋಟೆಯ ಮೇಲೆ ಕೈಮಾಡ ದಂತೆ ಮಾಡಿದನು. ಒಳಿಕ ಅವನು ಖಾನನ ಪಾಳಯದಿಂದ ಜಾರಿದ ಒಳಿಕ ಬಹು ದೂರ ಹೋಗಿ ವೇಷಾಂತರವನ್ನು ಮಾಡಿದನು.

ಪ್ರಿಯ ವಾಚಕರೇ, ಹೀಗೆ ವೇಷಾಂತರಿಸಿದ ಸದಾಶಿವನೇ ವಿಜಯನಗರ ವನ್ನು ಸೇರಿದ ವೇಷಧಾರೀ ದೂತನು. ತಮ್ಮ ಒಡೆಯನಿಗೆ ಬಂದ ಸಂಕಟವನ್ನು ರಾಯರ ಮುಂದ ನಿವೇದಿಸಿ ಸೈನ್ಯವನ್ನು ಹೊರಡಿಸುವ ಕೆಲಸವನ್ನು ಅವನು ಮಾಡಬೇಕಾಗಿತ್ತು. ಆದ್ದರಿಂದ ಅವನು ದೂತನ ವೇಷದಿಂದ ವಿಜಯನಗರಕ್ಕೆ ಪ್ರಯಾಣ ಬೆಳಿಸಿದ್ದನು.

ಕಾರ್ಯಸಾಧಕನಾದವನು ಉಚ್ಚ-ನೀಚ ವ್ಯಕ್ತಿಗಳ ಭಾವನೆಯನ್ನು ಮನ ಸ್ಸಿನಲ್ಲಿ ಎಂದೂ ತರುವದಿಲ್ಲ. ತನ್ನ ಕಾರ್ಯವು ಯಾವ ದಾರಿಯಿಂದ ಸಾಧಿಸು ವದೋ ಅದೇ ದಾರಿಯಿಂದ ಅವನು ಅಸಿಮಿಸಿಯಿಲ್ಲದೆ ಹೋಗುವನು. ಅದರಂತೆ ಪ್ರಸ್ತುತದ ನಮ್ಮ ಸದಾಶಿವನು ದೂತನ ವೇಷವನ್ನು ಕೇವಲ ಕಾರ್ಯಸಾಧನೆ ಗಾಗಿ ಧರಿಸಿದ್ದನು. ಯಾಕಂದರೆ, ಆಗಿನ ಕಾಲದಲ್ಲಿ ರಾಜಕಾರಣೀಪುರುಷರು ಹೊರಬಿದ್ದು ಪಾರಾಗಿ ಬರುವದು ಕಠಿಣವಿತ್ತು. ಸದಾಶಿವನು ಕೊಂಡಪಲ್ಲಿಯಿಂದ ಹೊರಡುವಾಗ ಗಜಪತಿಯ ಮುಂದೆ ದೊಡ್ಡ ದೊಡ್ಡ ಮಾತುಗಳನ್ನಾಡಿದ್ದನು. ಹದಿನೈದುದಿವಸಗಳ ವರೆಗೆ ಗಜಪತಿಯು ಹ್ಯಾಗಾದರೂ ಮಾಡಿ ಕೋಟೆಯನ್ನು ಸಂರಕ್ಷಿಸಿಕೊಳ್ಳಬೇಕು, ಅಷ್ಟರಲ್ಲಿ ತಾನು ವಿಜಯನಗರದಿಂದ ಸೈನ್ಯವನ್ನುತರ ಬೇಕು ಎಂಬದಾಗಿ ಅವರಿಬ್ಬರ ವಚನಪ್ರತಿವಚನಾದಿಗಳು ಆಗಿದ್ದವು. ಅದರಂತೆ ಗಜಪತಿಯು ಕೋಟೆಯ ಮೇಲೆ ಯೋಗ್ಯಬಂದೋಬಸ್ತನ್ನಿಟ್ಟು ಸದಾಶಿವನ ಮಾರ್ಗಪ್ರತೀಕ್ಷೆಯೊಂದನ್ನೇ ಮಾಡುತ್ತ ಕಾಲಹರಣ ಮಾಡತೊಡಗಿದ್ದನು.

ಸದಾಶಿವನು ಉಗ್ರಾಣದ ಮುಖ್ಯಸ್ಥನೆಂಬ ಹೆಸರಿನಿಂದ ತನ್ನೆಡೆಗೆ ಬಂದು ತನ್ನನ್ನು ಮೋಸಗೊಳಿಸಿದನೆಂಬ ಸಂಗತಿಯು ಖಾನನಿಗೆ ಗೊತ್ತಾಗಲಿಲ್ಲ. ಆದರೆ ದುರ್ದೈವದಿಂದ ಸದಾಶಿವನ ಗುರ್ತನ್ನು ವಿಜಯನಗರದಲ್ಲಿದ್ದ ಖಾನನ ಗುಪ್ತಚಾರ ನೊಬ್ಬನು ಹಿಡಿದನು. ಪದ್ಮೆಯು ಗುಪ್ತಸುದ್ದಿಗಳನ್ನು ದೊರಕಿಸುವದಕ್ಕಾಗಿ ಆ ಚಾರನು ಕೊಂಡಪಲ್ಲಿಯಲ್ಲಿ ಬಹುದಿವಸಗಳವರೆಗೆ ಇದ್ದನು. ಆದ್ದರಿಂದ ಅವನು

ಸದಾಶಿವನನ್ನು ಪೂರ್ಣವಾಗಿ ಬಲ್ಲವನಾಗಿದ್ದನು ಈಗ ಖಾನನು ಕೊಂಡಪಲ್ಲಿಗೆ ಮುತ್ತಿಗೆಯನ್ನಿಟ್ಟಿದ್ದು ಕೊಂಡಪಲ್ಲಿಯ ಮುಖ್ಯ ಮಂತ್ರಿಯಾದ ಇವನು ಇಲ್ಲಿಗೆ ವೇಷಾಂತರದಿಂದ ಬರಬೇಕಾದರೆ ಇದರಲ್ಲಿ ಏನಾದರೂ ತನ್ನ ಯಜಮಾನನಿಗೆ ಅಪಾಯಪರಬೇಕಂದು ಆ ತರುಣನು ತಟ್ಟನೆ ಊಹಿಸಿದನು ವಿಜಯನಗರದ ಯಾವ ಪ್ರಾಕಾರದಹೆಬ್ಬಾಗಿಲಲ್ಲಿ ಸದಾಶಿವನನ್ನು ಒಳಗೆ ಬಿಡಲಿಲ್ಲವೋ ಆ ಹೆಬ್ಬಾಗಿಲದ ಕಾವಲುಗಾರನ ಸ್ಥಳದಲ್ಲಿ ಖಾನನ ಆ ಗುಪ್ತಚಾರನೇ ಇದ್ದನು ಅಂತೇ ಅವನು ಕೊಂಡಪಲ್ಲಿಯ ಗಜಪತಿಯ ಮುದ್ರೆಯನ್ನು ನೋಡಿದಕೂಡಲೆ ಅವಡುಗಚ್ಚಿ ಅವನನ್ನು ಬುದ್ಧಿಪೂರ್ವಕವಾಗಿ ಒಳಗೆ ಬಿಡಲಿಲ್ಲ ಇಷ್ಟೇ ಅಲ್ಲ, ಸದಾಶಿವನು ಅಲ್ಲಿಂದ ತಿರುಗಿದ ಕೂಡಲೆ ತಾನು ಮತ್ತೊಬ್ಬ ಕಾವಲುಗಾರನಿಗೆ ಪಹರಯನ್ನು ನೇಮಿಸಿ ಅವನು ಎಲ್ಲಿಗೆ ಹೋಗುವನು? ರಾತ್ರಿಯಲ್ಲಿ ಎಲ್ಲಿ ಮಲಗುವನು? ಎಂಬ ಸಂಗತಿಗಳ ಪಾಳತಿಯನ್ನು ನೋಡುವದಕ್ಕ ಹೊರಟನು

ಹಿಂದೆ ಹೇಳಿದಂತೆ ಸದಾಶಿವನು ಒಂದು ಗುಡಿಸಲಲ್ಲಿ ಮಲಗಿದ ಬಳಿಕ ಪಾಳತಿಯನ್ನು ನೋಡಬಂದ ಆ ಕಾವಲುಗಾರನು ಆ ಸ್ಥಳವನ್ನು ಗರ್ತಿಟ್ಟುಕೊಂಡು ಹೋಗಿ ಈ ಸಂಗತಿಯನ್ನು ತನ್ನ ಜತೆಗಾರರಿಗೆ ತಿಳಿಸಿದನು ಮತ್ತು ಅವರೊಡನೆ ಮಧ್ಯರಾತ್ರಿಯ ಸಮಯಕ್ಕೆ ಆ ಗುಡಿಸಲಿಗೆ ಒಂದು ಅವನ ಮುಸುಗೆಯನ್ನು ಕಟ್ಟಿದನು ಮತ್ತು ಸರೆಮನೆಯ ಕಾವಲುಗಾರರ ಸಹಾಯದಿಂದ ಅವನನ್ನು ಒಂದು ಕೋಣೆಯಲ್ಲಿ ಚಲ್ಲಿಕೊಟ್ಟನು. ಇದರ ಮುಂದಿನ ಸಂಗತಿಯು ಏನಾಯಿತೆಂಬದನ್ನು ನಮ್ಮ ವಾಚಕರು ಹಿಂದಿನ ಪ್ರಕರಣದ ಕೊನೆಯಲ್ಲಿಯೇ ಓದಿ ತಿಳಿದಿರುವರು

# ನಾಲ್ಕನೆಯ ಪ್ರಕರಣ.

## ರಣೋತ್ಸಾಹ.

—(೦)—

ತಿಮ್ಮರಸನು ಒಲಗದಲ್ಲಿ ಕುಳಿತುಕೊಂಡಿದ್ದನು ಸದಾಶಿವನು ದೂತ ವೇಷವ ತ್ಯಜಿಸಿ ಬಹು ಪ್ರಯಾಸದಿಂದ ಅವನ ಬಳಿಗೆ ಬಂದನು ಹೀಗೆ ಕೊಂಡಪಲ್ಲಿಯ ಮಂತ್ರಿಪುಂಗವನು ಅಕಸ್ಮಾತ್ತಾಗಿ ಒರಲು ತಿಮ್ಮರಸನು ಎದ್ದು ನಿಂತು ಅವನನ್ನು ಸನ್ಮಾನಿಸಿ ಹತ್ತರ ಕುಳ್ಳಿರಿಸಿಕೊಂಡನು ಸದಾಶಿವನು ಮುಖಭಾವದಿಂದಲೇ ತಾನು ಬಂದ ಕಾರಣವನ್ನು ತಿಮ್ಮರಸನಿಗೆ ತಿಳಿಸಿದನು ಏನೋ ವಿಶೇಷ ರಹಸ್ಯವಿರುವದೆಂದು ಒಲಗವನ್ನು ಬಿಟ್ಟು ತಿಮ್ಮರಸನು ಸದಾಶಿವನೊಡನೆ ಸ್ವಗೃಹಕ್ಕೆ ನಡೆದನು ಮನೆಗೆ ಮುಟ್ಟಿದ ಬಳಿಕ ಅವರಿಬ್ಬರೂ ಏಕಾಂತಸ್ಥಾನವನ್ನು ಸೇರಲು ಸದಾಶಿವನು ಬಾಯಿಬಿಟ್ಟು ಎಲ್ಲ ಸಂಗತಿಗಳನ್ನು ನಿವೇದಿಸಿದನು ದಾವಲ್‌ಖಾನನ ಉದ್ದಾಮತನವನ್ನೂ, ನೀಚಕೃತಿಯನ್ನೂ ತಿಳಿದು ತಿಮ್ಮರಸನಿಗೆ ಪರಮಾವಧಿಯಾದ ಸಂತಾಪವಾಯಿತು. ಆಗ ಅವನು ನುಡಿದನೇನಂದರೆ—

ತಿಮ್ಮರಸನು.—ಸದಾಶಿವಾ, ಖಾನನ ಪಾರುಪತ್ಯವನ್ನು ನಾವು ಹ್ಯಾಗಿದ್ದರೂ ಮಾಡಲೇ ಬೇಕಾಗಿತ್ತು, ಅನಾಯಾಸವಾಗಿ ಅವನೇ ಪ್ರಸಂಗವನ್ನು ತಂದು ಕೊಟ್ಟಿರುವನು, ಬಹಳ ಒಳಿತಾಯಿತು, ಆದರೆ ನಮ್ಮ ಬಳಿಗೆ ಬರಲಿಕ್ಕೆ ನಿನಗೆ ಇಷ್ಟು ತಡವೇಕಾಯಿತು? ಇಷ್ಟೊತ್ತಿಗೆ ಖಾನನು ಕೊಂಡಪಲ್ಲಿಯಲ್ಲಿ ಏನು ಗೊಂದಲ ಹಾಕಿರುವನೋ ಯಾರು ಹೇಳಬೇಕು?

ಸದಾಶಿವನು —ಅಮಾತ್ಯಶ್ರೇಷ್ಠರೇ! ಏನು ಹೇಳಲಿ? ನನ್ನ ದುರ್ದೈವವು ನನಗೆ ತಡಹಾಕಿತು ಈ ನಗರದಲ್ಲ ಕಾಲಿಡುತ್ತಲೇ ನನಗೆ ಉತ್ಪಾತಗಳಾದವು. ನಿಮ್ಮ ನಾಲ್ಕನೇ ಪ್ರಾಕಾರದ ಕಾವಲುಗಾರನು ನನಗೆ ತೊಂದರೆ ಪಡಿಸಿ ಆ ದಿನ ರಾತ್ರಿ ನನ್ನನ್ನು ಹೊರಗಟ್ಟಿದನು, ಇಲ್ಲಿ ನನಗೆ ಶತ್ರುಗಳಿಲ್ಲದಿದ್ದರೂ, ಯಾರೋ ನನ್ನನ್ನು ಪ್ರತಿಬಂಧಿಸಿ ಕತ್ತಲಕೋಣೆಯಲ್ಲಿ ಚಲ್ಲಿದರು ಸುದೈವದಿಂದ ಪಾರಾಗಿ ನಿಮ್ಮ ಸನ್ನಿಧಿಯಲ್ಲಿ ಸೇರಿರುವೆನು. ಹೀಗೆ ನನಗೆ ಪ್ರಾಣಾಂತ ಸಂಕಟವನ್ನು ಒದಗಿಸಿದವರು ಯಾರೆಂಬದು ನನಗೆ ಇದುವರೆಗೂ ತಿಳಿಯದೆ ಹೋಗಿರುವದು.

ಇದರಿಂದ ನನ್ನ ಸ್ವಾಮಿಯ ಕಾರ್ಯಕ್ಕೆ ದೊಡ್ಡ ಗಂಡಾಂತರವು ಬಂದಿತು. ಹದಿನೈದು ದಿನಗಳ ವರೆಗೆ ದುರ್ಗದ ಉಸಾಬರಿಗೆ ಹೋಗದಂತೆ ನಾನು ಖಾನನನ್ನು ಮರುಳುಗೊಳಿಸಿ ಬಂದಿದ್ದರೂ, ಆ ವಿಷಯಾಂಧನು ಏನು ಮಾಡಿರುವನೋ ಎಂಬ ಸಂಶಯವು ನನ್ನನ್ನು ಚೆನ್ನಾಗಿ ಬಾಧಿಸುತ್ತದೆ ಮಂತ್ರಿವರ್ಯರೇ, ಮುಂದಿನ ಯತ್ನವೇನು?

ತಿಮ್ಮರಸನು --ಸದಾಶಿವ ಮಂತ್ರಿಗಳೇ, ನಿಮ್ಮನ್ನು ಈ ರೀತಿ ಹಿಂಸೆಪಡಿಸಿದವರು ಇಲ್ಲಿ ಯಾರಿರಬಹುದು? ಎಂದು ನನಗೂ ಆಶ್ಚರ್ಯವಾಗಿದೆ. ನೀವು ನಮ್ಮ ದುರ್ಗದಲ್ಲಿ ಹ್ಯಾಗೆ ಪ್ರವೇಶಿಸಿದಿರಿ?

ಸದಾಶಿವ --ನಾನು ದೂತನ ವೇಷದಿಂದ ಪ್ರವೇಶಿಸಿದೆನು ನಮ್ಮ ಯಜಮಾನನ ಮುದ್ರೆಯುಂಗರವನ್ನು ತೋರಿಸಲು ಮೊದಲಿನ ಮೂರು ಪ್ರಾಕಾರದ ಕಾವಲುಗಾರರು ನನ್ನನ್ನು ತಡೆಯದೆ ಬಿಟ್ಟರು ಆದರೆ ನಾಲ್ಕನೆಯ ಪ್ರಾಕಾರದವನು ಆ ಉಂಗರವನ್ನು ಕಂಡಕೂಡಲೆ ಸ್ವಲ್ಪ ಮೋರೆ ಗಂಟಿಕ್ಕಿ ನನ್ನನ್ನು ಹೊರಗಟ್ಟಿದನು.

ಈ ಮೇರೆಗೆ ಅವರಿಬ್ಬರಲ್ಲಿ ಸಂಭಾಷಣೆಯು ನಡೆದಿರಲು, ನಗರದಮುಖ್ಯ ಕೊತವಾಲನು ಪಹರೆಯ ವರದಿಯನ್ನು ತಂದನು ಅವನು ನಾಲ್ಕನೆಯ ಪ್ರಾಕಾರದ ಕಾವಲುಗಾರನೊಬ್ಬನು ಈಗ ಮೂರುದಿನಗಳಿಂದ ಇಲ್ಲದಂತಾಗಿರುವನೆಂದು ಹೇಳಲು ತಿಮ್ಮರಸನಿಗೆ ನಡದ ಸಂಗತಿಯು ತಟ್ಟನೆ ಹೊಳಯಿತು. ಆಗ ಆತನು ಕೊತವಾಲನಿಗೆ ಚನ್ನಾಗಿ ಸಿಟ್ಟುಮಾಡಿ ಓಡಿಹೋದವನನ್ನು ಹುಡುಕುವಂತೆ ಅಪ್ಪಣೆಕೊಟ್ಟು ಅವನನ್ನು ಕಳಿಸಿದನು. ಬಳಿಕ ಸದಾಶಿವನ ಕಡೆಗೆ ಹೊರಳಿ ಮಂತ್ರಿಗಳೇ, ನಿಮ್ಮನ್ನು ಸೆರೆಹಾಕಿದವರು ಯಾರೆಂಬದು ನಿಮಗೆ ತಿಳಿಯಿತೋ? ಎನಲು--

ಸದಾಶಿವ --ನಿಮ್ಮ ಕೊತವಾಲನು ತಂದ ಸುದ್ದಿಯಿಂದ ಆ ಕಾವಲುಗಾರನಲ್ಲಿಯೇ ಏನೋ ರಹಸ್ಯವಿದ್ದ ಹಾಗೆ ತೋರುತ್ತದೆ

ತಿಮ್ಮರಸನು --ನಿಮ್ಮ ಈ ಅನುಮಾನವು ನಿಜವಿರುತ್ತದೆ ಶತ್ರುಗಳ ಕಡೆಯವರು ಯಾವ ಯಾವ ವೇಷಗಳಿಂದ ನಮ್ಮ ಹೊಟ್ಟೆಯಲ್ಲಿ ಹೊಕ್ಕು ಬೆನ್ನಲ್ಲಿ ಬರುಯುತ್ತಾರಂಬದು ನಿಯಮವಿಲ್ಲ, ಬಹುಶಃ ಆ ಕಾವಲುಗಾರನು ದಾವಲ್‌ಖಾನನ ಗುಪ್ತಚಾರನೇ ಇರಬಹುದು. ಅವನು ಹೀಗೆ ನಿಮ್ಮನ್ನು ತೊಂದರೆಪಡಿಸಿ, ತನ್ನ ಒಡೆಯನ ಹಿತಸಾಧಿಸುವದಕ್ಕಾಗಿ ಕೊಂಡಪಲ್ಲಿಗೆ ಓಡಿ ಹೋಗಿರಬಹುದು.

ಹೋಗಲಿ! ಇವರ ಬುದ್ಧಿವೈಭವವು ಎಷ್ಟಿದೆಯೆಂಬದು ಒಮ್ಮೆ ಬೈಲಿಗೆ ಬಿದ್ದು ಹೋಗಲಿ! ಸದಾಶಿವಅಮಾತ್ಯರೇ, ಇನ್ನು ನೀವು ತಡಮಾಡಬೇಡಿರಿ ಖಾನನ ಪಾರುಪತ್ಯಕ್ಕಾಗಿ ಹತ್ತುವಷ್ಟು ಸೈನ್ಯವನ್ನು ತಕ್ಕೊಂಡು ಶೀಘ್ರವಾಗಿ ಇಲ್ಲಿಂದ ಹೊರಡಿರಿ, ನಡೆಯಿರಿ ನಿಮಗೆ ಚಕ್ರವರ್ತಿಗಳ ಭೆಟ್ಟಿಯನ್ನು ಮಾಡಿಸುವೆನು

ಹೀಗೆ ನುಡಿದು ತಿಮ್ಮರಸನು ಸದಾಶಿವನೊಡನೆ ಅರಮನೆಗೆ ಹೋಗಿ ಅವನಿಗೆ ರಾಯರ ಸಂದರ್ಶನ ಮಾಡಿಸಿದನು. ಗಜಪತಿಗೆ ಒದಗಿದ ವಿಪತ್ತಿಗಾಗಿ ರಾಯರು ಅವನಿಗೆ ಸಹಾಯಮಾಡಲೊಪ್ಪಿದರು ಬಳಿಕ ಮಾರನೆಯ ದಿನ ಸದಾಶಿವನು ತಮ್ಮ ಸೈನ್ಯವನ್ನೂ, ರಾಯರ ದಂಡಿನಲ್ಲಿ ತನಗೆ ಬೇಕಾದಷ್ಟು ದಂಡನ್ನೂ ತಕ್ಕೊಂಡು ಖಾನನ ಪಾರುಪತ್ಯಕ್ಕಾಗಿ ಅತಿ ಹುರುಪಿನಿಂದ ಹೊರಟನು ಆದರೆ ನಡುದಾರಿಯಲ್ಲಿಯೇ ಕರ್ಣಕಠೋರವಾದ ಸುದ್ದಿಯು ಅವನಿಗೆ ಹತ್ತಿತು ಖಾನನು ಕೊಂಡಪಲ್ಲಿಯ ದುರ್ಗವನ್ನು ಸೂರೆಗೊಂಡು ಪದ್ಮೆಯನ್ನು ಸೆರೆಹಿಡಿದನೆಂದೂ, ಗಜಪತಿಯು ಆತನ ಕೈಗೆ ಸಿಕ್ಕದೆ ಓಡಿಹೋದನೆಂದೂ ಕೊಂಡಪಲ್ಲಿಯಿಂದ ಬರುತ್ತಿದ್ದ ವಿಶ್ವಾಸಿಕರಾದ ಕೆಲಜನ ಭಟರು ಹೇಳಿದರು ಇದರಿಂದ ಸದಾಶಿವನಿಗೆ ಸಿಡಿಲು ಬಡಿದಂತಾಯಿತು ತಾನು ಪಟ್ಟ ಸಾಹಸವೆಲ್ಲವೂ ಗೊತ್ತಿಗೆ ಮುಟ್ಟದೆ, ಕೆಲಸವು ಕೆಟ್ಟು ಹೋಯಿತೆಂದು ಅವನು ಚಿಂತಾಗ್ನಿಯಲ್ಲಿ ಬೆಂದು ಬೆಂಡಾಗತೊಡಗಿದನು ಖಾನನನ್ನು ನಡುದಾರಿಯಲ್ಲಿಯೇ ತರುಬಿ ಅವನ ಗಂಟಲು ಒಡೆದು, ಆ ಸಾಧ್ವೀಶಿರೋಮಣಿಯನ್ನು ಬಿಡಿಸಬೇಕೆಂದು ಆತನು ಯೋಚಿಸಿದನು ಅದಕ್ಕಾಗಿ ಅವನು ಖಾನನ ಬೀಡು ಎಲ್ಲಿರುವದೆಂಬದನ್ನು ಗೊತ್ತು ಹಚ್ಚುವದಕ್ಕಾಗಿ ವೇಗಶಾಲಿಗಳಾದ ಕೆಲಜನ ಹಯಪತಿಗಳನ್ನು ಕಳಿಸಿದನು ಬಳಿಕ ತಾನೂ ಖಾನನ ಬೆನ್ನಟ್ಟಿ ನಡೆದನು

ಮುಂದೆ ಮೂರು ನಾಲ್ಕು ದಿನಗಳ ಮೇಲೆ ಖಾನನ ಶೋಧಕ್ಕಾಗಿ ಹೋಗಿದ್ದ ಅಶ್ವಾರೋಹರು ಮರಳಿ ಬಂದರು ಖಾನನು ರಾಯಚೂರದುರ್ಗವನ್ನು ಆಶ್ರಯಿಸಿ, ಭದ್ರವಾಗಿ ಕುಳಿತಿರುವನೆಂಬ ಸಂಗತಿಯು ಶ್ರವಣದಿಂದ ಸದಾಶಿವನ ಸಂತಾಪಾಗ್ನಿಯು ಹೆಚ್ಚಿತು ಅವನು ದಾರಿಯಲ್ಲಿ ತಡಮಾಡದೆ, ಸೈನ್ಯದೊಡನೆ ತಿರುಗಿ ವಿಜಯನಗರಕ್ಕೆ ಬಂದು, ತಿಮ್ಮರಸನಿಗೆ ನಡೆದ ಸಂಗತಿಯನ್ನು ನಿವೇದಿಸಿದನು. ಮತ್ತು ಆತನ ಅಭಿಪ್ರಾಯದಂತೆ ಪದ್ಮೆಗೆ ಧೈರ್ಯ ಹೇಳುವದಕ್ಕಾಗಿ ವೇಷಾಂತರದಿಂದ ರಾಯಚೂರಿಗೆ ಹೊರಟು ಹೋದನು

ಇತ್ತ ತಿಮ್ಮರಸನು ರಾಯರ ಸಮ್ಮತಿಯಿಂದ ರಾಯಚೂರ ಮೇಲೆ

ಸ್ವಾರೀ ಮಾಡುವದಕ್ಕಾಗಿ ಯುದ್ಧಸಾಮಗ್ರಿಗಳನ್ನು ಸಿದ್ಧಪಡಿಸಲುದ್ಯೋಗಿಸಿದನು, ಹಾಗು ರಾಯಚೂರ ದುರ್ಗವು ವಿಜಾಪುರದವರ ಆಳಿಕೆಗೆ ಒಳಪಟ್ಟದ್ದರಿಂದ ದಾವಲ್‌ಖಾನನು ಕಾಲುಕೆದರಿ ತೆಗೆದ ಜಗಳವನ್ನು ಅದಿಲ್‌ಶಾಹಿಗೆ ತಿಳಿಸುವದಕ್ಕಾಗಿ ವಿಜಯಸಿಂಹನೆಂಬ ದೊಡ್ಡ ಸರದಾರನನ್ನು ರಾಯಭಾರಿಯನ್ನಾಗಿ ನೇಮಿಸಿ ಕಳುಹಿದನು

ಆ ಕಾಲಕ್ಕೆ ದಕ್ಷಿಣಹಿಂದುಸ್ಥಾನದಲ್ಲಿ ವಿಜಯನಗರದ ತರುವಾಯ ವೈಭವಸಂಪನ್ನವೂ, ತೇಜಸ್ಸುಳ್ಳದ್ದೂ ಆದ ರಾಜ್ಯವೆಂದರೆ ವಿಜಾಪುರವೇ ಆಗಿತ್ತೆಂದು ಹೇಳಬಹುದು ಇದನ್ನು ಈಗ ಎರಡನೇ ಅದಿಲ್‌ಶಹನು ಆಳುತ್ತಿದ್ದನು ಇವನು ಇಪ್ಪತ್ತುವರುಷದ ತರುಣನಾಗಿದ್ದರೂ ವಿವೇಕಿಯಾಗಿದ್ದನು. ಇವನ ನ್ಯಾಯಪ್ರಿಯತೆಯು ಪ್ರಸಿದ್ಧಿಯನ್ನು ಪಡೆದಿತ್ತು. ಇವನ ಹಿರಿಯರು ವಿಜಯನಗರದವರ ಸಂಗಡ ದ್ವೇಷಕಟ್ಟಿಕೊಂಡಿದ್ದರೂ, ಈತನು ಅಂಥ ಹುಚ್ಚಿಗೆ ಹೋಗಿದ್ದಿಲ್ಲ. ಆದ್ದರಿಂದಲೇ ತಿಮ್ಮರಸನು ಮೇಲೆ ಹೇಳಿದಂತೆ ಈತನ ಬಳಿಗೆ ರಾಯಭಾರಿಯನ್ನು ಕಳಿಸಬೇಕಾಯಿತು

ವಿಜಯಸಿಂಹನು ವಿಜಾಪುರವನ್ನು ಮುಟ್ಟಿ ಬಾದಶಹನ ದರ್ಬಾರಕ್ಕೆ ಹೋದನು ಬಾದಶಹನು ಅವನನ್ನು ಉಚಿತಮರ್ಯಾದೆಯಿಂದ ಸತ್ಕರಿಸಿದನು. ಬಳಿಕ ವಿಜಯಸಿಂಹನು ಬಾದಶಹನನ್ನು ಕುರಿತು, ರಾಯರ ಸಂದೇಶವನ್ನು ಹೇಳತೊಡಗಿದನು. "ನ್ಯಾಯಪ್ರಿಯನಾದ ಬಾದಶಹನೇ, ನ್ಯಾಯಪ್ರಿಯರಾದ ನಮ್ಮ ಚಕ್ರವರ್ತಿಗಳು ಹೇಳಿದ್ದೇನಂದರೆ— ನಿಮ್ಮ ಹಸ್ತಕನೂ, ರಾಯಚೂರ ದುರ್ಗಾಧಿಪತಿಯೂ ಆದ ದಾವಲ್‌ಖಾನನು ಅನ್ಯಾಯದಿಂದ ಕೊಂಡಪಲ್ಲಿಯ ಮೇಲೆ ಸ್ವಾರಿಮಾಡಿ ಅಲ್ಲಿಯ ದುರ್ಗಾಧಿಪತಿಯಾದ ವೀರನಾರಾಯಣಗಜಪತಿಯ ಪಟ್ಟಮಹಿಷಿಯನ್ನು ಸೆರೆಹಿಡಿದು ಒಯ್ದಿರುತ್ತಾನೆ. ಗಜಪತಿಯು ನಮ್ಮೊಡನೆ ಮಿತ್ರಭಾವದಿಂದ ನಡಕೊಳ್ಳುತ್ತಾನೆಂಬದನ್ನು ದಾವಲ್‌ಖಾನನು ಬಲ್ಲನು. ಹೀಗಿದ್ದರೂ ಗಜಪತಿಯ ಮೇಲೆ ಸ್ವಾರಿಮಾಡಿದ್ದಕ್ಕೆ ಖಾನನ ಪಾರುಪತ್ಯ ಮಾಡುವದಕ್ಕಾಗಿ, ನಾವು ಅವನ ಮೇಲೆ ದಂಡಯಾತ್ರೆಗೆ ಹೊರಡುವದನ್ನು ನಿಶ್ಚಯಿಸಿದ್ದೇವೆ, ನಿಮಗೆ ಆತನ ಈ ಕೃತಿಯು ನಿಂದ್ಯವೆಂದು ತೋರಿದರೆ, ಅವನು ನಮ್ಮೆಡೆಗೆ ಶರಣುಬರುವಂತೆ ಮಾಡಬೇಕು. ಇಲ್ಲದಿದ್ದರೆ, ನಮ್ಮ ದಂಡಯಾತ್ರೆಯು ನಿಮ್ಮನ್ನೂ ಸುತ್ತುಗಟ್ಟದೆ ಬಿಡದು..

ಈ ಮೇರೆಗಿರುವ ಸಂದೇಶವನ್ನು ಕೇಳಿ, ಬಾದಶಹನಿಗೆ ಸಂತಾಪವಾಯಿತು. ಜಗತ್ತಿನಲ್ಲಿ ಸ್ವಾಭಿಮಾನವೆಂಬುದು ಸರ್ವಪ್ರಾಣಿಗಳಲ್ಲಿಯೂ ಇರುವಾಗ ಆದಿಲ್‌ಶಹನಂಥ ಯುವನಭೂಪತಿಯಲ್ಲಿದ್ದದ್ದು ಆಶ್ಚರ್ಯವಲ್ಲ ಆಗ ಅವನು ವಿಜಯಸಿಂಹನನ್ನು ಕುರಿತು—ರಾಯಭಾರಿಗಳೇ, ನಿಮ್ಮ ಚಕ್ರವರ್ತಿಗಳು ಕಳಿಸಿದ ಸಂದೇಶಕ್ಕೆ ನಾನೂ ಪ್ರತಿಸಂದೇಶವನ್ನು ಕಳಿಸಿಕೊಡುವೆನು. ದಂಡಯಾತ್ರೆಗೆ ನಮ್ಮ ಭುಜದಂಡಗಳು ಅಂಜುವವೆಂದು ನಿಮ್ಮ ಸಾರ್ವಭೌಮನು ಎಣಿಸಿದ ಹಾಗೆ ತೋರುತ್ತದೆ. ಇರಲಿ, ಒಮ್ಮೆ ಆದಿಲ್‌ಶಾಹಿಯ ಕೈಯನ್ನು ನಿಮ್ಮ ರಾಯರಿಗೆ ತೋರಿಸುವೆನು, ಎಂದು ನುಡಿದು ಬಳಿಯಲ್ಲಿದ್ದವರಿಗೆ ಸನ್ನೆಯನ್ನು ಮಾಡಿದನು ಕೂಡಲೆ ಮೂರು-ನಾಲ್ಕು ಜನರು ಎದ್ದು, ವಿಜಯಸಿಂಹನನ್ನು ಪ್ರತಿಬಂಧಿಸಿ ಅವನನ್ನು ಕಾರಾಗೃಹದ ಕಡೆಗೆ ಸಾಗಿಸಿದರು ದುರ್ಗಂಧಮಯವೂ, ಅಂಧಸ್ಸಿನ ಕೂಪವೂ ಆದ ಒಂದು ಸಣ್ಣ ಕೊಟ್ಟಡಿಯಲ್ಲಿ ವಿಜಯಸಿಂಹನು ಭವಿತವ್ಯವನ್ನು ಚಿಂತಿಸುತ್ತ ಬಿದ್ದುಕೊಂಡನು ಈ ಸಂಗತಿಯು ಹಾ ಹಾ ಅನ್ನುವಷ್ಟರಲ್ಲಿ ವಿಜಯನಗರಕ್ಕ ತಲುಪಿತು ಕೃಷ್ಣದೇವರಾಯರು ಬಾದಶಹನ ಈ ಉದ್ದಾಮತನಕ್ಕೆ ಹಲ್ಲುಕಡಿಯುತೊಡಗಿದರು. ನಾವಲ್‌ಖಾನನ ಸೆರೆಯಲ್ಲಿ ಸಿಕ್ಕ ಪದ್ಮೆಯನ್ನು ಬಿಡಿಸಿ, ಆಕೆಯ ಪಾತಿವ್ರತ್ಯ ಧರ್ಮವನ್ನು ಕಾಯುವದೊಂದು ಮಹತ್ವದ ಕೆಲಸವು ರಾಯರ ಕೊರಳಿಗೆ ಬಿದ್ದದ್ದಲ್ಲದೆ, ವಿಜಯಸಿಂಹನನ್ನು ಕಾರಾಗೃಹದಿಂದ ಬಿಡಿಸಿ, ಆದಿಲ್‌ಶಾಹಿಗೆ ಪ್ರಾಯಶ್ಚಿತ್ತವನ್ನುಂಟುಮಾಡುವ ಮತ್ತೊಂದು ಕೆಲಸವೂ ಅವರ ಪಾಲಿಗೆ ಬಂದಿತು ಈ ಎರಡೂ ಕೆಲಸಗಳೂ ಯಶಸ್ವೀಯಾಗಿ ಪಾರಾಗುವಂತೆ ಸೈನ್ಯದ ಸಿದ್ಧತೆಯು ಭರದಿಂದ ನಡಯಿತು ಇತ್ತ ಆದಿಲ್‌ಶಹನೂ-ನಾವಲ್‌ಖಾನನೂ ತಮ್ಮತಮ್ಮ ದಳಪತಿಗಳನ್ನು ಪ್ರೋತ್ಸಾಹಿಸಿ, ಹಿಂದೂ ಅರಸರ ಸೊಕ್ಕು ಅಡಗುವಂತೆ ಮಾಡಬೇಕೆಂದು ರಣಸಾಮಗ್ರಿಗಳನ್ನು ಕೂಡಹಾಕತೊಡಗಿದರು. ಆ ತ್ರಿವರ್ಗರಲ್ಲಿ ಹುಟ್ಟಿದ ರಣೋತ್ಸಾಹವು ವರ್ಣನಾತೀತವಾಗಿತ್ತು.

# ಐದನೆಯ ಪ್ರಕರಣ.

## ಫಕೀರ.

-(೦)-

ಪ್ರಿಯವಾಚಕರೇ, ವಿಜಯನಗರ-ವಿಜಾಪುರಗಳಲ್ಲಿ ಯುದ್ಧಸಾಮುಗ್ರಿಗಳು ಸಿದ್ಧವಾಗುವವರೆಗೆ ನಾವು ರಾಯಚೂರಲ್ಲಿ ಪದ್ಮೆಯ ಸಮಾಚಾರವನ್ನು ತಕ್ಕೊಳ್ಳೋಣ ನಡೆಯಿರಿ.

ಖಾನನು ಪದ್ಮೆಯನ್ನು ಸೆರೆಹಿಡಿದ ಬಳಿಕ ಬಹು ಎಚ್ಚರದಿಂದ ಆಕೆಯನ್ನು ಸಂಬಾಳಿಸುತ್ತ ರಾಯಚೂರ ಕೋಟೆಯನ್ನು ಹೊಕ್ಕನು ಕೋಟೆಯಲ್ಲಿ ಸೇರುವ ವರೆಗೆ ಆತನಿಗೆ ಜೀವದಲ್ಲಿ ಜೀವವಿದ್ದಿಲ್ಲ ಯಾವ ಹೊತ್ತಿಗೆ ಸದಾಶಿವನು ಸೈನ್ಯ ತಕ್ಕೊಂಡು ಬಂದು ಮಧ್ಯದಲ್ಲಿಯೇ ಗಂಟುಬೀಳುವನೋ ಎಂದು ಅವನು ಚಿಂತಿಸುತ್ತಿದ್ದನು. ಹೀಗಾದ ಪಕ್ಷದಲ್ಲಿ ಕೈಗೆ ಬಂದು ತುತ್ತು ಬಾಯಿಗೆ ಬಾರದೆ ಹೋದೀತೆಂದು ಅವನು ಬಹಳ ಅಂಜುತ್ತಿದ್ದನು. ಅದರಿಂದ ಅವನು ಮಾರ್ಗದಲ್ಲಿ ಸ್ವಲ್ಪವೂ ವಿಶ್ರಾಂತಿಯನ್ನು ತಕ್ಕೊಳ್ಳಲಿಲ್ಲ ವಿಜಯನಗರದಲ್ಲಿ ಕಾವಲುಗಾರನಾಗಿದ್ದ ಅವನ ಗುಪ್ತಚಾರನು, ಸದಾಶಿವನು ವಿಜಯನಗರಕ್ಕೆ ಬಂದಿರುವನೆಂದು ಹೇಳಲು, ಖಾನನು ಅತಿಶಯ ಅವಸರದಿಂದ ಕೋಟೆಗೆ ಲಗ್ಗೆಹತ್ತಿ ಗಜಪತಿಯನ್ನು ಸೋಲಿಸಿ, ಪದ್ಮೆಯನ್ನು ಸಂಪಾದಿಸಬೇಕಾದರೆ ಅವನಿಗೆ ಸಾಕುಸಾಕಾಗಿ ಹೋಗಿತ್ತು. ಇಷ್ಟು ಕಷ್ಟಬಟ್ಟು ಹಿಡಿದು ತಂದ ಪದ್ಮೆಯನ್ನು ರಕ್ಷಿಸಿಕೊಳ್ಳುವಲ್ಲಿ ಜಾಗರೂಕತೆಯನ್ನು ತೋರಿಸಿದ್ದು ಸ್ವಾಭಾವಿಕವೇ ಆಗಿರುವದು.

ಹೀಗೆ ಹಾದಿಯಲ್ಲಿ ಜಾಗರೂಕನಾಗಿದ್ದ ಖಾನನು ರಾಯಚೂರಿಗೆ ಮುಟ್ಟಿದ ಬಳಿಕಾದರೂ ನಿಶ್ಚಿಂತನಾಗಿರಲಿಲ್ಲ ಪದ್ಮೆಯನ್ನು ಒಂದು ಸುಂದರವಾದ ಮಂದಿರದಲ್ಲಿಟ್ಟು ಮೇಲೆ ವಿಶ್ವಾಸಿಕರಾದ ಖೋಜಾ ಜನರ ಕಾವಲಿರಿಸಿದನು, ಮತ್ತು ತನ್ನ ಪರವಾನಿಗೆಯ ಹೊರತು ಯಾರನ್ನೂ ಒಳಗೆ ಬಿಡಕೂಡದೆಂದು ಅವರಿಗೆ ಕಟ್ಟಪ್ಪಣೆ ಮಾಡಿದನು. ಬಳಿಕ ಖಾನನು ಪದ್ಮೆಯ ಕಡೆಗೆ ಹ್ಯಾಗೆ ಹೋಗಬೇಕು? ಆಕೆಯ ಮುಂದೆ ಹ್ಯಾಗೆ ಮಾತಾಡಬೇಕು? ಅವಳು ಈಗಾಗಲೇ, ನನ್ನೊಡನೆ ಮನಬಿಚ್ಚಿ ಮಾತಾಡಬಹುದೇ? ಎಂಬ ವಿಚಾರಗಳನ್ನು ಮನಸ್ಸಿನಲ್ಲಿ ತಂದುಕೊಂಡು ಬಹು ಆಸ್ಥೆಯಿಂದ ಅವುಗಳಿಗೆ ಸರಿಯಾದ ಉತ್ತರಗಳನ್ನು ಕಲ್ಪಿಸಿಕೊಳ್ಳಹತ್ತಿದನು. ಅವನಿಗೆ ಪದ್ಮೆಯ ಹೊರತು ಅನ್ಯ ವಿಷಯವೇ ಬೇಕಿಲ್ಲೆಂದು

ಅನಿಸಹತ್ತಿತು ಹೀಗೆ ಚಿಂತಿಸುವಾಗ ತನಗೆ ಶತ್ರುಗಳಿಂದ ಪದ್ಮೆಯ ವಿಯೋಗವು ಒದಗಿದರೆ, ಹ್ಯಾಗೆಂಬ ಕಲ್ಪನೆಗಳು ಬರಲು, ಅವನು ಆಗ ವಿಷಣ್ಣವದನನಾಗುವನು ಅವನ ದೈನ್ಯಾವಸ್ಥೆಯು ಹೆಚ್ಚುವದು, ಉತ್ತರಕ್ಷಣದಲ್ಲಿ ಧೈರ್ಯವ ತಂದುಕೊಂಡು ಅದಾವ ವೀರನವನು ಪದ್ಮೆಯನ್ನು ಬಿಡಿಸಿಕೊಂಡು ಹೋಗುವವನು? ಈ ಖಾನಬಹದ್ದೂರನು ಇಂಥ ಕ್ಷುದ್ರ ಶತ್ರುಗಳಿಗೆ ಅಂಜುವನೇ? ಎಂದು ಮೀಸೆ-ಗಡ್ಡಗಳ ಮೇಲೆ ಕೈಯಿಳಿದುಕೊಳ್ಳುವನು ಈ ಪ್ರಕಾರ ಮನೋರಾಜ್ಯದಲ್ಲಿ ಖಾನನು ಗುಂಗಾಗಿರುವಾಗ ಅವನ ಒಳಿಗೆ ಒಬ್ಬ ಫಕೀರನು ಬಂದನು ಖಾನನು ಉಚ್ಚರಕ್ತದ ಮುಸಲ್ಮಾನನಾಗಿದ್ದರೂ ಇಸ್ಲಾಮಿಯಾ ಧರ್ಮದಲ್ಲಿ ಅವನ ನಂಬಿಗೆ ಬಹಳಿತ್ತು ಆದ್ದರಿಂದ ಆತನು ಇಸ್ಲಾಮಿಯಾಧರ್ಮ ಪ್ರಸಾರಕರಾದ ಫಕೀರ-ಮುಲ್ಲಾ ಮೊದಲಾದವರನ್ನು ಬಹಳವಾಗಿ ಪ್ರೀತಿಸುತ್ತಿದ್ದನು ಇವರಿಗೆ ಅರಮನೆಯಲ್ಲಿ ಬೇಕಾದಲ್ಲಿಗೆ ಬೇಕಾದ ಹೊತ್ತಿನಲ್ಲಿ ಹೋಗಲಿಕ್ಕೆ ಪರವಾನಿಗೆಯಿತ್ತು

ಫಕೀರನು ಖಾನನನ್ನು ಕಂಡಕೂಡಲೆ ಅಲ್ಲಾನ ಸ್ಮರಣ ಮಾಡಿದನು. ಆಗ ಖಾನನು ಎಚ್ಚತ್ತು ನೋಡಲು, ಎದುರಿಗೆ ಪೂಜ್ಯನಾದ ಫಕೀರನು ನಿಂತುಕೊಂಡಿದ್ದನು ಕೂಡಲೆ ಅವನು ಫಕೀರನನ್ನು ಗೌರವಿಸಿ, ಉಚಿತ ಸ್ಥಳದಲ್ಲಿ ಕುಳ್ಳಿರಿಸಿ, ತಾನೂ ಕುಳಿತುಕೊಂಡನು ಫಕೀರನು ಬಹು ಕುಶಲನಿದ್ದದರಿಂದ ಖಾನನ ಮನೋಭಾವವನ್ನು ತತ್‌ಕ್ಷಣದಲ್ಲಿ ಕಂಡು ಹಿಡಿದು,—ಖಾನಸಾಹೇಬರೇ, ಇನ್ನು ಮುಂದೆ ನಿಮಗೆ ಯೋಚನೆ ಬೇಡ, ನೀವು ಯತ್ನಿಸಿದ ಕಾರ್ಯವು ಸಫಲವಾಗುವದು, ಎಂದು ನುಡಿದನು ಅದನ್ನು ಕೇಳಿ,—ಖಾನನು ಮಹಾತ್ಮರೇ, ನಿಮ್ಮ ದಯದಿಂದ ಇಷ್ಟು ಕೆಲಸವಾದರೆ ನಾನು ಧನ್ಯನಾಗುವೆನು. ನಿಮ್ಮಂಥವರ ಮಾತು ಹುಸಿಯಾಗುವದಿಲ್ಲವಷ್ಟೇ?

ಫಕೀರ —ಹಾಗೆ ಹುಸಿಯಾಗುತ್ತಿದ್ದರೆ ನಾವು ಫಕೀರರಾಗಿ ಯಾಕೆ ತಿರುಗಬೇಕು?

ಖಾನಸಾಹೇಬ —ನಿಜ, ಫಕೀರ-ಮುಲ್ಲಾಗಳೆಂದರೆ ಸಾಮಾನ್ಯರಲ್ಲ. ಪ್ರತ್ಯಕ್ಷ ದೇವದೂತರು. ಮಹಾತ್ಮರೆ, ನಿಮ್ಮ ಬಳಿಯಲ್ಲಿ ನನ್ನದೊಂದು ಪ್ರಾರ್ಥನೆಯುಂಟು, ಕೋಪವತಾಳದಿದ್ದರೆ ಬಿನ್ನವಿಸುವೆನು

ಫಕೀರ —ಖಾನಸಾಹೇಬರೇ, ನಿಮ್ಮಂಥ ಭೂಪತಿಗಳ ಮೇಲೆ ನಮ್ಮಂಥ ಬಡಫಕೀರರು ಕೋಪವ ಮಾಡಬಹುದೇ? ನೀವು ಮಾನ-ಮರ್ಯಾದೆ ಕೊಟ್ಟು

ನಮ್ಮ ಗೌರವವನ್ನು ಕಾಯ್ದರೇ ನಮ್ಮ ಆಟ! ಇಲ್ಲದಿದ್ದರೆ ನಮ್ಮನ್ನು ಕೇಳುವವ ರಾರು? ಮನಸ್ಸಿನಲ್ಲಿದ್ದದ್ದನ್ನು ಅವಶ್ಯವಾಗಿ ಹೇಳಬೇಕು

ಖಾನಸಾಹೇಬ—ಮಹಾತ್ಮರೇ, ನಾನು ಈಗೊಬ್ಬ ಹಿಂದೂಸುಂದರಿ ಯನ್ನು ನಿಕಾವಮಾಡಿಕೊಳ್ಳಲಿಚ್ಛಿಸುತ್ತೇನೆ ಆ ಸುಂದರಿಯನ್ನೂ ಸಂಪಾದಿಸಿ ತಂದಿದ್ದೇನೆ. ಈಗ ತಾನೇ ಅವಳು ಗಂಡನನ್ನಗಲಿ ಬಂದದ್ದರಿಂದ ಈಗಾಗಲೇ ನನ್ನೊಡನೆ ರಮಿಸಲಕ್ಕೆ ಅವಳು ಇಷ್ಟಪಡುವಳೋ ಇಲ್ಲವೋ ಎಂಬ ಸಂಶಯ ದಿಂದ ವಿಲಂಬ ಮಾಡತೊಡಗಿದ್ದೇನೆ ತಾವು ರಮಲಶಾಸ್ತ್ರದ ಆಧಾರದಿಂದಾಗಲಿ, ಸಾಮುದ್ರಿಕ ಲಕ್ಷಣಗಳ ಮೇಲಿಂದಾಗಲಿ ನನ್ನ ವಿಷಯವಾಗಿ ಆ ತರುಣಿಯ ಮನಸ್ಸು ಹ್ಯಾಗಿರುವದೆಂಬದನ್ನು ಹೇಳುವದಾಗಬೇಕು.

ಫಕೀರ—ಇದನ್ನು ಹೇಳುವದು ತಡವಿಲ್ಲ ನನಗೆ ರಮಲವು ಕರತಲಾ ಮಲಕವಾಗಿರುವದು ಸ್ವಲ್ಪ ಹೊತ್ತಿನಲ್ಲಿಯೇ ಗಣಿತ ಹಾಕಿ ಹೇಳುತ್ತೇನ ಕೇಳು. (ಕಣ್ಣು ಮುಚ್ಚಿಕೊಂಡು ಕೆಲಹೊತ್ತು ಯೋಚಿಸಿ ಬಳಿಕ) ಖಾನನೇ, ನಿನ್ನ ದೈವವು ಉತ್ತಮವಿರುವದು. ಆ ಸುಂದರಿಯು ವೃಭವಶಾಲಿಯಾದ ಪತಿ ಯನ್ನೇ ಇಚ್ಛಿಸುತ್ತಿರುವಳು ಇದರ ಮೇಲಿಂದ ನಿನ್ನನ್ನು ಲಗ್ನವಾಗಲಿಕ್ಕೆ ಅವಳು ಆನಂದದಿಂದ ಒಪ್ಪಿಕೊಳ್ಳುವಳೆಂದು ತಿಳಿಯುತ್ತದೆ. ಆಕೆಗೆ ವಯಸ್ಸಾದರೂ ಬಹಳವಾದಂತೆ ತೋರುವದಿಲ್ಲ ೨೦-೨೨ ವರುಷಗಳಿರಬಹುದು. ಯಾಕೆ, ಖಾನನೇ, ನಮ್ಮ ಮಾತು ನಿಜವೋ ಹ್ಯಾಗೆ?

ಖಾನಸಾಹೇಬ (ಮನಸ್ಸಿನಲ್ಲಿಯೇ ಆನಂದಪಡುತ್ತ)—ಮಹಾತ್ಮರೇ, ತಾವು ಹೇಳಿದ್ದು ನಿಜವಿರುತ್ತದೆ. ಆ ಸ್ತ್ರೀಯು ವೃಭವಶಾಲಿಯಾದ ಪುರುಷನನ್ನು ಇಚ್ಛಿಸುವದು ನಿಜ, ಈ ಸಂಗತಿಯನ್ನು ನಾನು ಕೊಂಡಪಲ್ಲಿಯಲ್ಲಿಯೇ ಕೇಳಿ ದ್ದೇನೆ. ಅವಳ ವಯಸ್ಸನ್ನೂ ನಿಜವಾಗಿ ಹೇಳಿದಿರಿ ರಮಲವು ತಮಗೆ ಚನ್ನಾಗಿ ಸಾಧಿಸಿರುತ್ತದೆ. ಹಾಗಾದರೆ ನಾನು ಈಗ ಆ ಸ್ತ್ರೀಯ ಬಳಿಗೆ ಹೋಗಬಹುದೋ?

ಫಕೀರ—ನೀನು ಆಕೆಯ ಬಳಿಗೆ ಹೋಗತಕ್ಕ ಕಾಲವನ್ನು ನಾನು ಹೇಳಿ ಕೊಡುವೆನು. ಮೊದಲು ನಾನು ಆ ಸ್ತ್ರೀಯ ಸಾಮುದ್ರಿಕವನ್ನು ನೋಡಬೇ ಕಾಗಿದೆ ನಾನು ಆಕೆಯನ್ನು ಕಾಣಬಹುದೋ?

ಖಾನಸಾಹೇಬ—ಮಹಾತ್ಮರೇ ಇದೇನು ಕೇಳುವಿರಿ? ನಿಮ್ಮಂಥವರಿಗೆ ನಮ್ಮ ರಾಣೀವಾಸದಲ್ಲಿ ಹೋಗಲಕ್ಕೆ ಪರವಾನಿಗೆಯೇ? ಅವಶ್ಯವಾಗಿ ಹೋಗ ಬಹುದು. ಹ್ಯಾಗಾದರೂಮಾಡಿ ಆ ಸುಂದರಿಯು ನನ್ನೊಡನೆ ಆನಂದದಿಂದ ನಿಕಾ

ಮಾಡಿಕೊಳ್ಳುವ ಹಾಗೆ ಮಾಡಬೇಕು. ಎಲಾ, ಯಾರಲ್ಲಿ? ಈ ಮಹಾತ್ಮರನ್ನು ಹೊಸದಾಗಿ ತಂದಿಟ್ಟಿರುವ ಆ ಕ್ರೊಂಡಪಲ್ಲಿಯ ಸುಂದರಿಯ ಮಂದಿರಕ್ಕೆ ಮುಟ್ಟಿಸಿ ಬಾ

ಹೀಗೆ ಖಾನನ ಅಪ್ಪಣೆಯಾಗಲು, ಒಬ್ಬ ದೂತನು ಬಂದು ಫಕೀರನನ್ನು ಕರೆದುಕೊಂಡು ನಡೆದನು

ಇತ್ತ "ಖಾಸಬಾಗ" ಎಂಬ ಮಂದಿರದಲ್ಲಿ ಪದ್ಮೆಯು ಕಣ್ಣೀರುದುರಿಸುತ್ತ ಕುಳಿತಿದ್ದಳು. ಆಕೆಯ ಬಳಿಯಲ್ಲಿ ಆಕೆಯ ಜೀವದ ಗೆಳತಿಯಾದ ವಸಂತಸೇನೆಯು ಧೈರ್ಯವ ಹೇಳುತ್ತ ಕುಳಿತಿದ್ದಳು ಆಗ ಅಳ ಅಳುತ್ತ ಪದ್ಮೆಯು— ಗೆಳತೀ, ವಸಂತೆ, ಎಂಥ ಕಠಿಣಪ್ರಸಂಗ ಒಂತವ್ವಾ? ಆ ಚಾಂಡಾಲನು ಇಲ್ಲಿಗೆ ಬಂದಬಳಿಕ ಯಾಕೋ ನಮ್ಮ ಉಸಾಬರಿಗೆ ಬಂದಿಲ್ಲ, ಇದಕ್ಕೆ ನಮ್ಮ ಮೇಲಿರುವ ಭಗವಂತನ ಅನುಗ್ರಹವೇ ಕಾರಣವಿರಬಹುದು ನಿಜವಾದ ಪತಿವ್ರತೆಯರ ಮಾನವನ್ನು ಭಗವಂತನು ತಪ್ಪದೇ ಕಾಯುವನೆಂದು ಭಾರತಪುರಾಣದಲ್ಲಿ ಕೇಳಿದ್ದೇನೆ. ಈಗಾದರೂ ಅನಾಥಯಾದ ನನ್ನ ಮಾನವನ್ನು ಕಾಯುವದು ಆ ದಯಾಘನ ಪರಮಾತ್ಮನ ಕಡೆಗೇ ಇರುತ್ತದೆ. ನೀನು ಆತನ ಹೆಸರು ತಕ್ಕೊಂಡು ನಾವು ಪಾರಾಗಿ ಹೋಗುವದಕ್ಕೆ ಏನಾದರೂ ಹಂಚಿಕೆ ಹುಡುಕಿದೆಯೇನು?

ವಸಂತಸೇನೆ—ರಾಣಿಯವರೇ, ಹೀಗೆ ಅವಸರ ಪಡಿಸಿದರ ಹ್ಯಾಗೆ? ನಾನು ಅದೇ ಮಾರ್ಗಶೋಧದಲ್ಲಿಯೇ ಇದ್ದೇನೆ. ಶ್ರೀ ಭಗವಂತನು ಅನುಕೂಲ ಪ್ರಸಂಗವನ್ನು ಒದಗಿಸಬಹುದೆಂದು ನನಗೂ ನಂಬಿಗೆಯಿರುತ್ತದೆ.

ಪದ್ಮೆ—ವಸಂತೆ, ಮಾಡುವಷ್ಟು ಪ್ರಯತ್ನ ಮಾಡು, ಕಡೆಗೆ ನಮ್ಮ ಜೀವವು ನಮ್ಮ ಕೈಯಲ್ಲಿರುತ್ತದಷ್ಟೇ, ನಮ್ಮ ಶವಗಳು ಕೂಡ ಆ ನೀಚನ ಕೈಗೆ ಸಿಗಬಾರದೆಂದು ನನ್ನ ಇಷ್ಟೆಯಿರುತ್ತದೆ ಆ ಭಗವಂತನು ಏನುಮಾಡಿಸುವನೋ ಮಾಡಿಸಲಿ?

ಈ ಮೇರೆಗೆ ಅವರಿಬ್ಬರು ಹಂಗಳೆಯರು ಮಾತನಾಡುತ್ತಿರಲು ಹೊರಗೆ ಯಾರದೋ ಕಾಲಸಪ್ಪಳವು ಕೇಳಿದಹಾಗಾಯಿತು. ಪದ್ಮೆಯೂ-ವಸಂತಸೇನೆಯೂ ಬೆಟ್ಟಿಬಿದ್ದರು. ಅವ್ವಯ್ಯಾ! ಆ ರಾಕ್ಷಸನೇ ಬಂದಿರಬಹುದೇನೆಂದು ಪದ್ಮೆಯು ಚಟ್ಟನೆ ಚೀರಿದಳು ಈ ಅಂಜಿಕೆಯಿಂದ ಆ ಕೂಡಲೆ ಆಕೆಗೆ ಸ್ಮೃತಿಯೇ ತಪ್ಪಿಹೋಯಿತು ವಸಂತೆಯು ಗಾಬರಿಯಾಗಿ ಆಕೆಯನ್ನು ಸಂತಯಿಸತೊಡಗಿದಳು. ಈ ಸಮಯದಲ್ಲಿ ಮೇಲೆ ಹೇಳಿದ ಫಕೀರನು ಒಳಗೆ ಬಂದನು. ಫಕೀರನ ಕಫನಿ, ಗಡ್ಡ, ಹವಳುಮಣಿಗಳ ಸರ ಇವುಗಳನ್ನು ನೋಡಿ, ವಸಂತೆಯು ಬೆದರಿದಳು.

ಪದ್ಮೆಯಂತೂ ಬವಳಿಬಂದು ಬಿದ್ದಿದ್ದಳು. ಈ ಹೆಂಗಳೆಯರ ಈ ಪ್ರಕಾರದ ದುಃಸ್ಥಿತಿಯನ್ನು ನೋಡಿ ಫಕೀರನಿಗೆ ತುಂಬಾ ಕನಿಕರವುಂಟಾಯಿತು. ಆಗ ಆತನು ತನ್ನ ಕಫನಿಯೊಳಗಿನ ಸೀಸೆಯಿಂದ ಸ್ವಲ್ಪ ಅಂಗಾರ ತೆಗೆದು ಅದನ್ನು ಮಂತ್ರಿಸಿ ಒಂದು ಕಾಗದದಲ್ಲಿ ಹಾಕಿ ಮಡಿಚಿ ವಸಂತಸೇನೆಯ ಕೈಗಿತ್ತು—ಇದನ್ನು ನಿನ್ನ ಸ್ನೇಹಿತೆಯು ಪದ್ಮೆಗೆ ಹಚ್ಚು, ಅಂದರೆ ಒಳಿತಾಗುವದು, ಎಂದು ಹೇಳಿ ತಟ್ಟನೆ ಅಲ್ಲಿಂದ ಹೊರಟು ಹೋದನು.

ಫಕೀರನು ಹೊರಟುಹೋಗಲು ವಸಂತೆಯು ಕಾಗದದ ಮಡಿಕೆಗಳನ್ನು ಬಿಚ್ಚಿದಳು. ಆ ಕಾಗದದ ಒಳಭಾಗದಲ್ಲಿ ಬರೆಯಲ್ಪಟ್ಟ ಅಕ್ಷರಗಳ ಗುರುತು ಆಕೆಗೆ ಹತ್ತಿದಹಾಗಾಯಿತು, ಆದ್ದರಿಂದ ಅವಳು ಲಗುಬಗೆಯಿಂದ ಅಂಗಾರವನ್ನು ಚಲ್ಲಿ ಅದರಲ್ಲಿ ಬರೆದ ಸಂಗತಿಯನ್ನು ಆತುರದಿಂದ ಓದತೊಡಗಿದಳು. ಅದರಲ್ಲಿ ನಾಲ್ಕೇ ಸಾಲುಗಳಿದ್ದವು. ಆ ನಾಲ್ಕು ಸಾಲುಗಳನ್ನು ಓದುವಷ್ಟರಲ್ಲಿ ವಸಂತಸೇನೆಗೆ ಅಮೃತಸೇವನವಾದಂತಾಯಿತು. ಅವಳ ಮೋರೆಯು ಹಿಗ್ಗಿ ಇಷ್ಟಗಲವಾಯಿತು. ಈ ಸಂಗತಿಯನ್ನು ಪದ್ಮೆಗೆ ಯಾವಾಗ ತಿಳಿಸೇನೆಂಬ ಆತುರತೆಯು ಅವಳಲ್ಲಿ ಹುಟ್ಟಿತು. ಕೂಡಲೆ ಅವಳು ಪದ್ಮೆಯ ಕಿವಿಯಲ್ಲಿ ಏನೇನೋ ಮೆಲ್ಲಗೆ ಹೇಳತೊಡಗಿದಳು. ಆಕೆಯು ಬವಳಿಬಂದು ಬಿದ್ದಿರುವಳೆಂಬದನ್ನು ಕೂಡಾ ಮರೆತುಬಿಟ್ಟಳು. ವಸಂತೆಯು ಕಿವಿಯಲ್ಲಿ ಏನೇನೋ ಹೇಳಹತ್ತಿದಾಗ ಪದ್ಮೆಗೆ ಸ್ವಲ್ಪ ಸ್ವಲ್ಪ ಅರಿವುಂಟಾಗತೊಡಗಿತ್ತು, ಅದರಿಂದ ಅವಳಿಗೆ ವಸಂತೆಯ ಮಾತುಗಳು ಸ್ವಪ್ನದಲ್ಲಿ ಕೇಳಿಸಿದ ಹಾಗೆ ಕೇಳತೊಡಗಿದವು. ಆಕೆಯು ಹೇಳುವದು ಪೂರ್ಣವಾಗಲು, ಪದ್ಮೆಯು ತಟ್ಟನೆ ಎದ್ದು ಕುಳಿತು, ಅವರೆಲ್ಲಿ? ಎಂದು ಕೇಳತೊಡಗಿದಳು. ಆಗ ವಸಂತೆಯು ಆಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತು ಗೊತ್ತಾದ ಸಂಗತಿಯನ್ನು ಮತ್ತೊಮ್ಮೆ ಸಾಗ್ರವಾಗಿ ಹೇಳಿದಳು. ಅದನ್ನು ಕೇಳಿದಹಾಗೆ ಪದ್ಮೆಯ ಆಶಾತಂತುವು ದೊಡ್ಡದಾಗತೊಡಗಿತು. ಅವಳು ದಯಾಘನನಾದ ಪರಮಾತ್ಮನನ್ನು ಬಹಳವಾಗಿ ಕೊಂಡಾಡಿದಳು.

ಪದ್ಮೆಗೆ ಅಂಗಾರವನ್ನು ಮಂತ್ರಿಸಿ ಕೊಟ್ಟು, ಹೊರಟುಹೋದ ಫಕೀರನು ನೆಟ್ಟಗೆ ಖಾನನ ಬಳಿಗೆಹೋಗಿ ಬಳ್ಳೇ ಸಂಭ್ರಮದಿಂದಹೀಗೆ ಹೇಳತೊಡಗಿದನು.-- "ಖಾನಬಹಾದ್ದೂರನೇ, ನೀನು ಬಳ್ಳೇ ರಸಿಕನಿರುವಿ, ಅಂತೆಯೇ ಈ ಜಗತ್ಸುಂದರಿಯನ್ನು ಆರಿಸಿ ತಂದಿರುವಿ. ಅಹಾ! ಲಕ್ಷಣಗಳೆಷ್ಟು ಉತ್ತಮ, ರಾಜಭೋಗಕ್ಕೆ ಇಂಥ ಸುಂದರಿಯೇಯೋಗ್ಯಳು, ಈಗ ನಿನ್ನ ಅಂತಃಪುರದಲ್ಲಿ ಸಹಸ್ರ

ಜನಸುಂದರಿಯರಿರುವರು. ಅವರನ್ನು ತಕ್ಕೊಂಡು ಮಾಡುವದೇನು? ಈ ತರುಣೀ ಮಣಿಯನ್ನು ನೋಡಿ ಅವರನ್ನು ನೋಡಿದರೆ, ಅವರು ಸಿಂಗರಿಸಿದ ಹೆಣ್ಣು ಕರಡಿಗಳ ಹಾಗೆ ತೋರುವರು. ಇಂಥ ಅಮೂಲ್ಯ ಸ್ತ್ರೀರತ್ನವು ನಿನಗೆ ದೊರೆತದ್ದಕ್ಕಾಗಿ ನಿನ್ನ ಸುದೈವವನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ ಇರುವದು!!

ಖಾನಸಾಹೇಬ—ಮಹಾತ್ಮರೇ, ಆ ಸುಂದರಿಯ ಲಕ್ಷಣಗಳನ್ನು ನೋಡಿದಿರಾ, ಆಕೆಯು ನನ್ನ ವಿಷಯವಾಗಿ ಏನು ಅಂದಳು? ಇದನ್ನು ಮೊದಲು ಹೇಳಿರಿ.

ಫಕೀರ—ಖಾನಬಹಾದ್ದೂರನೇ, ಇಷ್ಟು ಅವಸರಪಡಬೇಡ, ಹಿಂದೂ ಸ್ತ್ರೀಯರ ಸ್ವಭಾವಧರ್ಮವು ನಿನಗಿನ್ನೂ ತಿಳಿದಿಲ್ಲ

ಖಾನಸಾಹೇಬ—ಹಾಗಾದರೆ, ನಾನು ಹ್ಯಾಗೆ ವರ್ತಿಸಲಿ?

ಫಕೀರ—ಈಗ ನೀನು ಆ ಸುಂದರಿಯ ಭೆಟ್ಟಿಗೆ ಹೋಗುವ ಭರಕ್ಕ ಬೀಳದೆ ಆಕೆಯು ಸಂತುಷ್ಟವಾಗುವ ಹಾಗೆ ಉತ್ತಮ ಸೀರಿ ಸಾಮಗ್ರಿಗಳನ್ನು ಕಳಿಸಿ, ಆಕೆಯ ಆಹಾರ-ವಿಹಾರಗಳ ವ್ಯವಸ್ಥೆಯನ್ನು ಚನ್ನಾಗಿಡು, ಮತ್ತು ಪ್ರೀತ್ಯರ್ಥ ಪ್ರತಿಯ ಮುತ್ತು-ರತ್ನಗಳ ಆಭರಣಗಳನ್ನು ನಿನ್ನ ದಾಸಿಯೊಡನೆ ಆಕೆಯ ಬಳಿಗೆ ಕಳಿಸು

ಖಾನಸಾಹೇಬ—ಇನ್ನೆಷ್ಟು ದಿವಸಗಳವರೆಗೆ ನಾನು ಆ ಸುಂದರಿಯ ದರ್ಶನ ತಕ್ಕೊಳ್ಳಕೂಡದು

ಫಕೀರ—ಹದಿನೈದು ದಿವಸಗಳ ಒಳಹೊರಗೆ ನಾನು ಒಂದು ಪ್ರಶಸ್ತ ದಿವಸವನ್ನು ಹೇಳಿಕೊಡುತ್ತೇನೆ ಆ ದಿವಸ ನೀನು ಆ ಕೋಮಲಾಂಗಿಯ ದರುಶನ ಲಾಭವನ್ನು ಯಥೇಚ್ಛವಾಗಿ ಹೊಂದಬಹುದು.

ಖಾನಸಾಹೇಬ—ಹದಿನೈದು ದಿವಸಗಳ ಮೇಲಾದರೂ ಒರಿಯು ದರ್ಶನ ಲಾಭವೇ? ಮಹಾತ್ಮರೇ, ಇದೊಂದು ನನಗೆ ನೀವು ದೊಡ್ಡ ಶಿಕ್ಷೆಯನ್ನು ವಿಧಿಸಿದಹಾಗಾಯಿತಲ್ಲ? ಇಷ್ಟು ದೀರ್ಘಕಾಲ ನಿರೀಕ್ಷಣೆಯನ್ನು ಹ್ಯಾಗೆ ಮಾಡಲಿ?

ಫಕೀರ (ಸಿಟ್ಟಿನಿಂದ)—ಹೀಗೆಂದರೆ ನನಗೆ ಮಾತಾಡಲಿಕ್ಕೆ ಮಾರ್ಗವಿಲ್ಲ ನಿಮಗೆ ಒಳಿತಾಗಬೇಕೆಂಬ ಇಚ್ಛೆಯಿದ್ದರೆ ನನ್ನ ಮಾತು ಕೇಳಿರಿ. ಇಲ್ಲದಿದ್ದರೆ ನಿಮ್ಮ

ಖಾನಸಾಹೇಬ (ಭಯದಿಂದ)—ಮಹಾತ್ಮರೇ, ಕ್ಷಮಿಸಬೇಕು ನಾನು ನಿಮ್ಮಂಥವರ ಆಜ್ಞೋಲ್ಲಂಘನ ಮಾಡಿ ಕೇಡಿಗೆ ಗುರಿಯಾಗಲಾರೆನು ನಿಮ್ಮ ಅಭಿಪ್ರಾಯದಂತೆ ಹದಿನೈದು ದಿವಸಗಳವರೆಗೆ ಆ ಸುಂದರಿಯ ನೆರಳಿಗೆ ಕೂಡಾ

ಹೋಗುವದಿಲ್ಲ. ಆ ಮೇಲಾದರೂ ನನ್ನ ಮನದಾಶೆಯು ಪೂರ್ಣ ತೃಪ್ತವಾಗಬಹುದೇ?

ಫಕೀರ:—ಅಷ್ಟು ದೃಢತರವಾದ ವಿಶ್ವಾಸವಿದ್ದರೆ ಆದೀತು.

ಈ ಮೇರೆಗೆ ಅವರಿಬ್ಬರಲ್ಲಿ ಸಂಭಾಷಣವು ನಡೆದಿರಲು, ಜಾಸೂದನು ಓಡಿ ಬಂದು ವಿಜಾಪುರದಿಂದ ಒಬ್ಬ ಹೇಜೀಬನು ಬಂದಿದ್ದು ಖಾವಿಂದರನ್ನು ಕಾಣಲು ಸಮಯವನ್ನು ಕೇಳುತ್ತಿರುವನು, ಎಂದು ಹೇಳಿದನು. ಆಗ ಖಾನನು ಚತುರ್ದಿಕ್ಕುಗಳನ್ನೂ ನೋಡುತ್ತ ಫಕೀರನ ಕಡೆಗೂ ನೋಡಿದನು. ಚಾಣಾಕ್ಷನಾದ ಫಕೀರನು ಕೂಡಲೆ,—ಖಾನಬಹಾದ್ದೂರರೇ, ನಿಮ್ಮ ರಾಜಕಾರಣದಲ್ಲಿ ನಮ್ಮದೇನು ಕೆಲಸ? ಇನ್ನು ನನಗೆ ಹೊರಡಲಪ್ಪಣೆ ಕೊಡಿರಿ, ಎಂದು ಎದ್ದು ನಿಂತನು. ಆದರೆ ಪ್ರಕ್ಕನಾದ ಖಾನನು—ತಾನು ವೋರೆ ನೋಡಿದ್ದಕ್ಕೆ ಫಕೀರನು ಮನಸ್ಸಿಗೆ ಹಚ್ಚಿಕೊಂಡನೆಂದು ಭಾವಿಸಿ, ನುಡಿದನೇನಂದರೆ—ಮಹಾತ್ಮರೇ, ನಮಗೆ ಗುರುಸ್ವರೂಪರಾದ ನಿಮ್ಮಂಥವರು ಬಳಿಯಲ್ಲಿದ್ದರೆ ರಾಜಕರಣವು ಕೆಡುವದೇ? ತಿರುಗಿ ಕೇಳಿದರೆ ನಮಗೆ ನಿಮ್ಮ ಆಲೋಚನೆಯ ಅವಶ್ಯಕತೆಯು ಬಹಳಿರುವದು. ನೀವು ಹೋಗಕೂಡದು.

ಹೀಗೆ ಖಾನನು ನಿರ್ಬಂಧಪಡಿಸಲು ಫಕೀರನು ನಿರುಪಾಯನಾದವನಂತೆ ತೋರ್ಪಡಿಸುತ್ತ ಕುಳಿತಸ್ಥಳದಲ್ಲಿ ಪುನಃ ತಳವೂರಿದನು. ಮುಂದೆ ಸ್ವಲ್ಪಹೊತ್ತಿನಲ್ಲಿ ಹೇಜೀಬನು ಒಳಗೆ ಪ್ರವೇಶಿಸಿ ಖಾನನಿಗೆ ಕುರ್ನಿಸು ಮಾಡಿ ತಂದಿದ್ದ ಥೈಲಿಯನ್ನು ಅವನ ಮುಂದೆ ಚೆಲ್ಲಿದನು. ಖಾನನು ಬೊಗ್ಗಿ ಥೈಲಿಯನ್ನು ತಕ್ಕೊಂಡು ಒಡೆದು ಅದರೊಳಗಿನ ಲಕ್ಕೋಟಿಯನ್ನು ಕೈಯಲ್ಲಿ ಹಿಡಿದು ಅದರ ಅಂಚುಗಳನ್ನು ಬಹು ಜೋಕಯಿಂದ ಹರಿದನು. ಮತ್ತು ಒಳಗಿನ ಪತ್ರದ ಸುರುಳಿಯನ್ನು ಬಿಚ್ಚಿ ಓದತೊಡಗಿದನು. ಅದರ ಅಭಿಪ್ರಾಯವೇನಂದರೆ.—

"ಆದಿಲ್‌ಶಾಹಿ ಆಜ್ಞಾಂಕಿತ ರಾಯಚೂರದುರ್ಗೇಶ್ವರ ದಾವಲ್‌ಖಾನನಿಗೆ ಅಪ್ಪಣೆ—ನೀನು ಕೊಂಡಪಲ್ಲಿಯ ಸ್ತ್ರೀರತ್ನವನ್ನು ಹರಣಮಾಡಿ ತಂದದ್ದರಿಂದ ವಿಜಯನಗರದ ಸೇನಾಸಮುದ್ರವು ರಾಯಚೂರನ್ನು ಮುಣುಗಿಸಲಿಚ್ಛಿಸುತ್ತದೆ. ನೀನು ಆ ಸಮುದ್ರಶೋಷಣಕ್ಕಾಗಿ ವಡವಾಗ್ನಿಯನ್ನು ಪ್ರಜ್ವಲಗೊಳಿಸುತ್ತಿರುವೆಯೋ, ಅಥವಾ ಆ ಸುಂದರಿಯ ಬೆಡಗಿನಲ್ಲಿ ಕಡುಕೊಂಡು ಬಿದ್ದಿರುವೆಯೋ? ನಿನಗೆ ಖಂಡಿತ ಅಪ್ಪಣೆ ಮಾಡುವದೇನಂದರೆ—ವಿಜಯನಗರದವರ ಅಬ್ಬರವನ್ನು ತಗ್ಗಿಸದವಿನಹ ನೀನು ಆ ಹೆಣ್ಣನ್ನು ಮುಟ್ಟಕೂಡದು. ನಮ್ಮ ಚತುರಂಗಬಲವು ನಿನ್ನ ಸಹಾಯಕ್ಕಾಗಿ ಸ್ವಲ್ಪ ದಿವಸಗಳಲ್ಲಿಯೇ ಬರುವದು. ಇತ್ಯಾದಿ"

ಪತ್ರ ಓದುವದಾದಮೇಲೆ ಆದನ್ನು ಕೆಳಗಿಟ್ಟು ಖಾನನು ಉಸರ್ಗಳೆಯುತ್ತ ದಿಂಬಿಗೆ ಆತು ಕುಳಿತನು ಅವನ ಮನಸ್ಸಿಗೆ ಸ್ವಲ್ಪಾದರೂ ಸೊಗಸಾಗದಾಯಿತು. ಆಗ ಅವನು ಹೇಜೀಬನಿಗೆ ವಿಶ್ರಾಂತಿಗೋಸ್ಕರ ಅಪ್ಪಣೆಕೊಟ್ಟು ಬಳಿಯಲ್ಲಿ ಕುಳಿತ ಫಕೀರನನ್ನು ಕುರಿತು—ಮಹಾತ್ಮರೇ, ನನ್ನ ಬಯಕೆಯು ಕೈಗೂಡುವ ಲಕ್ಷಣವು ತೋರುವದಿಲ್ಲ ವಿಜಯನಗರದವರು ನಮ್ಮ ಮೇಲೆ ಸ್ವಾರೀಮಾಡುವರಂತೆ! ಅವರನ್ನು ಯುದ್ಧಮುಖಾಂತರವಾಗಿ ದಣಿಸಿದ ಹೊರತು ನೀನು ಆ ಹೆಣ್ಣನ್ನು ಮುಟ್ಟಕೂಡದೆಂದು ನಮ್ಮ ಬಾದಶಹರ ಕಟ್ಟಪ್ಪಣೆಯಾಗಿದೆ ಯುದ್ಧದ ಮಾತನ್ನು ಯಾರು ಹೇಳುವರು? ನಮಗೆ ಜಯವಾಗುವದೋ ಅಥವಾ .. . ಮುಂದಿನ ಮಾತನ್ನು ಆಡಲಿಕ್ಕೆ ನನಗೆ ಅಂಜಿಕೆ ಬರುತ್ತದೆ ಮಹಾತ್ಮರೇ, ಈ ಪ್ರಸಂಗದಲ್ಲಿ ಹ್ಯಾಗೆ ಮಾಡಲಿ?

ಫಕೀರ (ಒಳ್ಳೇ ಧೂರ್ತತನದಿಂದ)—ಖಾನನೇ, ಈ ಸಂಗತಿಯನ್ನು ನಾನು ರಮಲಶಾಸ್ತ್ರಾಧಾರದಿಂದ ಈ ಮೊದಲೇ ಕಂಡು ಹಿಡಿದಿರುತ್ತೇನೆ. ಹದಿನೈದು ದಿನಗಳ ಅವಧಿಯನ್ನು ನಿನಗೆ ಹೇಳಬೇಕಾದರೆ, ನಾನು ಸುಮ್ಮನೆ ಚೇಷ್ಟೆಗಾಗಿ ಹೇಳಿರುವದಿಲ್ಲ ಯುದ್ಧನಿರ್ಣಯಕ್ಕೆ ೧೫ ದಿನಗಳು ಹಿಡಿಯುವವೆಂದು ಗಣಿತದಲ್ಲಿ ಹೊರಟದ್ದರಿಂದಲೂ, ಮತ್ತು ನೀನು ಜಯಶಾಲಿಯಾಗುವಿಯೆಂದು ತಿಳಿದದ್ದರಿಂದಲೂ ನಿನಗೆ ಹಾಗೆ ಹೇಳಬೇಕಾಯಿತು ನನ್ನ ಮಾತಿಗೂ ನಿಮ್ಮ ಬಾದಶಹರ ಮಾತಿಗೂ ಮೇಳ ಬಿತ್ತೋ ಇಲ್ಲವೋ ನೀನೇ ವಿಚಾರಮಾಡಿ ನೋಡು ಜ್ಯೋತಿಷವು ಸಾಮಾನ್ಯವಾದದ್ದಲ್ಲ ಅದು ಪರೋಕ್ಷಜ್ಞಾನಕ್ಕೆ ಕಣ್ಣುಗಳಿದ್ದಹಾಗೆ.

ಖಾನರು (ಸಂತೋಷದಿಂದ)—ಮಹನೀಯರೇ, ಇದರಲ್ಲಿ ನಾನು ಗಾಬರಿಯಾಗುವ ಕಾರಣವಿಲ್ಲವಷ್ಟೇ?

ಫಕೀರ—ಇದಕ್ಕೂ ಹೆಚ್ಚು ಇನ್ನೇನು ಹೇಳಬೇಕು?

ಈ ಪ್ರಕಾರ ಸಂಭಾಷಣವಾದ ಬಳಿಕ ಫಕೀರನು ಎದ್ದು ನಿಂತನು; ಮತ್ತು ನಾನು ಬಂದು ಬಹಳ ಹೊತ್ತಾಯಿತು, ಹೊರಡುವೆನೆಂದು ನುಡಿದನು, ಆಗ ವಿಷಯೇಚ್ಛೆಯ ಎಳತದಿಂದ ನುಗ್ಗಾಗುತ್ತಿದ್ದ ಖಾನನು ಫಕೀರನನ್ನು ಕುರಿತು ಸಲಾಮು ಮಾಡಿ—ಮಹಾತ್ಮರೇ, ತಮ್ಮ ವಾಸ್ತವ್ಯವೆಲ್ಲಿ? ನನಗೆ ಆಗಾಗ್ಗೆ ದರುಶನ ಕೊಟ್ಟು ಈ ಕಠಿಣ ಪ್ರಸಂಗದಲ್ಲಿ ತಕ್ಕ ಆಲೋಚನೆಗಳನ್ನು ಹೇಳಿ, ನನ್ನನ್ನು ಪಾರು ಮಾಡುವಿರಾ? ನಿಮ್ಮಂಥ ವಿರಕ್ತರನ್ನು ನಾನು ನಮ್ಮ ಕಾರ್ಯ

ಕ್ಕೋಸ್ಕರ ಜಗ್ಗಿಕೊಳ್ಳಬಾರದೆಂಬದೇನೋ ನಿಜ; ಆ ಪರವರದಿಗಾರ ಮಹಮ್ಮದಪೈಗಂಬರರೇ ನಿಮ್ಮನ್ನು ನನ್ನೆಡೆಗೆ ಈಗಿನ ಕಾಲದಲ್ಲಿ ಬುದ್ಧಿಪೂರ್ವಕವಾಗಿ ಬರಮಾಡಿದಂತೆ ತೋರುತ್ತದೆ.

ಫಕೀರನು (ನಕ್ಕು)—ಖಾನಸಾಹೇಬರೇ, ನಿಮ್ಮ ಇಚ್ಛೆಗೆ ವಿರೋಧವಾಗಿ ನಡೆಯಲಿಕ್ಕೆ ನಮ್ಮಂಥವರಿಗೆ ಬರುವದಿಲ್ಲ ನಾನು ಇಲ್ಲಿಯೇ ನಿಮ್ಮ ದುರ್ಗದ ಬಳಿಯಲ್ಲಿರುವ ಮಸೀದೆಯಲ್ಲಿರುತ್ತೇನೆ ನಿಮಗೆ ಈ ರಾಜಕಾರಣದಲ್ಲಿ ತಕ್ಕ ಹಂಚಿಕೆಗಳನ್ನು ಹೇಳಿ, ನಿಮ್ಮನ್ನು ಇದರಿಂದ ಪಾರುಮಾಡುವೆನು ನಿಮಗೆ ಯಾವ ಯಾವ ಪ್ರಸಂಗಗಳು ಬರುವವೆಂಬದನ್ನೂ, ಅವಕ್ಕೆ ಹ್ಯಾಗೆ ಪ್ರತೀಕಾರ ಮಾಡಬೇಕೆಂಬದನ್ನೂ ನಾನು ಇನ್ನೊಮ್ಮೆ ಗಣಿತಹಾಕಿ ಚನ್ನಾಗಿ ಕಂಡುಕೊಳ್ಳುತ್ತೇನೆ ನೀವು ನಿಶ್ಚಿಂತೆಯಿಂದ ಮಾತ್ರ ಇರಿ.

ಫಕೀರನು ಹೊರಟು ಹೋದನು ಈತನು ನಿಜವಾಗಿ ತನ್ನ ಭಾಗಕ್ಕೆ ದೇವದೂತನಾಗಿಯೇ ಬಂದಿರುವನೆಂದು ಖಾನನು ಅವನನ್ನು ಮನದಲ್ಲಿ ಬಹಳ ಕೊಂಡಾಡುತ್ತ ಮುಂದಿನ ಉದ್ಯೋಗದಲ್ಲಿ ತೊಡಗಿದನು

# ಆರನೆಯ ಪ್ರಕರಣ.

## ಹುಚ್ಚನ ಕರಾಮತಿ.

—:( ೦ ):—

ಈ ಸಮಯದಲ್ಲಿ ವಿಜಯನಗರದ ರಾಯರು ಉದಯಗಿರಿಯ ರಾಜ್ಯವನ್ನು ಆಕ್ರಮಿಸಿ ಅಲ್ಲಿಯ ರಾಜನನ್ನು ಇಳಿಗೊರಗಿಸಿ ಅವನ ವಂಶಜರನ್ನೂ ಮಂತ್ರಿಮಂಡಲವನ್ನೂ ಅವನ ಸುಕುಮಾರಿಯಾದ ಓರ್ವ ಮಗಳನ್ನೂ ಸೆರೆ ಹಿಡಿದು ತಂದು ಆನೆಗುಂದಿಯಲ್ಲಿಟ್ಟಿದ್ದರು ರಾಜ್ಯಚ್ಯುತರಾದ ಈ ಜನರು ರಾಯರ ಅಭ್ಯುದಯಕ್ಕೆ ಕೇಡನ್ನುಂಟು ಮಾಡುವ ಸಂಧಿಯನ್ನು ನಿರೀಕ್ಷಿಸುತ್ತ ಸೆರೆಮನೆಯಲ್ಲಿ ಕೊಳೆಯುತ್ತ ಬಿದ್ದಿದ್ದರೆಂಬದನ್ನು ಒಡೆದು ಹೇಳುವ ಕಾರಣವಿಲ್ಲ. ಈ ಜನರಲ್ಲಿ ರಾಮಯಮಂತ್ರಿಯೆಂಬವನು ಶ್ರೇಷ್ಠನು. ಇವನು ಉದಯಗಿರಿಯ ರಾಜನ ಮುಖ್ಯಾಮಾತ್ಯನು ಬುದ್ಧಿಯಲ್ಲಿ ದೇವಗುರುವಿಗೆ ಸಮಾನನಾದವನು, ಆದರೆ ದೈವದುರ್ವಿಪಾಕದಿಂದ ಕೃಷ್ಣರಾಯರ ಸೆರೆಯಲ್ಲಿ ಬಹುಕಷ್ಟ

ದಿಂದ ಕಾಲಕಳೆಯುತ್ತಿದ್ದನು. ಈ ಬುದ್ಧಿಶಾಲಿಯು ಸ್ವಲ್ಪ ದಿವಸಗಳಲ್ಲಿ ಕಪಟ ತಂತ್ರಗಳಿಂದ ರಾಯರ ವಿಶ್ವಾಸಕ್ಕೆ ಪಾತ್ರನಾಗಿ ಆನೆಗುಂದಿಯ ವಿಶಾಲವಾದ ವಾತಾವರಣದಲ್ಲಿ ಸಂಚರಿಸುವ ಪಾತ್ರತೆಯನ್ನು ಪಡೆದನು.

ಈ ರಾಮಯಮಂತ್ರಿಯ ಯೋಗ್ಯತೆಯನ್ನೂ, ಕಪಟತಂತ್ರಗಳನ್ನೂ ಕೃಷ್ಣದೇವರಾಯರ ಮಂತ್ರಿಯಾದ ತಿಮ್ಮರಸನೊಬ್ಬನು ಮಾತ್ರ ಕಂಡುಹಿಡಿದಿದ್ದನು. ಆದ್ದರಿಂದ ಆತನು ರಾಮಯನ ಮೇಲೆ ಚನ್ನಾಗಿ ಕಣ್ಣಿಡಲು ಒಬ್ಬ ಚಾಣಾಕ್ಷನಾದ ಗುಪ್ತಚಾರನನ್ನು ನೇಮಿಸಿದ್ದನು. ಹೀಗಿರಲು ರಾಯಚೂರ ದಾವಲ್‍ಖಾನನ ನಿಮಿತ್ತವಾಗಿ ವಿಜಾಪುರದವರೊಡನೆ ವಿಜಯನಗರದ ರಾಯರು ಹಗೆತನ ಕಟ್ಟಿಕೊಳ್ಳಬೇಕಾದ್ದರಿಂದ ಈ ಸಂಧಿಯು ರಾಮಯಮಂತ್ರಿಗೆ ಪಥ್ಯಕರವಾಗಿ ಪರಿಣಮಿಸಿತು ಆ ಕಪಟನಾಟಕಿಯು ವಿಜಾಪುರದ ಆದಿಲ್‍ಶಾಹಿಯ ಕಡೆಗಾಗಲಿ, ರಾಯಚೂರಿನ ದಾವಲ್‍ಖಾನನ ಕಡೆಗಾಗಲಿ ಹೋಗಿ ಅವರಿಗೆ ತನ್ನ ಬುದ್ಧಿಮತ್ತೆಯ ಸಹಾಯವನ್ನೊದಗಿಸಿ, ಅವರಿಂದ ವಿಜಯನಗರವನ್ನು ಉಧ್ವಸ್ತಗೊಳಿಸುವ ಹಂಚಿಕೆಯನ್ನು ಹಾಕತೊಡಗಿದನು. ಆದರೆ ಬಲವಾದ ಕಾವಲಿದ್ದ ಮೂಲಕ ಆನೆಗುಂದಿಯಿಂದ ತಪ್ಪಿಸಿಕೊಂಡು ಹೋಗುವದು ಕಷ್ಟಸಾಧ್ಯವಾಗಿತ್ತು ಒಂದು ವೇಳೆ ತಾನೊಬ್ಬನೇ ತಪ್ಪಿಸಿಕೊಂಡು ಹೋದರೂ ತನ್ನ ಸ್ವಾಮಿಪುತ್ರಿಯಾದ ಕಮಲಾಂಬೆಯೂ ಮಿಕ್ಕಪರಿವಾರವೂ ಶತ್ರುಪರಿವಾರದಿಂದ ಮುಕ್ತರಾಗಲಾರರಾದ್ದರಿಂದ ಅವರೊಡನೆ ಜಾರಿಕೊಳ್ಳುವ ಉಪಾಯವನ್ನು ಕಂಡುಹಿಡಿಯಲು, ಆತುರಪಟ್ಟನು ಕ್ಷಣದಲ್ಲಿ ಅವನ ವಿಶಾಲವಾದ ಬುದ್ಧಿಗೆ ಒಂದು ಯುಕ್ತಿಯು ತೋಚಿತು ಆ ಯುಕ್ತಿಯಿಂದ ಇಷ್ಟು ದೊಡ್ಡ ಕಾ-ರ್ಯವು ನೀಗೀತೇನೆಂಬದನ್ನು ಅವನು ಬಹು ವಿಚಾರದಿಂದ ತೂಗಿ ನೋಡಿ, ಕಡೆಗೆ ಅದರಂತೆ ವರ್ತಿಸುವದನ್ನು ನಿರ್ಧರಿಸಿದನು

ವೇಷಾಂತರ ಮಾಡುವಲ್ಲಿ ರಾಮಯನು ಬಹು ಬುದ್ಧಿವಂತನಾಗಿದ್ದನು. ಆತನು ಸಮಯವನ್ನು ಸಾಧಿಸಿ, ಹುಚ್ಚನ ವೇಷವನ್ನು ಧರಿಸಿದನು ಈ ವೇಷದಿಂದ ಅವನು ಹಗಲೆಲ್ಲ ಊರಲ್ಲಿ ತಿರುಗಾಡುವನು. ರಾತ್ರಿಯಾಗುತ್ತಲೇ ಯಾರಿಗೂ ಗೋಚರವಾಗದ ಒಂದು ಸ್ಥಳಕ್ಕೆ ಹೋಗಿ ಅಲ್ಲಿ ಹುಚ್ಚನ ವೇಷವನ್ನು ಕಳಚಿ ಆ ವೇಷದ ಉಪಕರಣಗಳನ್ನು ಅಲ್ಲಿಯೇ ಬಚ್ಚಿಟ್ಟು ಮನೆಗೆ ಹೊರಟುಹೋಗುವನು. ಬರಬರುತ್ತ ಆ ಹುಚ್ಚನ ವೇಷವು ಜನರ ವಿನೋದಕ್ಕೆ ತುಂಬಾ ಆಶ್ರಯಕೊಟ್ಟಿತು. ಹುಚ್ಚನು ಊರಲ್ಲಿ ಬಂದನೆಂದರೆ ನಿರುದ್ಯೋಗಿಗಳಾದ ಜನರು ಅವನನ್ನು ಸುತ್ತು

ಗುಟ್ಟುವರು. ಹುಡುಗರಿಗಂತೂ ಬಲು ಉಲ್ಲಾಸ, ಹುಚ್ಚನು ವಿನೋದಪರ ಮಾತುಗಳಿಂದ ಜನರನ್ನು ಬಹು ಆನಂದಗೊಳಿಸುವನು. ಜನರು ಕೊಟ್ಟ ಹಣ್ಣು ಹಂಪಲಗಳನ್ನು ಅಲ್ಲಿಯೇ ತಿಂದು ಮರ್ಕಟಚೇಷ್ಟೆಗಳನ್ನು ಮಾಡುವನು. ಈತನ ಸವಿಮಾತುಗಳಿಗೂ, ವಿಲಕ್ಷಣಲೀಲೆಗಳಿಗೂಅಲ್ಲಿಯಜನರು ಮರುಳಾಗಿಹೋದರು.

ಒಂದುದಿನಹುಚ್ಚನು ಬೀದಿಯಲ್ಲಿ ನಿಂತುಕೊಂಡಿದ್ದನು ಸುತ್ತಲೂ ನೂ-ರಾರು ಹುಡುಗರು ಅವನನ್ನು ಪೀಡಿಸಹತ್ತಿದ್ದರು ಹುಡುಗರು ಎಷ್ಟು ಬಗೆಯಿಂದ ಪೀಡಿಸಿದರೂ ಹುಚ್ಚನು ಸಿಟ್ಟಿಗೇಳದೆ ಪಿಸಿ-ಪಿಸಿ ನಗುತ್ತಿದ್ದನು ಅಷ್ಟರಲ್ಲಿ ಒಬ್ಬ ಕುಚೇಷ್ಟೆಗಾರನು ಓಡಿಬಂದು ಹುಚ್ಚನಿಗೆ ಮಾರುತಿಯ ಸೋಗುಹಾಕಬೇಕೆಂದು ಹುಡುಗರನ್ನು ಹುರಿದುಂಬಿಸಿದನು ಮೊದಲೇ ವಿನೋದಪ್ರಿಯರಾದ ಆ ಹುಡುಗರಿಗೆ ಈ ಹಂಚಿಕೆಯಿಂದ ಅತ್ಯಾನಂದವಾಯಿತು ಕೂಡಿದ ಹುಡುಗರಲ್ಲಿ ಕೆಲವರು ಹರಕ ಅರಿವೆಗಳನ್ನು ತಂದು ಹಗ್ಗ ಹೊಸೆದು, ಅದನ್ನು ಬಾಲದಂತೆ ಕಟ್ಟಿದರು. ಕೆಲವರು ಸೊಗಸುಗಾರರು ನವಿಲುಗರಿಗಳನ್ನು ತಂದು ಅದಕ್ಕೆ ಕಟ್ಟಿದರು. ಹಸನಾದ ಕರೀಬಣ್ಣವನ್ನು ಹದಗೊಳಿಸಿ ಹುಚ್ಚನ ಮುಖಕ್ಕೆ ಬಳಿದರು, ಮತ್ತು ಕೋರೆಮೊಸೆಗಳನ್ನು ತಿರುಪಿ ಮೋರೆಯನ್ನು ಉಗ್ರವಾಗ ಮಾಡಿದರು. ಏನು ಮಾಡಿದರೂ ಹುಚ್ಚನು ನಗುತ್ತಿದ್ದನೇ ಹೊರತು ಯಾವಬಗೆಯ ಪ್ರತೀಕಾರವನ್ನೂ ಮಾಡುತ್ತಿರಲಿಲ್ಲಾದ್ದರಿಂದ ಹುಡುಗರ ಉಲ್ಲಾಸಕ್ಕ ಕಳೆಯೇರಿತು. ಅವರು ಮೆಲ್ಲನೆ ಕಿರುಗಂಟೆಗಳನ್ನು ತಂದು ಕಟ್ಟಿದರು ಕೊರಳಲ್ಲಿ ಬೇವಿನ ಸಪ್ಪಿನ ಸರವನ್ನು ಹಾಕಿದರು, ಮತ್ತು ಬಾಲಕ್ಕೆ ಬಿದಿರುಗಳ ಆಶ್ರಯವನ್ನಿತ್ತು ಅದನ್ನು ತಲೆಯ ಮೇಲೆ ಬರುವಂತೆ ಕಟ್ಟಿದರು

ಈ ಮೇರೆಗೆ ಮಾರುತಿಯ ಸೋಗು ಕಟ್ಟಿ ಸಿದ್ಧವಾದ ಬಳಿಕ ಹುಚ್ಚನು ಒಮ್ಮೆ ಟಣ್ಣನೆ ಜಿಗಿದು ನಿಂತನು. ಅವನ ಆ ಜಿಗಿತಕ್ಕೆ ಕಿರುಗಂಟೆಗಳು ಧ್ವನಿಗೈದವು, ಆಗಂತೂ ಹುಡುಗರ ವಿನೋದಬುದ್ಧಿಯು ಹೆಚ್ಚಿತು ಹುಡುಗರು ವಿನೋದಪಟ್ಟ ಹಾಗೆ ಹುಚ್ಚನು ಹೆಚ್ಚು ಹೆಚ್ಚು ಕುಣಿಯತೊಡಗಿದನು. ಅವನು ಆ ಬೀದಿಯಿಂದ ಈ ಬೀದಿಗೆ ಬರುವನು ಈ ಬೀದಿಯಿಂದ ಮತ್ತೊಂದು ಕಡೆಗೆ ಓಡುವನು. ಗಿಡ-ಮರಗಳನ್ನು ಸರಸರನೆ ಏರುವನು ಅಲ್ಲಿಂದ ಕೈಬಿಟ್ಟು ಒಮ್ಮೆಲೆ ಕೆಳಕ್ಕೆ ದುಮ್ಮಿಕ್ಕುವನು. ಇದನ್ನು ಕಂಡು ಹುಡುಗರು ಚಪ್ಪಾಳೆ ಬಾರಿಸಿ ನಗುವರು. ಬರಬರುತ್ತ ಜನಸಮ್ಮರ್ದವು ಹೆಚ್ಚುತ್ತ ನಡೆಯಿತು ಹುಚ್ಚನನ್ನು ಕುಣಿದಾಡಿಸಿ ಮೋಜು ನೋಡಬೇಕೆಂಬ ಹುಚ್ಚು ಜನರಿಗೂ ಹಿಡಿಯಿತು.

ಅನ್ನವಸ್ತ್ರಕ್ಕೆ ತಾಪತ್ರಯ ಇಲ್ಲದಾಗ ಜನರಲ್ಲಿ ವಿನೋದ ಪ್ರಿಯತೆಯು ಮುಂದಡಿ ಇಡುವದೆಂಬುದು ಸುಳ್ಳಲ್ಲ. ಆಗಿನ ಕಾಲದಲ್ಲಿ ರಾಯರ ಪ್ರಶಾಂತವಾದ ಆಳಿಕೆಯಿಂದ ಜನರಲ್ಲಿ ಸುಖ ಶಾಂತಿಗಳು ನೆರೆಗೊಂಡಿದ್ದವು. ಕಾಲಕಾಲಕ್ಕೆ ಮಳೆಬೆಳೆಗಳು ಆನಂದವನ್ನುಂಟುಮಾಡುತ್ತಿದ್ದವು. ರೈತರ ಹಗೆಯಲ್ಲಿ ಧಾನ್ಯಸಂಗ್ರಹ [illegible] ವಾಗಿರುತ್ತಿತ್ತು. ಗೋಧನಕ್ಕಂತೂ ಕೊರತೆಯು ಇರಲಿಲ್ಲ. ಕೃಷೀವಲರು ಗೋರಸ ಪಾನದಿಂದ ಪುಷ್ಟರಾಗಿ ಒಪ್ಪುತ್ತಿದ್ದರು. ಸ್ನಿಗ್ಧ ಆಹಾರವು ಹೆಚ್ಚಾಗಿ ದೊರೆಯುತ್ತಿದ್ದದರಿಂದ ಈಗಿನಂತೆ ಕ್ಷೀಣಕಾಯರನ್ನು ಕಾಣುವದು ಅಪರೂಪವಾಗಿತ್ತು. ಅಹಾ! ಎಷ್ಟು ಸುಖಸಂಪನ್ನವಾದ ಕಾಲವದು? ಮುಂಜಾವಿನಿಂದ ಸಂಜೆಯವರೆಗೂ ದುಡಿದರ ಒಬ್ಬನ ಹೊಟ್ಟೆ ತುಂಬಲಾರದಂಥ ಈಗಿನ ಕಾಲದಲ್ಲಿ ಕಂಗಾಲರಾದ ನಮಗೆ ಅದೊಂದು ಕಟ್ಟುಕಥೆಯಾಗಿ ತೋರಿದರ ಆಶ್ಚರ್ಯವೇನು? ಇಂಥ ಸುಖಸಂಪನ್ನರಾದ ಆನೆಗುಂದಿಯ ನಿವಾಸಿಗಳು ದುಡಿಯುವ ಚಿಂತೆ ಇಲ್ಲದ್ದರಿಂದ ಇಂದು ಹುಚ್ಚನ ಮೆರೆಗ ಮುಟ್ಟಿ ಅತನ ಬೆನ್ನಹತ್ತಿದ್ದು ಅಸ್ವಾಭಾವಿಕವಲ್ಲ. ಇದಲ್ಲದೆ ಆ ನಗರದಲ್ಲಿ ರಾಜಸೇವಕರ ಸಂಖ್ಯೆಯೇ ಹೆಚ್ಚಿತ್ತು. ಉದಯಗಿರಿಯ ಸೆರೆಯಾಳುಗಳನ್ನು ಕಾಯುವದಕ್ಕಾಗಿ ಸಾವಿರಾರು ಜನ ದಂಡಾಳುಗಳು ಅಲ್ಲಿ ಮನೆ ಮಾಡಿದ್ದರು. ಹೊರತು ಸಣ್ಣ ಪುಟ್ಟ ಅಧಿಕಾರಿಗಳು ವಿಜಯನಗರದಲ್ಲಿ ಸ್ಥಳ ಸಾಲದೆ ಇಲ್ಲಿಯೇ ವಸತಿಯನ್ನು ಮಾಡಿದ್ದರು. ಇಂಥ ಜನರಿಗೆ ಸರ್ವದಾ ಉದ್ಯೋಗವಿರುತ್ತಿದ್ದಿಲ್ಲ. ಪ್ರಸಂಗಬಂದಾಗ ಕೆಲವು ದಿನ ದುಡಿದು ಬಿಟ್ಟರೆ ಪುನಃ ಪ್ರಸಂಗಬರುವವರೆಗೆ ಅವರನ್ನು ಯಾರೂ ಮಾತಾಡಿಸುತ್ತಿರಲಿಲ್ಲ. ಆದ್ದರಿಂದ ಆಗಿನ ಸರಕಾರೀ ಉದ್ಯೋಗಸ್ಥರಲ್ಲಿ ಐಷಾರಾಮವು ಬೆಳೆದು ಹೋಗಿತ್ತು. ಯಾವದಾದರೊಂದು [illegible]ವಾದರ ಜನರು ತಪ್ಪಿಲ್ಲದೆ ಕೂಡುತ್ತಿದ್ದರು.

ಹೀಗೆ ಆನೆಗುಂದಿಯ ಪರಿಸ್ಥಿತಿಯಿರುವಾಗ ಮೇಲೆ ಹೇಳಿದಂತೆ ಹುಚ್ಚನು ಮಾರುತಿಯ ವೇಷದಿಂದ ಕುಣಿಯ ಹತ್ತಿದ ಬಳಿಕ ಕೇಳುವದೇನು? ಜನರು ಎಡವುತ್ತ, ಮುಗ್ಗುತ್ತ, ಏಳುತ್ತ ಬೀಳುತ್ತ ಅವನೆಡೆಗೆ ಓಡುತ್ತಿದ್ದರು. ಜನರು ಹೆಚ್ಚು ಹೆಚ್ಚು ಕೂಡಿದ ಹಾಗೆ ಹುಚ್ಚನ ಕುಣಿತಕ್ಕೆ ರಂಗು ಬಂದಿತು. ಆನೆಗುಂದಿಯ ಕಾವಲುಗಾರರೆಲ್ಲರೂ ಹುಚ್ಚನ ಕುಣಿತಕ್ಕೆ ದಂಗಾಗಿಹೋದರು. ಅಷ್ಟರಲ್ಲಿ ಕಲೆತವರಲ್ಲಿ ಯಾವನೋ ಒಬ್ಬನು ಮಾರುತಿವೇಷದ ಹುಚ್ಚನ

ಬಾಲಕ್ಕೆ ಎಣ್ಣೆ ಎದ್ದಿದ ಅರಿವೆಯನ್ನು ಕಟ್ಟಿ ಅದಕ್ಕೆ ಕೊಳ್ಳೀ ಕೊಟ್ಟನು. ಬಾಲವು ಭರದಿಂದ ಉರಿಯ ಹತ್ತಿತು. ಮರ್ಕಟಕ್ಕೆ ಮದಿರಾಪಾನ-ಮೇಲೆ ವೃಶ್ಚಿಕದಂಶವಾದರೆ ಆಗುವ ಅನರ್ಥದಂತೆ ಈ ಹುಚ್ಚನ ಬಾಲಕ್ಕೆ ಕೊಳ್ಳಿ ಕೊಟ್ಟದ್ದರಿಂದ ಅನರ್ಥದ ಪ್ರಸಂಗವು ಸಮೀಪಿಸಿತು. ಜನರ ಲಕ್ಷ್ಯವೆಲ್ಲ ವಿನೋದದಲ್ಲಿಯೇ ಪರ್ಯವಸಾನವಾಗಿ ಹೋಗಿತ್ತು. ಜನರಿಗೆ ಉಟ್ಟ ಧೋತರವನ್ನು ಕಸಿದುಕೊಂಡರೂ ಅರಿವು ಇಲ್ಲದಂತಾಗಿತ್ತು. ನೋಡ ಬಂದವರೆಲ್ಲರ ಸ್ಥಿತಿಯು ಈ ಮನೆಗೆ ಬರಲು ಹುಚ್ಚನು ಇದೇ ಸಮಯವೆಂದು ಕುಣಿಯುತ್ತ ಕುಣಿಯುತ್ತ ಸಿಪಾಯಿಗಳ ಛಾವಣಿಯ ಕಡೆಗೆ ತೆರಳಿದನು. ಅಲ್ಲಿ ಕೆಲವು ಹುಲ್ಲುಗುಡಿಸಲುಗಳಿದ್ದವು, ದನಕರುಗಳಿಗಾಗಿ ಕಣಿಕೆಯ ದೊಡ್ಡ ದೊಡ್ಡ ಬಣಿವೆಗಳು ಒಟ್ಟಲ್ಪಟ್ಟಿದ್ದವು. ಹುಚ್ಚನು ಉರಿಯುವ ಬಾಲವನ್ನು ಆ ಹುಲ್ಲುಗುಡಿಸಲುಗಳ ಮೇಲೂ ಬಣಿವೆಗಳ ಮೇಲೂ ಬಡೆಯುತ್ತ ನಡೆದನು. ಬೇಸಿಗೆಯ ದಿನವಾದ್ದರಿಂದ ಬಣಿವೆ-ಗುಡಿಸಲುಗಳು ತೀವ್ರಜ್ವಾಲಾಗ್ರಾಹಿಗಳಾಗಿದ್ದವು. ಹುಚ್ಚನ ಬಾಲವು ತಾಕಿದ್ದೊಂದೇ ತಡ, ಗುಡಿಸಲು-ಬಣಿವೆಗಳು ಒಂದರಹಿದದೊಂದು ಪ್ರಜ್ವಲಿಸಿ ಉರಿಯತೊಡಗಿದವು. ಹುಚ್ಚನ ಈ ಕೃತಿಗೆ ವಾಯುದೇವರು ನೆರವಾದ್ದರಿಂದ ಕ್ಷಣದಲ್ಲಿ ನೂರಾರು ಗುಡಿಸಲುಗಳೂ ಬಣಿವೆಗಳೂ ಅಗ್ನಿನಾರಾಯಣನ ಭೋಜ್ಯಪದಾರ್ಥಗಳಾಗಿ ಪರಿಣಮಿಸಿದವು. ಪ್ರಸಂಗವು ಹೀಗೆ ವಿಕೋಪಕ್ಕೆ ಹೋಗಲು ಆಗ ವಿನೋದಗಾರರ ಕಣ್ಣುಗಳು ನಿಚ್ಚಳವಾಗಿ ತೆರೆದವು. ಪ್ರಸಂಗವು ಮೈಮೇಲೆ ಬಂದ ಬಳಿಕ ಮಾಡುತ್ತಾರೇನು? ಎಲ್ಲರ ಹೌಹಾರಿಹೋಯಿತು. ಶಿಪಾಯಿಗಳಂತೂ ತಮ್ಮ ಮನೆ ಮಾರುಗಳು ಸುಟ್ಟು ಸೂರೆಗೊಳ್ಳುವವೆಂದು ಮನೆಯೊಳಗಿನ ದನಕರುಗಳು-ಹುಡುಗರು-ಮುದುಕರನ್ನೂ ಹೊರಗೆ ಹಾಕಲಾರಂಭಿಸಿದರು. ನೆರೆದವರೆಲ್ಲರೂ ಬೆಂಕಿಯನ್ನು ಆರಿಸುವ ಸಾಹಸಕ್ಕೆ ಬಿದ್ದರು. ಈ ಗದ್ದಲಕ್ಕೆ ಊರಿಗೆ ಊರೇ ಅಲ್ಲಿ ನೆರೆಯಿತು. ಹಗಲಹಾಡೇ ಊರನ್ನು ಲೂಟಿಮಾಡಿದರೂ ಕೇಳುವವರಿಲ್ಲದಾಯಿತು.

ಈ ಮೇರೆಗೆ ಭಯಂಕರ ಅನರ್ಥವನ್ನುಂಟು ಮಾಡಿ ಹುಚ್ಚನು ಯಾವ ಮಾಯದಿಂದಲೋ ಅಲ್ಲಿಂದ ಪಾರಾಗಿ ಹುಚ್ಚನ ವೇಷವನ್ನು ಬಿಸುಟಿ ಉದಯಗಿರಿಯ ಪರಿವಾರವನ್ನು ಸೆರೆಯಿಟ್ಟ ಮಂದಿರಕ್ಕೆ ಬಂದನು. ಅಲ್ಲಿ ಯಾವ ಕಾವಲುಗಾರನೂ ಇದ್ದಿಲ್ಲ. ಕೂಡಲೆ ಅವನು ಒಳಹೊಕ್ಕು ತನ್ನ ದಾರಿಯನ್ನೇ ನಿರೀಕ್ಷಿಸುತ್ತಿದ್ದ ಒಳಗಿನ ಜನರನ್ನು ಕರೆದುಕೊಂಡು ಅಲ್ಲಿಂದ ಸುರಕ್ಷಿತವಾಗಿ ಕಾಲ್ದೆಗೆ

ದನು. ಆನೆಗುಂದಿಯ ಸೀಮಾಂತವನ್ನು ದಾಟಿದ ಒಳಿಕ ಅವರಲ್ಲರಿಗೆ ಬೇರೆ ಬೇರ ವೇಷಗಳನ್ನಳವಡಿಸಿ ಹುಚ್ಚನ ವೇಷದಿಂದ ತಾನು ಮಾಡಿದ ಸಂಗತಿಗಳನ್ನು ಸಮೋಚೀನವಾಗಿ ಒಣ್ಣಿಸುತ್ತ ರಾಯಚೂರ ದಾರಿಯನ್ನು ಹಿಡಿದನು

## ೭ನೆಯ ಪ್ರಕರಣ.

### ಕಾರಸ್ಥಾನ.

—(೦)—

ಈ ಮೇರೆಗೆ ರಾಮಯಮಂತ್ರಿಯು ತನ್ನ ತಂತ್ರಪ್ರಭಾವದಿಂದ ಕಾರಾಗೃಹವಿಮುಕ್ತನಾಗಿ ರಾಯಚೂರ ದುರ್ಗದ ದಾರಿಯನ್ನು ಹಿಡಿದು, ಕೆಲವು ದಿವಸಗಳಲ್ಲಿ ಆ ದುರ್ಗವನ್ನು ಮುಟ್ಟಿದನು ಖಾನನು ವಿಷಯಾಸಕ್ತನಾದ್ದರಿಂದ ತನ್ನ ಸಂಗಡ ಬಂದ ರಾಜಪುತ್ರಿಯನ್ನು ಕಂಡು ಮೋಹಗೊಳ್ಳಬಹುದೆಂದು ಆಕೆಗೆ ಪುರುಷವೇಷವನ್ನು ಅಳವಡಿಸಿದನು. ಆಗ ಅವನು ದುರ್ಗದಲ್ಲಿ ಒಂದು ವಿಶಾಲವಾದ ದೇಗುಲದಲ್ಲಿ ಇಳಿದು, ತನ್ನ ಸಂಗಡಿಗನಾದ ಚಿನ್ನಬಲನ ಸಂಗಡ ಒಂದು ಪತ್ರವನ್ನು ಖಾನನ ಕಡೆಗೆ ಕಳುಹಿಸಿದನು ಅವನು ಆ ಪತ್ರದಲ್ಲಿ ಬರೆದ ಸಂಗತಿಯು ಈ ಪ್ರಕಾರವಾಗಿತ್ತು —

"ಖಾನಬಹಾದ್ದೂರರೇ, ದೈವದುರ್ವಿಲಾಸಕ್ಕೆ ಗುರಿಯಾದ ಸಿಂಹವು ತನ್ನ ಗೌರವವನ್ನು ಕಳಕೊಂಡು ದೀನವಾಗಿ ತೋರುವದಷ್ಟೇ, ಆದರೂ ಅದರ ಗೌರವಾಭಿಲಾಷೆಯೂ ಅದನ್ನು ಪಡೆಯತಕ್ಕ ಸಾಮರ್ಥ್ಯವೂ ಜಾಗ್ರತವಾಗಿರುವದು ಸ್ವಾಭಾವಿಕವು, ಇದರ ಮೇಲಿಂದ ನೀವು ಬೇಕಾದ ಹಾಗೆ ಅರ್ಥಮಾಡಿಕೊಂಡು ಈ ಪತ್ರಕ್ಕೆ ಉತ್ತರವನ್ನು ಬರೆಯುವಿರಾಗಿ ನಂಬಿಗೆಯುಳ್ಳವನಾಗಿದ್ದೇನೆ"

ನಿಮ್ಮ ಕೃಪಾಭಿಲಾಷಿ,

**ಉದಯಗಿರಿ ರಾಮಯಮಂತ್ರಿ**

ಪತ್ರವನ್ನು ತಕ್ಕೊಂಡು ಚಿನ್ನಬಲನು ಖಾನನ ಒಲಗದ ವರೆಗೆ ಹೋದನು. ಆಗ ಅವನು ಅಲ್ಲಿದ್ದ ಚಾಪೂದನ ಕೈಯಲ್ಲಿ ಪತ್ರವನ್ನು ಕೊಟ್ಟು ಖಾನಸಾಹೇಬರಿಗೆ ಮುಟ್ಟಿಸೆಂದು ಪ್ರಾರ್ಥಿಸಿದನು ಚಾಪೂದನು ಅವನು ಕೊಟ್ಟ ಲಕ್ಕೋಟೆಯನ್ನು ತಕ್ಕೊಂಡು ಖಾನಸಾಹೇಬರ ಬಳಿಗೆ ಒಯ್ದನು ಆಗ ಖಾನನು ವಿಜಯನಗರದವರ ಯುದ್ಧ ಸೌರಣೆಯ ವರದಿಯನ್ನು ಕೇಳುತ್ತ ಕುಳಿತಿದ್ದನು. ಅಷ್ಟರಲ್ಲಿ

ಮೇಲೆ ಹೇಳಿದ ಜಾಸೂದನು ಬಂದು ಬಹುದೂರ ನಿಂತು ಬೊಗ್ಗಿ ಲಕ್ಕೋಟಿಯನ್ನು ಮುಂದಿಡಲು ಖಾನನು ಅದನ್ನು ತಾನೇ ಕೈಮುಟ್ಟಿ ಹರಿದು ಓದತೊಡಗಿದನು ಪತ್ರವನ್ನು ಓದಿದ ಹಾಗೆ ಅವನ ಮುಖಮುದ್ರೆಯಲ್ಲಿ ಸಂತೋಷದ ಕಳೆಯು ತೋರಹತ್ತಿತು ಅವನು ರಾಮಯಮಂತ್ರಿಯ ಪ್ರಖ್ಯಾತಿಯನ್ನು ಕೇಳಿದ್ದನು ವಿಜಯನಗರದ ತಿಮ್ಮರಸನಿಗೆ ಎದುರಾಗಿ ನಿಂತು ಕೆಲಸಮಾಡತಕ್ಕ ಮಂತ್ರಿಯೆಂದರೆ ಆ ಕಾಲದಲ್ಲಿ ರಾಮಯನೊಬ್ಬನೇ ಎಂದು ಸರ್ವತೋಮುಖವಾಗಿ ಕೇಳಿದ್ದನಲ್ಲದೆ ರಾಮಯನು ವಿಜಯನಗರದ ಪ್ರತಿಬಂಧದಲ್ಲಿ ಸಿಕ್ಕು ಬಿದ್ದದ್ದನ್ನಾದರೂ ಕೇಳಿದ್ದನು ಆದ್ದರಿಂದ ಈಗಿನ ಬಿಕ್ಕಟ್ಟಿನ ರಾಜಕರಣದಲ್ಲಿ ಇಂಥ ಕುಶಲ ಮಂತ್ರಿಯು ತಾನಾಗಿಯೇ ಆಶ್ರಯ ಕೇಳಬಂದಿರುವನೆಂದು ಖಾನನಿಗೆ ಹೇಳಕೂಡದಷ್ಟು ಸಂಭ್ರಮವಾಯಿತು ಆಗ ಅವನು ಪತ್ರ ತಂದ ಚಿನ್ನಬಲನನ್ನು ತನ್ನ ಬಳಿಗೆ ಕರೆಯಿಸಿಕೊಂಡು ಅವನಿಂದ ಎಲ್ಲ ಸಂಗತಿಗಳನ್ನು ಕೇಳಿಕೊಂಡನು ಬಳಿಕ ಬಹು ಆದರಪೂರ್ವಕವಾಗಿ ರಾಮಯಮಂತ್ರಿಯನ್ನು ಕರೆಯಿಸಿಕೊಂಡು ಅವನಿಗೆ ತನ್ನಲ್ಲಿ ಆಶ್ರಯವನ್ನು ಕೊಟ್ಟನು

ಪ್ರಿಯವಾಚಕರೇ, ಹೀಗೆ ರಾಮಯನು ಖಾನನ ಆಶ್ರಯವನ್ನು ಹೊಂದಿ ವಿಜಯನಗರದವರ ಪಾರುಪತ್ಯಕ್ಕಾಗಿ ಯುಕ್ತಿಪ್ರಯುಕ್ತಿಗಳನ್ನು ಹಾಕತೊಡಗಿದನು ಅವನು ಖಾನನಿಗೆ ಬಗೆಬಗೆಯ ಆಲೋಚನೆಗಳನ್ನು ಹೇಳತೊಡಗಿದನು. ಮತ್ತು ಬಗೆಬಗೆಯ ಅಭಿವಚನಗಳನ್ನು ಕೊಟ್ಟನು ಅವನ ಮಾತುಗಳಿಂದ-ಅಭಿವಚನಗಳಿಂದ ಖಾನನಿಗೆ ಸ್ವರ್ಗವು ಮೂರೇ ಗೇಣು ಉಳಿಯಿತು ಪ್ರಸ್ತುತದ ರಾಜಕರಣದೊಳಗಿಂದ ಪಾರಾಗುವದಂದರ ಅವನಿಗೆ ಕ್ಷುದ್ರವೆನಿಸತೊಡಗಿತು ಯಾವ ರಾಜಕರಣದಲ್ಲಿ ಹ್ಯಾಗೆ ಪಾರಾದೇನೆಂದು ಚಿಂತಿಸುತ್ತಿದ್ದ ಖಾನನು ಈಗ ಅದೇ ರಾಜಕರಣವನ್ನು ಕ್ಷುದ್ರವೆಂದು ಅನ್ನತೊಡಗಿದನು ಜಗತ್ತಿನಲ್ಲಿ ಕೆಲಕೆಲವು ಜನರ ಸ್ಥಿತಿಯು ಒಂದು [illegible] ಲಕ್ಷಣ [illegible]ರುತ್ತದೆ [illegible] ದಾಗಲೊಂದು [illegible] ಎಗಕ್ಕ [illegible]ದರೂ [illegible] ಕ್ಷುದ್ರವೆಂದು ನುಡಿದರೆ ತಾವೂ ಅದರಂತೆ ಅಂದುಬಿಡುವರು ಮತ್ತಾರಾದರೂ ಆ ಪ್ರಸಂಗಕ್ಕೆ ಮಹತ್ವಕೊಟ್ಟು ಮಾತಾಡಿದರೆ ತಾವೂ ಮಹತ್ವಕೊಡುವರು. ಒಟ್ಟಿನ ಮೇಲೆ ಅವರು ಮುಂದಿಯ ನೋರಣದಂತೆ ತಮ್ಮಲ್ಲಿ ಧೈರ್ಯವನ್ನಾಗಲಿ ಅಧೈರ್ಯವನ್ನಾಗಲಿ ತಂದುಕೊಳ್ಳುವರು ಪ್ರಸ್ತುತದಲ್ಲಿ ಪಾವಲ್ ಖಾನನ ಸ್ಥಿತಿಯಾದರೂ ಹೀಗೆಯೇ ಆಯಿತು, ಅವನು ರಾಮಯನ ಧೈರ್ಯದ ಮೇಲಿಂದ ಧೈರ್ಯಪರಿತು ವಿಜಯನಗ

ರದವರ ಕೂಡ ಕಾದುವದೆಂದರೆ ಅಸಾವದೊಡ್ಡ ಮಾತೆಂದು ಭಾವಿಸಿ ತನ್ನ ಸ್ವಾಭಾವಿಕ ವಿಷಯ ಲೋಲುಪತೆಯ ಕಡೆಗೆ ಹೊರಳಿದನು ಆದರೆ ಅವನಿಗೆ ವಿಜಾಪುರದ ಬಾದಶಹನ ಪತ್ರದ ಸಂಗತಿಯು ನೆನಪು ಆಗಲು ಅವನ ಮನಸ್ಸು ವಿಷಯ ಸುಖದ ಕಡೆಗೂ ಹೋಗದಾಯಿತು ಅದರಿಂದ ಪರಾವೃತ್ತವಾಗಲಿಕ್ಕೂ ಒಪ್ಪದಾಯಿತು ಹೀಗೆ ಅವನು ಇಬ್ಬಗೆಯ ಎಳತಕ್ಕೆ ಸಿಕ್ಕು ಸುಮ್ಮಸುಮ್ಮನೆ ನುಗ್ಗಾಗ ತೊಡಗಿದನು

ಈ ರೀತಿಯಾಗಿ ಖಾನನು ರಾಮಯ್ಯ ಮಂತ್ರಿಯನ್ನು ಪೂರ್ಣವಾಗಿ ನಂಬಿ ಬಿಡಲು ಆ ಮಂತ್ರಿಶ್ರೇಷ್ಠನು ಅತ್ಯಂತ ಹರುಷಿತನಾಗಿ ತನ್ನ ಪರಿವಾರಕ್ಕೆ ಧೈರ್ಯವ ಕೊಡುತ್ತ ಮುಸಲ್ಮಾನ ಬಾದಶಹರನ್ನೆಲ್ಲ ಒಟ್ಟುಗೂಡಿಸಿದ ಹೊರತು ವಿಜಯನಗರದವರ ಮುಗ್ಗಲು ಮುರಿಯಲಿಕ್ಕೆ ಆಗದೆಂದು ನಿಶ್ಚಯಿಸಿ ಆ ಸಾಹಸದಲ್ಲಿ ಬಿದ್ದನು. ಅವನ ಸಾಹಸ ಚಾತುರ್ಯಾದಿಗಳು ಪ್ರಶಂಸನೀಯಗಳಾದ್ದರಿಂದ ಅವನಿಗೆ ಯಾವ ಕಾರ್ಯವ ಮಾಡಬೇಕಾದರೂ ಹಿಡಸಿನಿಸುತ್ತಿರಲಿಲ್ಲ, ಅವನ ಸವಿಮಾತುಗಳ ಹಾಗು ತಂತ್ರಗಳ ಬಲೆಗೆ ತಪ್ಪಿಸಿಕೊಳ್ಳುವವರು ಸೇರಿಗೆ ಸವ್ವಾಸೇರಾದಂತೆ ಅವನಿಗಿಂತ ಬಲಿಷ್ಠರುಳ್ಳ ಬಗಿಲಾದವರು ಇರಬೇಕಲ್ಲದೆ ಸಾಮಾನ್ಯರಿಂದ ಆ ಕೆಲಸವಾಗುವ ಹಾಗಿದ್ದಿಲ್ಲ ಗೊಟ್ಟಿನೊಳಗು ಬೀದರದ ಬಾದಶಹನು ಇವನ ಮಾತಿಗೆ ಕಿವಿಜೋತನು ಅವನು ರಾಮಯ್ಯನ ಪ್ರತ್ಯಕ್ಷ ಭೆಟ್ಟಿಗಾಗಿ ರಾಯಚೂರಿಗೆ ಸಹ ಬಂದು ಬಿಟ್ಟನು ರಾಮಯ್ಯನ ಈ ಅದ್ಭುತ ಶಕ್ತಿಯನ್ನು ನೋಡಿ ದಾವಲ್‌ಖಾನನಿಗೆ ಭ್ರಾಂತಿಬಂದು ಹೋಯಿತು.

ಈರ್ಷ್ಯಾವೇಶಕ್ಕೆ ಗುರಿಯಾದ ಕಾರ್ಯಸಾಧಕನು ಎಂಥ ನೀಚಕೆಲಸವನ್ನಾದರೂ ಮಾಡಲು ಹೇಸನು ಅದರಂತೆ ರಾಮಯ್ಯನು ಈರ್ಷ್ಯಾವೇಶದಿಂದ ಕುದಿಯುತ್ತಿದ್ದನಾದ್ದರಿಂದ ಅವನು ತನ್ನ ಕಾರ್ಯಸಾಧನೆಗಾಗಿ ಮುಸಲ್ಮಾನ ಅರಸರನ್ನು ಸ್ವಪಕ್ಷಪಾತಿಕರಳ್ಳಬೇಕಾಗಿತ್ತು ಆದ್ದರಿಂದ ಅವನು ಇದು ಸ್ವಜನದ್ರೋಹ, ದೇಶದ್ರೋಹ ಎಂಬ ಸಂಗತಿಗಳನ್ನು ಪೂರಾ ಮರೆತು ಬಿಟ್ಟಿದ್ದನು. ಮುಸಲ್ಮಾನ ಅರಸರು ಸ್ವಾಭಾವಿಕವಾಗಿ ವಿಷಯಾಸಕ್ತರಾಗಿದ್ದು, ಅವರು ವಿಶೇಷವಾಗಿ ಹಿಂದೂ ತರುಣಿಯರನ್ನು ಅಪೇಕ್ಷಿಸುತ್ತಿದ್ದರೆಂಬದು ಇತಿಹಾಸ ಪ್ರಸಿದ್ಧವಿರುವದಷ್ಟೇ, ರಾಮಯ್ಯನು ಈ ಪ್ರಸಿದ್ಧಿಯ ಲಾಭವನ್ನು ಪಡೆದು ಅದರಿಂದ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದು ಮನಸ್ಸಿನಲ್ಲಿ ಮಂಡಿಗೆಯನ್ನು ತಿನ್ನುತ್ತಿದ್ದನು. ಮತ್ತು ಅದರಂತೆ ಅವನು ದಾವಲ್‌ಖಾನನಿಗೂ, ಬೀದರದ

ಬಾದಶಹನಿಗೂ ಹೆಣ್ಣಿನ ಆಶೆಯನ್ನು ಹಚ್ಚಿದ್ದನು.

ದಾವಲ್‌ಖಾನನು ಅಚ್ಚ ರಕ್ತದ ಮುಸಲ್ಮಾನನಲ್ಲವೆಂದು ಹಿಂದೆಯೊಮ್ಮೆ ಹೇಳಿದೆಯಷ್ಟೇ, ಆದ್ದರಿಂದ ಅವನೊಡನೆ ಮುಸಲ್ಮಾನರಲ್ಲಿ ಗೌರವಶಾಲಿಗಳಾದವರು ಶರೀರಸಂಬಂಧ ಮಾಡಿರಲಿಲ್ಲ ಅವನು ಸಾಮಾನ್ಯ ಮನೆತನದ ಒಂದು ಕನ್ಯೆಯನ್ನು ಮದುವೆಯಾಗಿದ್ದನು. ಈ ಕಾರಣದಿಂದ ಖಾನನಿಗೆ ಸ್ವಲ್ಪ ಅಸಮಾಧಾನವಾಗಿತ್ತು. ಆದ್ದರಿಂದ ಅವನು ಒಂದು ರಾಜಮನೆತನದ ಒಬ್ಬ ಹಿಂದೂ ಯುವತಿಯನ್ನು ಮದುವೆಯಾಗಿ ತನ್ನ ಅಸಮಾಧಾನವನ್ನು ತೊಲಗಿಸಿಕೊಳ್ಳಬೇಕೆಂದು ಬಹುದಿವಸಗಳಿಂದ ಯೋಚಿಸುತ್ತಿದ್ದನು ಮತ್ತು ಆ ಯೋಚನೆಗನುಸಾರವಾಗಿಯೇ ಕೊಂಡಪಲ್ಲಿಯ ರಾಣಿಯನ್ನು ಹರಣಮಾಡಿ ತಂದಿಟ್ಟುಕೊಂಡಿದ್ದನು. ಆದರೆ ಅದರಿಂದ ಬಲವದ್ವಿರೋಧವುಂಟಾದ್ದರಿಂದ ತನ್ನ ಈ ಹವಣಿಕೆಯು ಕೈಗೂಡುತ್ತದೋ, ಇಲ್ಲವೋ ಎಂದು ಅವನು ಚಿಂತಿಸುತ್ತಿರುವಾಗ ಮೇಲೆ ಹೇಳಿದಂತೆ ರಾಮಯನೊಡನೆ ಅವನ ಸಖ್ಯವುಂಟಾಗಲು, ರಾಮಯನು ಖಾನನ ಸಂತೋಷಕ್ಕಾಗಿ ಈಗ ಅಪಹರಿಸಲ್ಪಟ್ಟ ಯುವತಿಯನ್ನಲ್ಲದೆ ಇನ್ನೂ ಒಬ್ಬ ಸುಂದರಿಯನ್ನು ಅಂದರೆ ನಿನ್ನ ಗೌರವ ಹೆಚ್ಚುವಂಥ ಸುಂದರಿಯನ್ನು ತಂದು ನಿನ್ನ ಜನಾನಖಾನೆಯನ್ನು ಅಲಂಕರಿಸುತ್ತೇನೆಂದು ವಚನಕೊಟ್ಟಿದ್ದನು. ಈ ವಚನಮಾತ್ರದಿಂದ ಸಂತುಷ್ಟನಾದ ಖಾನನು ರಾಮಯನ ಮೇಲೆ ಪೂರ್ಣ ನಂಬಿಗೆಯನ್ನಿಟ್ಟಿರಲು, ಅವನು ಒಂದೇ ತಿಂಗಳಲ್ಲಿ ಆ ಶ್ರೇಷ್ಠಕುಲದ ತರುಣಿಯನ್ನು ಸಂಪಾದಿಸಿ ತರುವೆನೆಂದು ಹೇಳಿ, ಅದರಂತೆ ಕಾರ್ಯವನ್ನು ನೆರವೇರಿಸಲು ಪ್ರಯತ್ನಪಡಹತ್ತಿದ್ದರಿಂದ ರಾಮಯನ ಮೇಲೆ ಖಾನನ ವಿಶ್ವಾಸಕ್ಕೆ ಸೀಮೆಯೇ ಇಲ್ಲದಾಯಿತು

ಖಾನನು ಒಂದು ದಿನ ಸುಂದರವಾದ ಭವನದಲ್ಲಿ ಕುಳಿತು, ತನಗಿರುವ ಕುಂದು ಯಾವಾಗ ತೊಲಗುವದೋ, ರಾಮಯನು ಹೇಳಿದ ಕಾರ್ಯವು ಎಂದು ಸಾಧಿಸುವದೋ ಎಂಬ ಮುಂತಾದ ಯೋಚನೆಗಳನ್ನು ತಂದುಕೊಂಡು ಯೋಚಿಸುತ್ತ ಕುಳಿತಿರಲು, ಆ ಸಮಯಕ್ಕೆ ಒಬ್ಬ ದ್ವಾರಪಾಲಕನು ಬಂದು "ರಾಮಯಮಂತ್ರಿಗಳು ಬಂದಿರುವರು, ಅಪ್ಪಣೆಯಾದರೆ ಕರೆತರುವೆನು" ಎಂದು ಹೇಳಲು ಖಾನನು ಪ್ರಸನ್ನಮುಖದಿಂದ ಮಂತ್ರಿಗಳನ್ನು ಒಳಗೆ ಬಿಡಲು ದೂತನಿಗೆ ಅಪ್ಪಣೆಯನ್ನು ಕೊಟ್ಟನು ರಾಮಯನು ದಿವಾಣಖಾನೆಯನ್ನು ಪ್ರವೇಶಿಸಿ, ಖಾನನಿಂದ ತೋರಿಸಲ್ಪಟ್ಟ ಉಚಿತಾಸನದ ಮೇಲೆ ಕುಳಿತುಕೊಂಡನು. ಆಗ ಮಂತ್ರಿಯ ಮುಖದ ಮೇಲೆ ಸಂತೋಷದ ಲಕ್ಷಣವು ಒಪ್ಪುತ್ತಿತ್ತು. ಅದರಿಂದ

ಅವನು ಹೋದ ಕಾರ್ಯವು ಕೈಗೂಡಿರಬಹುದೆಂದು ಖಾನನು ಕೂಡಲೆ ತರ್ಕಿಸಿ, ರಾಮಯನನ್ನು ಕುರಿತು,—

ಖಾನ—ಮಂತ್ರಿಪುಂಗವರೇ, ನಿಮ್ಮ ಮುಖಲಕ್ಷಣವನ್ನು ನೋಡುತ್ತಿರಲು, ನೀವು ಹೋದ ಕೆಲಸದಲ್ಲಿ ವಿಜಯವಾದಂತೆ ತೋರುತ್ತದೆ ಯಾಕೆ ನನ್ನ ಈ ತರ್ಕವು ನಿಜವಿರಬಹುದೇನು?

ಮಂತ್ರಿ (ನಕ್ಕು)—ಖಾನಬಹಾದ್ದೂರರೇ, ನಿಮ್ಮ ಇಚ್ಛಯಿದ್ದಂತೆಯೇ ನೀವು ತರ್ಕ ಮಾಡಿರುವಿರಿ? ಶುಭ ನುಡಿಯುವದು ಲೋಕ ವಾಡಿಕೆಯಷ್ಟೇ, ಆದರೆ . .

ಖಾನ(ಗಾಬರಿಯಾಗಿ)—ಏನು ಮಂತ್ರಿಗಳೇ ಕಾರ್ಯವು ವಿಫಲವಾಯಿತೊ?

ಮಂತ್ರಿ(ಹಾಸ್ಯಮುಖದಿಂದ)—ಈ ರಾಮಯನು ಹಿಡಿದ ಕಾರ್ಯವು ಎಂದಾದರೂ ವಿಫಲವಾದೀತೆಂಬದನ್ನು ಮರೆತುಬಿಡಿರಿ. ಅಪಜಯವನ್ನು ಹೊಂದಿ ಜೋಲು ಮೋರೆಯಿಂದ ಬರುವ ಪ್ರಸಂಗವು ಈ ರಾಮಯನ ಆಯುಷ್ಯದಲ್ಲಿ ಬರಲಿಕ್ಕಿಲ್ಲವೆಂದು ತಿಳಿಯಿರಿ,

ಖಾನ—(ನೆಟ್ಟಗೆ ಕುಳಿತು)ಶಾಬಾಶ್, ಮಂತ್ರಿಗಳೇ, ಕಾರ್ಯವನ್ನು ಕೈಗೂಡಿಸಿಕೊಂಡೇ ಬಂದಿರಲ್ಲವೆ? ನಿಮ್ಮ ಕರ್ತೃತ್ವವನ್ನು ಒರಿಯ ಕಿವಿಯಿಂದ ಕೇಳಿದ್ದೆನೇ ಹೊರತು, ಪ್ರತ್ಯಕ್ಷ ಕಾಣುವ ಪ್ರಸಂಗ ಬಂದಿದ್ದಿಲ್ಲ. ಈ ದಿನ ಕಂಡು ಸಂತೋಷವಾಯಿತು. ಆದರೆ ಆ ಸುಂದರಿಯೆಲ್ಲಿ?

ಮಂತ್ರಿ—ನಿಮ್ಮ ದುರ್ಗದಲ್ಲಿಯೇ ನಿಮ್ಮಿಂದ ಇಡಲ್ಪಟ್ಟ ಧರ್ಮಸತ್ರದಲ್ಲಿ ಸುಖವಾಗಿ ವಾಸಿಸಿರುವಳು

ಖಾನ—ಮಂತ್ರಿಗಳೇ, ಹೀಗೇಕೆ ಮಾಡಿದಿರಿ? ಆ ಲಲನಾಮಣಿಯನ್ನು ನಮ್ಮ ರಾಣೀವಾಸವನ್ನು ಬಿಟ್ಟು ಬೇರೆ ಧರ್ಮಸತ್ರದಲ್ಲಿರಿಸಬಹುದೇ? ಕೇವಲ ಅನಾಥರಿಗಾಗಿ ಧರ್ಮಸತ್ರವಿದ್ದು, ರಾಜಭೋಗ್ಯಳಾದ ಸುಂದರಿಯನ್ನು ಅಲ್ಲಿಡುವದು ಹಾಸ್ಯಾಸ್ಪದವಲ್ಲವೇ?

ಮಂತ್ರಿ—ಖಾನಬಹಾದ್ದೂರರೇ, ಹಾಗೆ ತಿಳಿಯಬೇಡಿರಿ, ನೀವು ಇನ್ನೂ ಹಿಂದೂ ತರುಣಿಯರ ಹೃದಯವನ್ನು ಅರಿಯರಿ. ನಾನು ಹೀಗೆ ಮಾಡಿದ್ದರಲ್ಲಿ ನಿಮ್ಮ ಹಿತವೇ ಇರುತ್ತದೆ.

ಖಾನ—(ಆತುರದಿಂದ)ಮಂತ್ರಿಗಳೇ, ನಮ್ಮ ಪಾಲಿನದಾಗಿ ಸಂಪಾದಿಸಿ

ತಂದ ಬಳಿಕ ಅದನ್ನು ಆ ಕೂಡಲೆ ಒಪ್ಪಿಸಿ ಬಿಡುವದಕ್ಕೆ ಅಂದೇಶವೇನು? ಇದರಲ್ಲಿ ಹಿತಾಹಿತಗಳ ತಾರತಮ್ಯವೇನು?

ಮಂತ್ರಿ—ಹಾಗಲ್ಲ, ನೀವು ಹೀಗೆ ಆತುರಪಟ್ಟರೆ ಸ್ವಭಾವಸಿದ್ಧವಾದ ಪುಕ್ಕತನವುಳ್ಳ ಆ ಹಿಂದೂ ತರುಣಿಯು ಬೆದರಬಹುದು ಅಂತೇ ನಿಮಗೆ ಹಿಂದೂ ತರುಣಿಯರ ಹೃದಯ ಪರಿಚಯವಿಲ್ಲ ಇನ್ನೂ [illegible] ಹೇಳಿದೆನು. ನಿಮಗಾಗಿಯೇ ಇಷ್ಟು ಕಷ್ಟಪಟ್ಟು ತಂದ [illegible]ಯನ್ನು ನಿಮಗೆ ಒಪ್ಪಿಸುವದಕ್ಕೆ ನಾನು ಹಿಂದು ಮುಂದು ನೋಡಬಹುದೇ? ಆದರ ಆ ತರುಣಿಯು ಪ್ರಸನ್ನ ಹೃದಯದಿಂದ ನಿಮ್ಮ ಜನಾನಖಾನೆಯನ್ನು ಸೇರುವಂತೆ ಮಾಡುವದಕ್ಕಾಗಿ ಒಂದೆರಡು ದಿನಗಳ ಅವಧಿಯನ್ನು ಕಲ್ಪಿಸಿಕೊಂಡಿರುತ್ತೇನೆ

ಖಾನ—ಮಂತ್ರಿಗಳೇ, ನಿಮ್ಮ ಇಂಗಿತವು ತಿಳಿಯಿತು ನೀವು ನಿಮ್ಮ ಯೋಚನೆಯಂತೆಯೇ ಆ ಯುವತಿಯನ್ನು ನಮ್ಮ ಜನಾನಖಾನೆಗೆ ಮುಟ್ಟಿಸಿರಿ ಮುಖ್ಯವಾಗಿ ನಿಮ್ಮ ಕರ್ತೃತ್ವಶಕ್ತಿಯನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತದೆ. ನೀವು ನನ್ನ ಸುದೈವದಿಂದಲೇ ನನ್ನಲ್ಲಿಗೆ ಬಂದಿರುತ್ತೀರೆಂಬದರಲ್ಲಿ ಸಂಶಯವಿಲ್ಲ

ಮಂತ್ರಿ—ನಾನು ಬಂದು ಬಹಳ ಹೊತ್ತಾಯಿತು ಛತ್ರದಲ್ಲಿದ್ದ ಯುವತಿಯ ಯೋಗಕ್ಷೇಮಕ್ಕಾಗಿ ಹೋಗಬೇಕಾಗಿದೆ ಈಗ ಹೊರಡುವೆನು

ಖಾನ—ನಮ್ಮ ಉಗ್ರಾಣದಿಂದ ಬೇಕಾದ ಪದಾರ್ಥಗಳನ್ನು ತರಿಸಿಕೊಳ್ಳಬಹುದು. ಹೊತ್ತಾಯಿತು. ಹೊರಡಿರಿ

ಈ ಮೇರೆಗೆ ರಾಮಯನು ಖಾನನಿಗೆ ಸಂತೋಷವಾಗುವಂತೆ ಮಾತನಾಡಿ ಆ ಯುವತಿಯನ್ನಿಳಿಸಿರುವ ಧರ್ಮಛತ್ರಕ್ಕೆ ಬಂದನು ಇತ್ತ ಖಾನನು ರಾಮಯನ ಒಂದೊಂದೇ ಕೃತ್ಯವನ್ನು ಅಂದರ ಅವನು ಬೀದರಬಾದಶಹನನ್ನು ಬರಮಾಡಿಕೊಂಡದ್ದನ್ನೂ, ಆ ಯುವತಿಯನ್ನು ಸಂಪಾದಿಸಿ ತಂದದ್ದನ್ನೂ ಸ್ಮರಿಸಿ ಅವನ ಕಾರಸ್ಥಾನದ ವಿಷಯವಾಗಿ ತುಂಬಾ ಆನಂದಪಡತೊಡಗಿದನು.

---

# ೮ನೆಯ ಪ್ರಕರಣ.

## ದುಃಖದಲ್ಲಿ ಸುಖ

—:(೦):—

ವಿಶಾಲವಾದ ಧರ್ಮಸತ್ರವು, ಆದರೂ ರಾಜಭೋಗಕ್ಕೆ ಯೋಗ್ಯವಾದ ಪದಾರ್ಥಗಳು ಅಲ್ಲಿ ದೃಷ್ಟಿಗೆ ಬೀಳುತ್ತಿರುವವು ವಿವಿಧ ಬಣ್ಣಗಳಿಂದ ಬರೆದ ಭವ್ಯಚಿತ್ರಗಳೂ, ಸುವರ್ಣಾಕ್ಷರಗಳೂ ಆ ಮಂದಿರದ ಶೋಭೆಯನ್ನು ಹೆಚ್ಚಿಸುತ್ತಲಿವೆ. ರಾತ್ರಿಸಮಯವಾದ್ದರಿಂದ ಪ್ರಕಾಶವುಳ್ಳ ದೀಪಗಳಿಂದ ಆ ಮಂದಿರವು ವಿಶೇಷ ಅಂದವಾಗಿ ತೋರುತ್ತಿದೆ ಇಂಥ ಮಂದಿರದಲ್ಲಿ ಇಬ್ಬರು ತರುಣಿಯರು ಏನನ್ನೋ ಯೋಚಿಸುತ್ತ ಕುಳಿತಿದ್ದರು ಅದರಲ್ಲಿ ಒಬ್ಬಳು ಕೇವಲ ಅಂಜಿಕೆಯಿಂದ ಬಳಲಿದವಳಾಗಿದ್ದಳು ಇನ್ನೊಬ್ಬಳು ಅಂತರಂಗದಲ್ಲಿ ಗಾಬರಿಯಾಗಿದ್ದರೂ ಬಹಿರಂಗವಾಗಿ ಧೈರ್ಯವನ್ನು ತೋರ್ಪಡಿಸುತ್ತಿದ್ದಳು. ಆಗ ಅವಳು ಅಂಜಿಕೆಯಿಂದ ಬಳಲಿದ ಸ್ತ್ರೀಯನ್ನು ಕುರಿತು—"ಅನಂಗಸೇನಾ ದೇವಿಯವರೇ, ಹೀಗೆ ನೀವು ಕೈಕಾಲು ಬಿಟ್ಟರೆ ಹ್ಯಾಗೆ? ಆ ಬ್ರಾಹ್ಮಣನು ಸಜ್ಜನನಾಗಿ ತೋರುವನು, ನಮ್ಮನ್ನು ಮೋಸಗೊಳಿಸಲಿಕ್ಕಿಲ್ಲ ಇಲ್ಲದ್ದೊಂದು ಮನಸ್ಸಿಗೆ ಹಚ್ಚಿಕೊಂಡು ಹೀಗೆ ಉಪವಾಸ-ವನವಾಸ ಬೀಳುವದು ಅಪಾಯಕರವು. ಈಗ ನಾಲ್ಕೆಂಟು ದಿವಸಗಳಲ್ಲಿ ನಿಮ್ಮ ಕೋಮಲ ಶರೀರವು ಕಂದಿಹೋಗಿದೆ. ಮುಖವು ನಿಸ್ತೇಜವಾಗಿದೆ. ಕಣ್ಣುಗಳು ಬಿಳುಪೇರಿವೆ ಅವ್ವನವರೇ ಇನ್ನು ಮುಂದೆ ಈ ಮನಸ್ಸಿನ ದುಗುಡನ್ನು ಬಿಟ್ಟುಬಿಡಿರಿ ನಾನು ಜೀವದಿಂದಿರುವವರೆಗೆ ಅದಾವ ಅಧಮನು ನಿಮ್ಮ ಮೈ ಕೈ ಮುಟ್ಟುವನು? ಭಗವಂತನ ಕೃಪಾಕಟಾಕ್ಷದಿಂದ ಅಂಥ ಪ್ರಸಂಗವು ಬರಲಿಕ್ಕಿಲ್ಲ

ಅನಂಗಸೇನಾ —ಸಖೀ ಸುಮಿತ್ರೆ, ನಿನ್ನ ಧೈರ್ಯದ ಮೇಲೆಯೇ ನಾನು ಇಲ್ಲಿಯವರೆಗೆ ಜೀವಧಾರಣ ಮಾಡಿದ್ದು, ಇಲ್ಲದಿದ್ದರೆ ಆ ಕಪಟಿಯಾದ ಬ್ರಾಹ್ಮಣನು ನಮ್ಮನ್ನು ಇಲ್ಲಿಗೆ ಕರತಂದ ದಿವಸವೇ ನಾನು ಇಹಲೋಕದಿಂದ ಮುಕ್ತಳಾಗುತ್ತಿದ್ದೆನು.

ಸುಮಿತ್ರಾ.—ದೇವಿಯವರೇ, ನಾನು ನಿಮಗೆ ಶರಗೊಡ್ಡಿ ಬೇಡಿಕೊಳ್ಳುತ್ತೇನೆ, ಪ್ರಸಂಗ ಬಂದಾಗ ನಾಲ್ಕು ಹರದಾರಿ ದಾರಿಯನ್ನಾದರೂ ನಡೆಯಲಿಕ್ಕೆ ಶಕ್ತರಾಗುವಂತೆ ನಿಮ್ಮ ದೇಹದ ಸ್ಥಿತಿಯು ಸುಧಾರಿಸಬೇಕಾಗುತ್ತದೆ. ಅದ್ದರಿಂದ

ಅನ್ನ ಸೇವನ ಮಾಡಿರಿ. ಸುಮ್ಮನೆ ಭವಿತವ್ಯತೆಯನ್ನು ಚಿಂತಿಸುತ್ತ ಸೊರಗುವದರಲ್ಲಿ ಅರ್ಥವಿಲ್ಲ

ಅನಂಗಸೇನಾ —ಸುಮಿತ್ರಾ, ನಾನಾದರೂ ಏನು ಮಾಡಲಿ? ಆ ಬ್ರಾಹ್ಮಣನ ಬಣ್ಣದ ಮಾತುಗಳನ್ನು ನೆನೆಸಿದರೆ ನನ್ನ ಎದೆಯು ಬಿರಿದು ಬೀಳುತ್ತದೆ. ಅವನು ನಮ್ಮನ್ನು ಇಲ್ಲಿಗೆ ಕರೆತರುವದಕ್ಕಾಗಿಯೇ ಇಷ್ಟೊಂದು ಕಪಟ ಜಾಲವನ್ನು ಒಡ್ಡಿದನಲ್ಲ ಏನೋ? ಸುಮಿತ್ರಾ, ಆ ಕರೀ ಬ್ರಾಹ್ಮಣನು ನಮ್ಮನ್ನು ನಿಜವಾಗಿಯೂ ಸಂಕಟಕ್ಕೆ ಗುರಿಮಾಡಿರಬಹುದೇನು?

ಸುಮಿತ್ರಾ —(ಸ್ವಗತ) ಈಕೆಗೆ ಈಗ ನಿಜವಾದ ಅಭಿಪ್ರಾಯವನ್ನು ಹೇಳಿದರೆ ಅನ್ನ ನೀರುಗಳನ್ನು ಬಿಟ್ಟು ಉಸಿರ್ಗಳೆಯುತ್ತ ಕೂಡ್ರುವಳು ಆದ್ದರಿಂದ ಇವಳ ಮುಂದೆ ನನಗೆ ಬಂದ ಸಂಶಯವನ್ನು ಹೇಳಬಾರದು ಎಂದು ಯೋಚಿಸಿ, (ಪ್ರಕಾಶ)ಅವ್ವನವರೇ, ಛೇ, ಆ ಬ್ರಾಹ್ಮಣನು ಅಂಥ ಮನುಷ್ಯನಲ್ಲ, ಮೇಲಾಗಿ ಪರರ ಹೆಣ್ಣುಮಕ್ಕಳನ್ನು ತಂದು ಅವರನ್ನು ಸಂಕಟಕ್ಕೆ ಗುರಿ ಮಾಡುವದರಿಂದ ಅವನಿಗೆ ಆಗತಕ್ಕ ಲಾಭವಾದರೂ ಏನು?

ಅನಂಗಸೇನೆ —ಹಾಗಿದ್ದರೆ ಆ ಬ್ರಾಹ್ಮಣನು ತಿರುಗಿ ನಮಗೆ ಯಾಕೆ ಭೆಟ್ಟಿಯಾಗಿರಲಿಕ್ಕಿಲ್ಲ? ಅವನು ನಮ್ಮನ್ನು ಇಲ್ಲಿ ತಂದು ಇಳಿಸಿ ಇಂದಿಗೆ ಏಳೆಂಟು ದಿನಗಳಾದವು ಈ ಅವಧಿಯಲ್ಲಿ ನೀವು ಹ್ಯಾಗಿದ್ದೀರೆಂದು ಸಹ ಅವನು ನಮ್ಮನ್ನು ಮಾತಾಡಿಸ ಬಂದಿಲ್ಲ ಯಾರೋ ಸೀಧಾ-ಸಾಮುಗ್ರಿಗಳನ್ನು ಕಳಿಸುವರು, ಅಡಿಗೆಯವಳು ಮಾಡಿ ಹಾಕಿದ ಅನ್ನವನ್ನು ಉಣ್ಣುತ್ತ ನಾವು ತಣ್ಣಗೆ ಕುಳಿತುಕೊಂಡೆವು, ಹೀಗೆಯೇ ನಾವು ಇಲ್ಲಿ ಎಷ್ಟು ದಿವಸವಿರಬೇಕು?

ಸುಮಿತ್ರಾ —ಈಗಿನ ಕಾಲವು ಕಠಿಣವಿರುವದು ನಮಗೆ ಸಹಾಯ ಮಾಡುವ ಆ ಬ್ರಾಹ್ಮಣನಿಗೆ ಮತ್ತಾವ ವಿಪತ್ತು ಬಂತೋ ಏನೋ?

ಈ ಮೇರೆಗೆ ಆ ಹೆಂಗಳೆಯರು ಮಾತಾಡುತ್ತಿರಲು ಹೊರಗಿನಿಂದ ಯಾರೋ ಬರುತ್ತಿರುವ ಹಾಗೆ ತೋರಿತು ಮನುಷ್ಯ ಸುಳುವನ್ನು ಅರಿತು ಆ ಬ್ರಾಹ್ಮಣನೇ ಬಂದಿರಬಹುದೆಂದು ಮೊದಮೊದಲು ಆ ಹೆಂಗಸರು ಭಾವಿಸಿದರು. ಆದರೆ ಮುಂಭಾಗದಲ್ಲಿ ಹಾಕಿದ ಪರದೆಯನ್ನು ಓರೆಮಾಡಿ ಬಂದ ಇಬ್ಬರು ಪುರುಷರನ್ನು ನೋಡಿ ಅವರ ಎದೆಯೊಡದು ನೀರಾಯಿತು ಅನಂಗಸೇನೆಯಂತೂ ಮೂರ್ಛೆ ಬಂದು ನೆಲಕ್ಕೊರಗಿದಳು ಆಗ ಅವಳ ಮೈಮೇಲಿನ ಶರಗು ಜಾರಿ ಹೋದ್ದರಿಂಗ ಅವಳ ಸುಂದರ ವಕ್ಷಸ್ಥಳವು ಕೇದಿಗೆಯ ಬಣ್ಣವನ್ನು ಹೀಯಾಳಿ

ಸುತ್ತಿದೆಯೋ ಎಂಬ ತೆರದಿಂದ ತೋರಿತು. ಅವಳ ಪುಷ್ಟವಾದ ಕುಚದ್ವಯಗಳು ಜಗತ್ತಿನಲ್ಲಿಯ ಪುರುಷರೆಲ್ಲರ ಚಿತ್ತಗಳನ್ನು ಸಂಗ್ರಹಿಸಿಡುವ ಸುವರ್ಣಕಲಶಗಳಂತೆ ಒಪ್ಪುತ್ತಿದ್ದವು ಆ ಆಗಂತುಕ ಪುರುಷರಲ್ಲಿ ಒಬ್ಬನು ಅತ್ಯಂತ ಪ್ರೀತಿಯಿಂದ ಆದರೆ ಆಶಾಜನಕ ದೃಷ್ಟಿಯಿಂದ ಆಕೆಯ ಈ ಸುಂದರ ಅವಯವಗಳನ್ನು ಎವೆಯಿಕ್ಕದೆ ನೋಡತೊಡಗಿದನು ಆ ಪುರುಷಾಧಮನ ಈ ದುಷ್ಟ ಹೇತುವನ್ನು ತಿಳಿದು ಸುಮಿತ್ರೆಯು ಲಗುಬಗೆಯಿಂದ ಅನಂಗಸೇನೆಯ ಮೈಮೇಲೆ ಬೇರೆ ವಸ್ತ್ರವನ್ನು ಹೊಚ್ಚಿದಳು. ಆದ್ದರಿಂದ ಆಕೆಯ ಸುಂದರ ಅವಯವಗಳು ಕಣ್ಮರೆಯಾದವು. ಆಗ ಆ ಪುರುಷನು ಭ್ರಾಂತಿಯಿಂದ ದಂಗುಬಡಿದು ನಿಂತಿರಲು, ಸುಮಿತ್ರೆಯು ಒಳ್ಳೇ ಸಿಟ್ಟಿನಿಂದ—

ಸುಮಿತ್ರಾ—ಯಾರು ನೀವು? ಇಷ್ಟು ಅಪರಾತ್ರಿಯಲ್ಲಿ ಎರಡನೆಯ ಹೆಂಗಸರಿದ್ದಲ್ಲಿಗೆ ಹೀಗೆ ಬರಬಹುದೇ? ನಡೆಯಿರಿ, ಈ ಮಂದಿರದಿಂದ ಆಚಗೆ!

ಒಬ್ಬ ಪುರುಷನು—(ನಕ್ಕು) ನಾನು ಯಾರೆಂದು ತಿಳಿದಿರುವಿರಿ? ನಾನು ಈ ಸತ್ರದ ಅಧಿಕಾರಿ ಈ ಕೋಟೆಯ ಒಡೆಯನಿರುವನು ನನಗೆ ದಾವಲಖಾನ ನೆಂಬ ಹೆಸರು ಇರುವದು ಇಷ್ಟು ದಿವಸ ನಾನೇ ನಿಮ್ಮ ಹೊಟ್ಟೆಗೆ ಸೀಪಾ-ಸಾಮುಗ್ರಿಗಳನ್ನು ಕಳಿಸುತ್ತಲಿದ್ದೇನೆ ಮೇಲಾಗಿ ಈ ಸ್ತ್ರೀಯು ನನ್ನಗೋಸ್ಕರ ವಾಗಿಯೇ ಇಲ್ಲಿಗೆ ತರಲ್ಪಟ್ಟಿರುವಳು ಅಂದಬಳಿಕ ನನಗೆ ಇಲ್ಲಿಗೆ ಬರಲು ಆತ್ರಾಕವೇ? ಸುಂದರೀ ಹೀಗೆ ಕೋಪಿಸಬೇಡ, ನಿನ್ನ ಒಡತಿಯನ್ನು ಎಚ್ಚರಗೊಳಿಸಿ, ನನ್ನೊಡನೆ ನಾಲ್ಕು ಸುಖಗೋಷ್ಠಿಗಳನ್ನಾಡುವ ಹಾಗೆ ಮಾಡು ನಿನ್ನ ಈ ಒಡತಿಯನ್ನು ನನ್ನ ಅಪಾರವೈಭವದ ಮುಖ್ಯಸ್ಥಳನ್ನಾಗಿ ಮಾಡುವೆನು

ಈ ತೋರೆಗೆ ಆ ಪುರುಷನ ಭಾಷಣವನ್ನು ಕೇಳಿ, ಸುಮಿತ್ರೆಯು ಗದಗುಟ್ಟಿ ನಡುಗಿದಳು ನಿಜವಾಗಿಯೂ ತನ್ನ ಒಡತಿಯಮೇಲೆ ದೊಡ್ಡ ಗಂಡಾಂತರವು ಒಂತೆಂದು ಭಾವಿಸಿದಳು ಆಗ ಅವಳು ತನ್ನ ಅವಧಾನವನ್ನು ಬೈಲಿಗೆಳೆಯದ ಸಿಟ್ಟನ್ನು ನುಂಗಿಕೊಂಡು—

ಸುಮಿತ್ರಾ--(ಪ್ರಸಂಗಾವಧಾನತಾಳಿ ಸ್ಮಿತವದನದಿಂದ) ಹೀಗೇನು? ಇಷ್ಟು ರಾತ್ರಿಯಲ್ಲಿ ನೀವು ಬರುವಿರೆಂಬದು ನಮಗೇನು ಗೊತ್ತು! ನೀವು ಈ ಸಂಗತಿಯನ್ನು ಮೊದಲೇ ತಿಳಿಸಿ ಬಂದಿದ್ದರೆ ನೆಟ್ಟಗಾಗುತ್ತಿತ್ತು. ನಮ್ಮ ಒಡತಿಗೆ ಹೀಗೆ ಮೂರ್ಛೆಹೊಂದುವ ಪ್ರಸಂಗವೇ ಬರುತ್ತಿದ್ದಿಲ್ಲ

ದಾವಲಖಾನ—ಓಹೋ, ನಾನು ದಡ್ಡತನ ಮಾಡಿದೆನು. ಈ ಸುಂದರಿ

ಯರಿಗೆ ವೃಥಾ ಶ್ರಮಕೊಟ್ಟ ಹಾಗಾಯಿತು (ಆ ಸ್ತ್ರೀಯ ಕಡೆಗೆ ನೋಡಿ) ಸುಂದರೀ, ನನ್ನ ಅಪರಾಧವನ್ನು ಕ್ಷಮಿಸು ನೀವು ಹೀಗೆ ನನಗನುಕೂಲರಿರುವಿರೆಂದು ತಿಳಿದಿದ್ದರೆ, ನಿಮ್ಮನ್ನು ನಾನು ಈ ವೈಭವ ಶೂನ್ಯವಾದ ಸತ್ರದಲ್ಲಿ ಇರಗೊಡುತ್ತಿದ್ದನೇ? ರಾಮಯಮಂತ್ರಿಗೆ ಇವರ ಹೃದಯವು ತಿಳಿಯದೇ ಹೋಗಿರುವದು. ಅಂತೆಯೇ ಆತನು ನನಗೆ ಹೀಗೆ ಹೇಳಿದನು ಸುಂದರೀ, ನಿನ್ನ ಒಡತಿಯನ್ನು ಬೇಗನೆ ಎಚ್ಚರಗೊಳಿಸು, ನೆತ್ತಿಗೆ ನೀರು ಬಡಿಯಬೇಕಾದೀತೇನು? ಸಮೀಪದಲ್ಲಿ ಎಲ್ಲಿಯಾದರೂ ನೀರು ಇದ್ದರೆ ತಕ್ಕೊಂಡು ಬರಲಿಯಾ?

ಸುಮಿತ್ರಾ—ಖಾವಿಂದ, ಈ ಅನಾಥ ಹೆಂಗಸರ ಸಲುವಾಗಿ ತಮಗೇಕೆ ಅಷ್ಟೊಂದು ಶ್ರಮವು! ನಮ್ಮ ಅವ್ವನವರು ಈಗ ನಾಲ್ಕು ದಿನಗಳಿಂದ ಪಿತ್ಥವಿಕಾರದಲ್ಲಿರುವರು. ಇನ್ನು ಸ್ವಲ್ಪ ಹೊತ್ತಿನ ಮೇಲೆ ತಾವೇ ಏಳುವರು

ದಾವಲಖಾನ—ಛೀ, ಛೀ, ಮೂರ್ಛೆಬಂದವರನ್ನು ಬಹಳ ಹೊತ್ತು ಹಾಗೇ ಬಿಡುವದು ಅಪಾಯಕರವು ನಾನೇ ನನ್ನ ಕೈಮುಟ್ಟಿ ಎಬ್ಬಿಸುವೆನು. (ಹತ್ತರ ಹೋಗುವನು.)

ಸುಮಿತ್ರೆ—ಖಾವಿಂದರೇ, ಹೀಗೆ ನೀವು ಅನುಚಿತ ಕಾರ್ಯವನ್ನು ಮಾಡಬಾರದು ದಾಸಿಯಾದ ನಾನು ಪ್ರತ್ಯಕ್ಷ ಇರುತ್ತಿರಲು

ಈ ಪ್ರಕಾರ ಸುಮಿತ್ರೆಯು ಮಾತಾಡುವಷ್ಟರಲ್ಲಿ ಒಬ್ಬ ದೂತನು ಧಾವಿಸಿ ಬಂದು ಒಂದು ಲಕ್ಕೋಟಿಯನ್ನು ಖಾನನ ಕೈಯಲ್ಲಿ ಕೊಟ್ಟನು. ಖಾನನು ಅದನ್ನು ತಕ್ಕೊಂಡು ಅದರ ಒಂದು ಕಡೆಯ ಅಂಚನ್ನು ಚರಚರ ಹರಿದೊಗೆದು ಒಳಗಿನ ಮೊಹರನ್ನು ಒಡೆದು ಪತ್ರವನ್ನು ಓದಿಕೊಂಡನು. ಆ ಪತ್ರದ ಸಂಗತಿಯಿಂದ ಅವನ ಮನಸ್ಸು ಕಳವಳವಾಯಿತು ಆಗ ಅವನು ಸಂಗಡ ಕರಕೊಂಡು ಬಂದಿದ್ದ ಫಕೀರನನ್ನು ಕುರಿತು--

ದಾವಲಖಾನ—ಮಹಾತ್ಮರೇ, ನಾವು ಈಗ ನಮ್ಮ ಮಂದಿರಕ್ಕೆ ಹೋಗಲೇ ಬೇಕಾಯಿತು. ಈ ಸುಂದರಿಯೊಡನೆ ನಾಲ್ಕು ಮಾತುಗಳನ್ನಾಡುವದಕ್ಕೆ ಇದೊಂದು ವಿಘ್ನವಾಯಿತು.

ಫಕೀರ--ಖಾನಬಹಾದ್ದೂರರೇ, ಇಂದಿಲ್ಲನಾಳೆ ಮಾತಾಡಲಿಕ್ಕೆ ಬಂದೀತು. ಇದು ಕೈಯೊಳಗಿನ ಮಾತಾಗಿರುವದರಿಂದ ಇದಕ್ಕಾಗಿ ಯಾಕೆ ಇಷ್ಟು ಯೋಚನೆ.

ಆ ಬಳಿಕ ಖಾನನು ಫಕೀರನೊಡನೆ ಅಲ್ಲಿಂದ ಹೊರಟುಹೋದನು. ಸುಮಿತ್ರೆಯು ಒಂದು ದೊಡ್ಡ ಕುತ್ತದೊಳಗಿಂದ ಪಾರಾದಂತೆ ಉಸ್ಸೆಂದು ಒಮ್ಮೆ

ದೀರ್ಘಶ್ವಾಸವನ್ನು ಬಿಟ್ಟು ತನ್ನ ಒಡತಿಯನ್ನು ಸಂತೈಸತೊಡಗಿದಳು. ಸುಮಿತ್ರೆಯು ಮಾಡುವ ಸೀತೋಪಚಾರಗಳಿಂದ ಅನಂಗಸೇನೆಯ ಮೂರ್ಛೆಯು ಮೆಲ್ಲ ಮೆಲ್ಲನೆ ತಿಳಿದು ಅವಳು ಎದ್ದು ಕುಳಿತಳು ಮತ್ತು ಮೊದಲಿನ ಭ್ರಾಂತಿಯಿಂದ ಅವ್ವಯ್ಯಾ, ಆ ರಾಕ್ಷಸರು ಇನ್ನೂ ಇಲ್ಲಿಯೇ ಇರುವರೇ, ಎಂದು ಮತ್ತೆ ನೆಲಕ್ಕೆ ಬಿದ್ದಳು ಆಗ ಆಕೆಯನ್ನು ಸಂತೈಸಬೇಕಾದರೆ ಸುಮಿತ್ರೆಗೆ ಸಾಕುಸಾಕಾಗಿ ಹೋಯಿತು ಕಡೆಗೆ ಸುಮಿತ್ರೆಯು ಬಹುದೈನ್ಯದಿಂದ ಹಾಗು ವಿಶ್ವಾಸಪೂರ್ವಕವಾಗಿ ಅಭಿವಚನವನ್ನು ಕೊಟ್ಟದ್ದರಿಂದ ಅನಂಗಸೇನೆಯು ಕಣ್ಣು ತೆರೆದಳು. ಸುತ್ತಲೂ ನೋಡಿ ಆ ರಾಕ್ಷಸರು ಇಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡಳು. ಒಳಿಕ ಅವಳು ಸುಮಿತ್ರೆಯನ್ನು ಕುರಿತು—

ಅನಂಗಸೇನಾ—ಸುಮಿತ್ರೆ, ಆ ರಾಕ್ಷಸರು ಯಾರು? ಇಲ್ಲಿಗೇಕೆ ಬಂದಿದ್ದರು?

ಸುಮಿತ್ರೆ—(ಸ್ವಲ್ಪ ಯೋಚಿಸಿ)ಅವ್ವನವರೇ, ಇನ್ನು ಮುಂದೆ ಮುಚ್ಚಿಟ್ಟರೆ, ಒಗಿಹರಿಯುವ ಹಾಗಿಲ್ಲ. ಇಷ್ಟು ದಿವಸ ನನಗೂ ನಿಮ್ಮಂತೆ ಆ ಬ್ರಾಹ್ಮಣನ ಕಪಟತಂತ್ರಗಳ ವಿಷಯವಾಗಿ ಸಂಶಯ ಬಂದರೂ ನೀವು ಮತ್ತಿಷ್ಟು ಕೈ-ಕಾಲು ಬಿಡುವಿರೆಂದು ನಿಮಗೆ ಧೈರ್ಯವ ಕೊಡುವದಕ್ಕಾಗಿ ಆ ಬ್ರಾಹ್ಮಣನು ಸಜ್ಜನನೆಂದು ಹೇಳುತ್ತ ಬಂದೆನು ಆದರೆ—

ಅನಂಗಸೇನೆ—(ಗಾಬರಿಯಾಗಿ) ಸುಮಿತ್ರಾ, ಆದರೆ ಈಗೇನಾಯಿತು? ಆದದ್ದನ್ನು ತಟ್ಟನೆ ಹೇಳಿಬಿಡು

ಸುಮಿತ್ರೆ—ಅವ್ವನವರೇ, ನಿಜಸಂಗತಿಯನ್ನು ಹೇಳಬೇಕೆಂದು ನನ್ನ ಮನಸ್ಸು ಇಚ್ಛಿಸುತ್ತಿಗೆ ಆದರೆ ಪ್ರಸಂಗವು ಭಯಂಕರವಿರುವದರಿಂದ ಹ್ಯಾಗೆ ಹೇಳಬೇಕೆಂದು ಯೋಚಿಸುತ್ತೇನೆ.

ಅನಂಗಸೇನಾ—ಸುಮಿತ್ರೇ, ಹೀಗೇಕೆ ನನ್ನನ್ನು ಹೆದರಿಸುತ್ತೀ, ಏನು ಆಗುವದು ಒಮ್ಮೆ ಆಗಿ ಹೋಗಲಿ, ಇಳಿಯೇ ಮುಣುಗಿದವರಿಗೆ ಚಳಿಯ ಅಂಜಿಕೆ ಏನು? ಹೂ! ಬೇಗನೆ ಹೇಳು.

ಸುಮಿತ್ರೆ—ನಮ್ಮನ್ನು ಇಲ್ಲಿಗೆ ಕರೆತಂದವನು ಬ್ರಾಹ್ಮಣನಲ್ಲ. ನಮ್ಮ ಶತ್ರುವಾದ ರಾಮಯಮಂತ್ರಿಯು. ಬ್ರಾಹ್ಮಣವೇಷದಿಂದ ನಮ್ಮನ್ನು ಹೀಗೆ ಮೋಸಗೊಳಿಸಿರುವನು.

ಅನಂಗಸೇನೆ—(ಮನಸ್ಸು ಕಲ್ಲುಮಾಡಿ) ಇಲ್ಲಿಗೇಕೆ ಕರಕೊಂಡು ಒಂದಿ ರುವನು?

ಸುಮಿತ್ರೆ—ಅವ್ವನವರೇ, ಈ ಪ್ರಶ್ನೆಗೆ ಉತ್ತರ ಕೊಡಬೇಕಾದರೆ, ನನ್ನ ನಾಲಿಗೆಯು ಸ್ವಲ್ಪ ಹಿಂಜರಿಯುತ್ತದೆ ದುಃಖವು ಒತ್ತರಿಸುತ್ತದೆ ಮೈಯಲ್ಲಿ ಕಂಪನವುಂಟಾಗುತ್ತದೆ. ಹಾಯ್! ಹಾಯ್! ವಿಧಿಯೇ ನನ್ನ ಒಡತಿಗೆ ಎಂಥ ಪ್ರಸಂಗವನ್ನು ಒದಗಿಸಿದೆ? ಕಣ್ಣೀರುದರಿಸಿದಳು!

ಅನಂಗಸೇನೆ—ಸಖೀ, ನನಗಿಂತಲೂ ನೀನೇ ಧೈರ್ಯಬಿಟ್ಟೆಯಲ್ಲ? ನೀನು ಹೀಗೆ ಶೋಕಿಸಿದರೆ, ನನಗೆ ಹ್ಯಾಗೆ ತಿಳಿಯಬೇಕು?

ಸುಮಿತ್ರೆ—ಅವ್ವನವರೇ ಬಾಯಿಬಿಚ್ಚಿ ಹೇಳದಿದ್ದರೆ ಗತ್ಯಂತರವಿಲ್ಲ. ದುಷ್ಟ ನಾದ ರಾಮಯಮಂತ್ರಿಯು ನಿಮ್ಮನ್ನು ಇಲ್ಲಿಯ ದುರ್ಗಾಧಿಪತಿಯಾದ ದಾವಲ್ ಖಾನನೆಂಬ ಯವನನಿಗೆ ಬಲಿಯಾಗಿ ಅರ್ಪಿಸುವದಕ್ಕೆ ಇಷ್ಟೆಲ್ಲ ಕೃಷ್ಣಕಾರಸ್ಥಾನ ಗಳನ್ನು ಮಾಡಿರುವನಂತೆ!

ಅನಂಗಸೇನೆ—(ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದು ಕೊಂಡು) ಅವ್ವಯ್ಯಾ, ಏನು ಭಯಂಕರ ಸುದ್ದಿಯಿದು? ವಿರೂಪಾಕ್ಷಾ, ಈ ಅಬಲೆಯ ಮೇಲೆ ಇಂಥ ಬ್ರಹ್ಮಾಸ್ತ್ರವನ್ನು ಬಿಟ್ಟೆಯಾ? ಹಾ! ವಿಧಿಯೇ!

ಸುಮಿತ್ರೆ—ಅವ್ವನವರೇ, ಅಳಬೇಡಿರಿ ನಮ್ಮನ್ನು ಈ ಸಂಕಟದಿಂದ ಪಾರುಮಾಡಲು ಆದಿಜನನಿಯಾದ ಭುವನೇಶ್ವರಿಯು ಸಮರ್ಥಳಿರುವಳು. ದೇವರು ಭಕ್ತರನ್ನು ಎಂದೂ ಉಪೇಕ್ಷಿಸುವದಿಲ್ಲ. ಹಿಂದಕ್ಕೆ ದುಷ್ಟರ ಕೈಯಲ್ಲಿ ಸಿಕ್ಕ ದ್ರೌಪದಿಯನ್ನು ಶ್ರೀ ಕೃಷ್ಣಪರಮಾತ್ಮನು ಬಿಡಿಸಲಿಲ್ಲವೇ? ಆದ್ದರಿಂದ ಈಗ ಆ ಭುವನೇಶ್ವರೀಮಾತೆಯು ಬಿಡಿಸದೆ ಇರುವಳೇ?

ಅನಂಗಸೇನಾ—ಸುಮಿತ್ರಾ, ಆ ಜಗನ್ಮಾತೆಯೇ ನಮ್ಮನ್ನು ಕಾಯಬೇಕು ದೈವಗತಿಯು ಎಷ್ಟು ವಿಚಿತ್ರವಿದ್ದಾವ ಇದು?

ಸುಮಿತ್ರೆ—ಅವ್ವನವರೇ, ಜಗನ್ಮಾತೆಯ ಮೇಲೆ ಭಾರಹಾಕಿ ಧೈರ್ಯ ದಿಂದ ಇರ್ರಿ. (ಮೈಹಿಡಿದು ನೋಡಿ) ನಿಮಗೆ ಎಷ್ಟು ಭಯಂಕರ ಜ್ವರಬಂದಿವೆ ಯಲ್ಲ? ಏನಾದರೂ ಔಷಧ ತರಲಿಯಾ?

ಅನಂಗಸೇನೆ—ಏನು ಹುಚ್ಚಿಯುವ್ವಾನೀನು? ಆ ಔಷಧತಕ್ಕೊಂಡುಮಾಡು ವದೇನು? ಮೇಲಾಗಿ ಇಷ್ಟುರಾತ್ರಿಯಲ್ಲಿ ನಿನಗೆ ಔಷಧವಾದರೂ ಎಲ್ಲಿಸಿಗುವದು?

ಸುಮಿತ್ರೆ—ಇನ್ನೂ ಜನರು ಮಲಗಿದ ಹಾಗೆ ತೋರುವದಿಲ್ಲ. ಪೇಟೆ

ಯಲ್ಲಿ ನೋಡಿಕೊಂಡು ಬರುವೆನು (ತಲೆಬಾಗಿಲವರೆಗೆ ಹೋಗಿ,) ಅವ್ವಯ್ಯಾ! ಬಾಗಿಲಲ್ಲಿ ಈ ಟೊಣಪರು ಎಲ್ಲಿಂದ ಬಂದರು? ಅಪ್ಪಗಳಿರಾ, ನಮ್ಮ ದೇವಿಯವರಿಗೆ ಜ್ವರ ಬಂದಿರುವವು ಆದ್ದರಿಂದ ಪೇಟೆಯಲ್ಲಿ ಹೋಗಿ, ಔಷಧ ತರುವೆನು ದಯಮಾಡಿ ನನ್ನನ್ನು ಹೋಗಗೊಡುವಿರಾ?

ಕಾವಲುಗಾರರು—ಈ ಧರ್ಮಸತ್ರದೊಳಗಿಂದ ಯಾರನ್ನೂ ಹೊರಗೆ ಬಿಡದಂತೆ ಖಾನಸಾಹೇಬರು ಕಟ್ಟಪ್ಪಣೆ ಮಾಡಿದ್ದಾರೆ ಆದ್ದರಿಂದ ನಿಮ್ಮನ್ನು ಹೊರಗೆ ಬಿಡಲಿಕ್ಕಾಗುವದಿಲ್ಲ

ಸುಮಿತ್ರಾ—(ಅಧಿಕಾರಯುಕ್ತ ವಾಣಿಯಿಂದ) ನಿಮ್ಮನ್ನು ಖಾನಸಾಬರು ನಿಯಮಿಸಿರುವರೇ? ಹಾಗಿದ್ದರೆ, ನೀವು ನಮ್ಮ ಮಾತನ್ನು ಕೇಳಲೇಬೇಕು. ಇಲ್ಲದಿದ್ದರೆ, ನೀವು ಚಾಕರಿಯನ್ನು ಕಳಕೊಂಡು ಮನೆಗೆ ಹೋಗಬೇಕಾದೀತು.

ಕಾವಲುಗಾರರು—(ತೆಪ್ಪಗಾಗಿ) ಅವ್ವನವರೇ, ನೀವು ಹೊರಗೆ ಯಾವ ಕೆಲಸಕ್ಕಾಗಿ ಹೋಗುವಿರೋ, ಆ ಕೆಲಸವನ್ನು ನಾವೇ ಮಾಡುವೆವು. ಒಬ್ಬ ವೈದ್ಯನನ್ನು ಕರೆದುಕೊಂಡು ಬರುತ್ತೇವೆ

ಈ ಪ್ರಕಾರ ನುಡಿದು ಒಬ್ಬ ಕಾವಲುಗಾರನು ಪೇಟೆಯೊಳಗೆ ಒಡಿಹೋದನು ವೈದ್ಯಗಾರರ ಬೀದಿಯಲ್ಲಿ ಎಲ್ಲರೂ ಹೊರಟು ಹೋಗಿದ್ದು, ಒಬ್ಬನು ಮಾತ್ರ ಒಂದು ಕಟ್ಟೆಯ ಮೇಲೆ ತನ್ನ ಔಷಧಿಯ ಸಾಮಾನುಗಳನ್ನು ಕಟ್ಟುತ್ತ ಕುಳಿತಿದ್ದನು ಕಾವಲುಗಾರನು ಬಂದ ಕೆಲಸವಾಯಿತೆಂದು ಹಿಗ್ಗಿ, ಆ ವೈದ್ಯನ ಕಡೆಗೆ ಹೋಗಿ ಅವನಿಗೆ ಧರ್ಮಸತ್ರಕ್ಕೆ ಬರುವದಕ್ಕಾಗಿ ವಿಜ್ಞಾಪಿಸಿಕೊಂಡನು. ಧರ್ಮಸತ್ರವೆಂದಕೂಡಲೆ ವೈದ್ಯನ ಕಿವಿಗಳು ವಿಸ್ತೃತವಾದವು ಅವನು ಕಾವಲುಗಾರನನ್ನು ಕುರಿತು – ಏನಂದೀ? ಎಂದು ಪ್ರಶ್ನೆಮಾಡಿದನು. ಕಾವಲುಗಾರನು-ಸ್ವಾಮಿ, ಧರ್ಮಸತ್ರದಲ್ಲಿ ಖಾನಸಾಹೇಬರು ತಂದಿಟ್ಟ ಹೆಂಗಸರಲ್ಲಿ ಒಬ್ಬಾಕೆಗೆ ಜ್ವರ ಬಂದಿದೆಯಂತೆ, ನೀವು ಅಲ್ಲಿಯವರೆಗೆ ಬಂದು ಚಿಕಿತ್ಸೆ ಮಾಡುವಿರಾ?

ವೈದ್ಯ—ಖಾನಸಾಹೇಬರಲ್ಲಿ ರಾಜವೈದ್ಯರಿರುತ್ತಿರಲು, ನನ್ನ ಅವಶ್ಯಕತೆಯೇನು?

ಕಾವಲುಗಾರ—ಈ ಸಂಗತಿಯು ಖಾನಸಾಹೇಬರಿಗೆ ಗೊತ್ತಿಲ್ಲ. ನಾನೇ ಆ ಹೆಂಗಸರ ಕಷ್ಟವನ್ನು ನೋಡಲಾರದೆ ಯಾರನ್ನಾದರೂ ವೈದ್ಯರನ್ನು ಕರೆಯಬೇಕೆಂದು ಬಂದೆನು ಇಲ್ಲಿ ನೀವೊಬ್ಬರೇ ಇದ್ದದ್ದರಿಂದ ನಿಮಗೆ ಈ ಸಂಗತಿಯನ್ನು ಬಿನ್ನವಿಸಿಕೊಂಡೆನು.

ವೈದ್ಯ—ನನಗೆ ಔಷಧಿಯ ಖರ್ಚನ್ನು ಕೊಡುವವರಾರು?

ಕಾವಲುಗಾರ—ಆ ಹಂಗಸರು.

ವೈದ್ಯ—ಹಾಗಾದರೆ ನೀನು ಮುಂದೆ ನಡೆ ನಾನು ನನ್ನ ಅಂಗಡಿಯನ್ನು ಹಾಕಿಕೊಂಡು ಜ್ವರಕ್ಕೆ ತಕ್ಕ ಔಷಧಿಯನ್ನು ತಕ್ಕೊಂಡು ಬರುವೆನು.

ಕಾವಲುಗಾರನು ಮುಂದೆ ನಡದನು ಬಳಿಕ ವೈದ್ಯನು ಒಂದು ಸಣ್ಣ ಕಾಗದದಲ್ಲಿ ಏನೋ ಬರೆದು ಅದರಲ್ಲಿ ೨-೩ ಗುಳಿಗೆಗಳನ್ನಿಟ್ಟು ಆ ಕಾಗದದ ಚೀಟನ್ನು ಕಟ್ಟಿದನು ಅನಂತರ ಅಂಗಡಿಯನ್ನು ಹಾಕಿಕೊಂಡು ಸತ್ರದ ಕಡೆಗೆ ನಡೆದನು.

ಸತ್ರದಲ್ಲಿ ಕಾವಲುಗಾರರೂ, ಸುಮಿತ್ರೆಯೂ ವೈದ್ಯನ ಬರೀ ನೋಡುತ್ತ ನಿಂತುಕೊಂಡಿದ್ದರು ಅಷ್ಟರಲ್ಲ ವೈದ್ಯನು ಬರಲು, ಸುಮಿತ್ರೆಯು ಅವನ ಮುಂದೆ ರೋಗಿಯ ಲಕ್ಷಣಗಳನ್ನು ಹೇಳಿದಳು ಅದನ್ನು ಕೇಳಿಕೊಂಡು ವೈದ್ಯನು ರೋಗಿಯ ಪ್ರಕೃತಿಯನ್ನು ನೋಡಬೇಕಾಗುವದು, ಎಂದು ನುಡಿದನು ಆದರೆ ಅಪರಿಚಿತನಾದ ವೈದ್ಯನನ್ನು ಒಳಗೆ ಕರೆದೊಯ್ಯುವದು ಆಕೆಯ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಆಕೆಯು—

ಸುಮಿತ್ರೆ—ವೈದ್ಯರೇ, ಇದಕ್ಕೂ ಹೆಚ್ಚಿಗೆ ರೋಗದ ಲಕ್ಷಣಗಳೇನೂ ಇರುವದಿಲ್ಲ ಸಾಮಾನ್ಯ ಜ್ವರಕ್ಕ ಪ್ರಕೃತಿ ನೋಡುವ ಕಾರಣವಿಲ್ಲದ್ದರಿಂದ ಔಷಧ ಕೊಟ್ಟುಬಿಡಿರಿ ನಿಮ್ಮ ಔಷಧದ ಖರ್ಚನ್ನು ಕೊಡುತ್ತೇನೆ

ವೈದ್ಯ—ಹಾಗಾದರೆ ಈ ಚೀಟನ್ನು ತಕ್ಕೊಳ್ಳಿರಿ. ಇದರಲ್ಲಿ ಮೂರು ಗುಳಿಗೆಗಳಿರುವವು. ಈಗೊಂದು, ನಾಳಿಗೆರಡು ಕೊಟ್ಟುಬಿಡಿರಿ ಇದಕ್ಕೆ ಆರು ಆಣೆಗಳನ್ನು ನೀವು ಕೊಡಬೇಕಾಗುವದು

ಸುಮಿತ್ರೆಯು ಆರು ಆಣೆಗಳನ್ನು ಕೊಟ್ಟು ಆ ಗುಳಿಗಗಳನ್ನು ತಕ್ಕೊಂಡು ಒಳಗೆ ಹೋದಳು, ಮತ್ತು ದೀಪದ ಬೆಳಕಿನಲ್ಲಿ ಆ ಚೀಟನ್ನು ಬಿಚ್ಚಿ ಗುಳಿಗೆಗಳನ್ನು ನೋಡಿದಳು ಅಷ್ಟರಲ್ಲಿ ಅವಳಿಗೆ ಆ ಚೀಟಿಯಲ್ಲಿ ಅನಂಗಸೇನಾದೇವಿಯವರಿಗೆ ಎಂದು ಬರೆದಿದ್ದ ದೊಡ್ಡ ಅಕ್ಷರಗಳನ್ನು ನೋಡಿ ಅವಳ ಕಣ್ಣುಗಳು ವಿಸ್ತೃತವಾಗಿ ತೆರೆದವು. ಆಗ ಆಕೆಯು ಉತ್ಸುಕತೆಯಿಂದ ಆ ಚೀಟಿಯನ್ನು ಚನ್ನಾಗಿ ಸರಿಪಡಿಸಿ, ಅದರಲ್ಲಿ ಬರೆದ ಎಲ್ಲ ಸಂಗತಿಗಳನ್ನು ಮನನಮಾಡಿದಳು. ಆ ಚೀಟಿಯಲ್ಲಿಯ ಬರಹದಿಂದ ಸುಮಿತ್ರೆಗೆ ನಿರಾಶೆಯಲ್ಲಿ ಆಶೆಯಂಕುರಿಸಿತು. ಆ ಆನಂದದ ಭರದಲ್ಲಿ ಅವಳು ಜಗದೀಶನನ್ನು ಕೊಂಡಾಡಿದಳು. ಮತ್ತು ಯಾವಾಗ

ಈ ಸಂಗತಿಯನ್ನು ಅವ್ವನವರ ಮುಂದೆ ಹೇಳುವೆನೋ ಎಂದು ತವಕಿಸಲಾರಂಭಿಸಿದಳು ಆಗ ಅನಂಗಸೇನೆಗೆ ಜ್ವರದ ತಾಪವು ಬಹಳವಾದ್ದರಿಂದ ಅವಳು ಸುಮ್ಮನೆ ಮಲಗಿಕೊಂಡಿದ್ದಳು ಸುಮಿತ್ರೆಯು ಆಕೆಯು ಒಳಗೆ ಹೋಗಿ ಔಷಧವನ್ನು ತಕ್ಕೊಳ್ಳಲು ಆಗ್ರಹ ಮಾಡಿದಳು ಆದರೆ ಅನಿವಾರವಾದ ದುಃಖದಿಂದ ಸಂತಾಪಗೆಟ್ಟ ಅನಂಗಸೇನೆಯು ಸುಮಿತ್ರೆಯ ಈ ಆಗ್ರಹಕ್ಕೆ ಬೇಸರಗೊಂಡು ಒಮ್ಮೆಲೆ ಆಕೆಯ ಮೇಲೆ ಹರಿಹಾಯ್ದಳು ಆಗ ಸುಮಿತ್ರೆಯು ಆಕೆಯ ಕಿವಿಯಲ್ಲಿ ಏನೋ ಹೇಳಿ, ಆ ಚೀಟಿಯನ್ನು ತೋರಿಸಿದಳು ಆ ಅಮೃತ ಸದೃಶವಾದ ಶಬ್ದಗಳನ್ನು ಕೇಳಿ, ಅನಂಗಸೇನೆಯು ಔಷಧವಿಲ್ಲದೆ ತಟ್ಟನೆ ಎದ್ದು ಕುಳಿತಳು. ಮತ್ತು ಸುಮಿತ್ರೆಯನ್ನು ಕುರಿತು—"ಸಖೀ, ಇನ್ನು ಮುಂದೆ ಆ ಶುಭದಿವಸಗಳನ್ನು ನಾವು ಕಾಣಬಹುದೇ" ಎಂದು ನುಡಿದಳು ಆ ಬಳಿಕ ಆಕೆಯು ಔಷಧೀಗುಳಿಗೆಯನ್ನು ಸೇವಿಸಿ ಆ ಚೀಟಿಯ ಶುಭವಾರ್ತೆಯು ದುಃಖದಲ್ಲಿ ಸುಖವೆಂದು ಭಾವಿಸಿದಳು

## ೯ನೆಯ ಪ್ರಕರಣ.

### ಮಿತ್ರಲಾಭ.

—(೦)—

ಪ್ರಿಯವಾಚಕರೇ, ರಾಮಯನ ಬಲೆಗೆ ಸಿಕ್ಕು ಹೀಗೆ ದುಃಖಪಡುವ ಆ ಲಲನಾಮಣಿಯರು ಯಾರು? ಅವರಿಗೆ ಔಷಧಿಯ ಜೊತೆಗೆ ಗುಪ್ತಸಂಗತಿಯನ್ನು ಬರೆದು ತಿಳಿಸಿದ ವೈದ್ಯನಾರು? ಎಂಬ ಸಂಗತಿಗಳು ತಿಳಿಯದೆ ನೀವು ಯೋಚಿಸುತ್ತಿರಬಹುದು ಆದ್ದರಿಂದ ಅದನ್ನು ಇಲ್ಲಿ ಬರೆದು ನಿಮ್ಮ ವೃಥಾಯೋಚನೆಯನ್ನು ತಪ್ಪಿಸೋಣ

ರಾಮಯನು ಪರಮ ತಂತ್ರಗಾರನಷ್ಟೇ, ಅವನು ದಾವಲಖಾನನಿಗೆ ವಚನಕೊಟ್ಟಬಳಿಕ ಕಾರ್ಯಸಾಧನೆಗಾಗಿ ಜ್ಯೋತಿಷಿಯ ವೇಷವನ್ನು ಧರಿಸಿದನು. ಹೀಗೆ ಅವನು ವಿದ್ವಾಂಸನೂ, ಸದಾಚಾರ ಸಂಪನ್ನನೂ ಆದ ಬ್ರಾಹ್ಮಣಪುಂಗವನಂತೆ ನಟಿಸುತ್ತ ವಿಜಯನಗರವನ್ನು ಹೊಕ್ಕು ನಿರ್ಭಯದಿಂದ ಅರಮನೆಯನ್ನು ಪ್ರವೇಶಮಾಡಿದನು ಅವನು ದರಬಾರಕ್ಕೆ ಹೋಗಿ ಕೃಷ್ಣರಾಯನಿಗೂ, ತಿಮ್ಮರ

ಸನಿಗೂ ಭೆಟ್ಟಿಯಾಗದೆ, ಸೆಟ್ಟಗೆ ಅಂತಃಪುರದ ಕಡೆಗೆ ಸಾಗಿದನು. ಆಗ ಆತನಿಗೆ ಮೊಟ್ಟಮೊದಲು ರಾಯರ ಉಪಪತ್ನಿಯಾದ ಅನಂಗಸೇನಾದೇವಿಯು ಭೆಟ್ಟಿಯಾದಳು ಆಕೆಯು ಎದುರಿಗೆ ಭವ್ಯವಾಗಿ ನಿಂತಿರುವ ಬ್ರಾಹ್ಮಣನನ್ನು ನೋಡಿ ಭಕ್ತಿಯಿಂದ ನಮಸ್ಕರಿಸಿದಳು ಇದೇ ಸಂಧಿಯನ್ನು ಸಾಧಿಸಿ ಆ ಕಪಟ ಬ್ರಾಹ್ಮಣನು ಆಕೆಯನ್ನು ಆಶೀರ್ವದಿಸಿ ನುಡಿದನೇನಂದರೆ—ದೇವಿಯವರೇ, ನಾನು ಸಾಮುದ್ರಿಕ ಹಾಗು ಜ್ಯೋತಿಷಗಳಲ್ಲಿ ನಿಷ್ಣಾತನಿದ್ದೇನೆ ನನ್ನ ವಿದ್ಯೆಯ ಪ್ರಭಾವವನ್ನು ಪರೀಕ್ಷಿಸಿ ನೋಡಬೇಕು

ಈ ರೀತಿಯಾಗಿ ಬ್ರಾಹ್ಮಣನು ಮಾತನಾಡಲು ಅನಂಗಸೇನೆಯು ಅವನಲ್ಲಿ ಹೆಚ್ಚು ಪೂಜ್ಯಬುದ್ಧಿಯನ್ನಿರಿಸಿದಳು ಮನುಷ್ಯಮಾತ್ರರಿಗೆ ತಮ್ಮ ಆಯುಷ್ಯದಲ್ಲಿಯ ಭವಿಷ್ಯತ್ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯು ಸ್ವಾಭಾವಿಕವಾಗಿರುತ್ತದೆ ವಿಶೇಷವಾಗಿ ಹೆಂಗಸರಿಗಂತೂ ಈ ವಿಷಯದಲ್ಲಿ ಆತುರತೆ ಬಹಳ ಅದರಂತೆ ಅನಂಗಸೇನೆಗೂ ಆ ಜ್ಯೋತಿಷಿಯ ಮುಖದಿಂದ ತನ್ನ ಭಾವೀ ಆಯುಷ್ಯದಲ್ಲಿ ಒದಗಬಹುದಾದ ಸಂಗತಿಗಳನ್ನು ತಿಳಿಯುವ ಇಚ್ಛೆಯು ಹೆಚ್ಚಿತು. ಆಗ ಅವಳು ಜ್ಯೋತಿಷಿಯನ್ನು ಉಚ್ಚಾಸನದಲ್ಲಿ ಕುಳ್ಳಿರಿಸಿ ತಾನೊಂದು ಹಂಸತೂಲ ತಲ್ಪಯುಕ್ತವಾದ ಮಂಚದ ಮೇಲೆ ಕುಳಿತು ಜ್ಯೋತಿಷಿಯನ್ನು ಕುರಿತು ಪ್ರಶ್ನಮಾಡತೊಡಗಿದಳು. ಆಕೆಯು ಕೇಳಿದ್ದಕ್ಕೆಲ್ಲ ಧೂರ್ತನಾದ ಆ ಜ್ಯೋತಿಷಿಯು ಸಮರ್ಪಕ ಉತ್ತರವನ್ನು ಕೊಟ್ಟು ಬಹು ಆದರಪೂರ್ವಕವಾಗಿ ಆಕೆಯ ಸಾಮುದ್ರಿಕ ಲಕ್ಷಣಗಳನ್ನು ನೋಡತೊಡಗಿದನು ಕೆಲಹೊತ್ತಿನವರೆಗೆ ಅವನು ಆಕೆಯ ಹಸ್ತವನ್ನು ಪರೀಕ್ಷಿಸಿದ ಮೇಲೆ ಒಂದು ನಿಟ್ಟುಸಿರನ್ನು ಬಿಟ್ಟು ಮೌನದಿಂದ ಕುಳಿತನು ಆಗ ಅನಂಗಸೇನೆಯ ಕೈಕಾಲುಗಳು ತಣ್ಣಗಾದವು ಅವಳು ಭಯಚಕಿತ ಮುಖಮುದ್ರೆಯಿಂದ ಜ್ಯೋತಿಷಿಯನ್ನು ನೋಡತೊಡಗಿದಳು. ಕೂಡಲೆ ಜ್ಯೋತಿಷಿಯು—ದೇವಿಯವರೇ, ಅಷ್ಟೇನೂ ಹೆದರುವ ಕಾರಣವಿಲ್ಲ. ನಿಮಗೆ ಸ್ವಲ್ಪ ದಿವಸಗಳಲ್ಲಿ ಒಂದು ದೊಡ್ಡ ಗಂಡಾಂತರವು ಒದಗತಕ್ಕದ್ದಿರುತ್ತದೆ, ಆದರೆ ಅದಕ್ಕೆ ಪರಿಹಾರಾರ್ಥಕ ಉಪಾಯಗಳಿರುವವು ನೀವು ಉಪಾಯಗಳನ್ನು ಮಾಡಿ, ಪೂರ್ಣ ಸುಖಹೊಂದಬಹುದು, ಎಂದು ನುಡಿದು ಸುಮ್ಮನಾದನು. ಅದನ್ನು ಕೇಳಿ—

ಅನಂಗಸೇನೆಯು—ಜ್ಯೋತಿಷಿಗಳೇ, ನನ್ನ ಮೇಲೆ ಬರತಕ್ಕ ಗಂಡಾಂತರವಾವುದು? ಮತ್ತು ಅದರ ಪರಿಹಾರಕ್ಕೆ ಉಪಾಯವೇನು?

ಜ್ಯೋತಿಷಿ—ಆ ಗಂಡಾಂತರವನ್ನು ಕೇಳಿದರೆ ನೀವು ಈಗ್ಗೇ ಮೂರ್ಛಾಗತರಾಗಬಹುದು. ಆದ್ದರಿಂದ ಆ ಹವ್ಯಾಸಕ್ಕೆ ನೀವು ಹೋಗಬೇಡಿರಿ ಆ ಅರಿಷ್ಟ ನಿವಾರಣೆಗೋಸ್ಕರ ಉಪಾಯವನ್ನು ಮಾತ್ರ ಹೇಳುವೆನು ಕೇಳಿರಿ, ಇಲ್ಲಿಗೆ ಉತ್ತರದಿಕ್ಕಿನಲ್ಲಿ ೧೨ ಮೈಲುಗಳ ಮೇಲೆ ಬ್ರಹ್ಮದೇವರಿಂದ ನಿರ್ಮಿತವಾದ ಒಂದು ತೀರ್ಥವಿರುವದು ಆ ತೀರ್ಥದಲ್ಲಿ ಸ್ನಾನ ಮಾಡಿ ಬ್ರಾಹ್ಮಣರಿಗೆ ಪಂಚರತ್ನಗಳನ್ನು ದಾನ ಕೊಡಬೇಕು, ಮತ್ತು ಒಬ್ಬ ಬ್ರಾಹ್ಮಣನಿಂದ ಜಪಾನುಷ್ಠಾನಗಳನ್ನು ಮಾಡಿಸಬೇಕು

ಅನಂಗಸೇನೆ—ಹಾಗಾದರೆ ಈ ವಿಧಿಯನ್ನು ಯಾವಾಗ ನೆರವೇರಿಸಬೇಕು?

ಜ್ಯೋ—ಬ್ರಾಹ್ಮಣ ಇದನ್ನು ಬೇಗನೆ ಅಂದರೆ [illegible] ದಿವಸಗಳಲ್ಲಿಯೇ ನೆರವೇರಿಸುವದು ಕ್ಷೇಮಕರವು

ಬ್ರಾಹ್ಮಣನು ಮೊದಲು ಹೇಳಿದ ಪ್ರಶ್ನೆಗಳು ಅನಂಗಸೇನೆಯ ನಂಬಿಕೆಗೆ ಕಾರಣಗಳಾಗಿದ್ದವು ಕೆಲಕೆಲವು ಮಾತುಗಳಂತೂ ಜ್ಯೋತಿಷಿಯಲ್ಲಿ ಆಕೆಯ ಪರಮಾವಧಿ ವಿಶ್ವಾಸವನ್ನು ಹುಟ್ಟಿಸಿದವು ಆದ್ದರಿಂದ ಆಕೆಯು ಆ ಬ್ರಾಹ್ಮಣನ ಮಾತುಗಳಿಗೆ ಒಪ್ಪಿಕೊಂಡಳು. ಜ್ಯೋತಿಷಿಯು ನಾಮ ನಿರ್ದೇಶಮಾಡಿ ಹೇಳಿದ ಜನರನ್ನಷ್ಟೇ ಸಂಗಡ ಕರಕೊಂಡು ಹೋಗುವದು ಗೊತ್ತಾಯಿತು ಆ ಧೂರ್ತ ಬ್ರಾಹ್ಮಣನು ರಾಯರಿಗೆ ಸಹ ಈ ಸುದ್ದಿಯನ್ನು ಹತ್ತಗೊಡದೆ ನಾಲ್ಕಾರು ತಾಸುಗಳಲ್ಲಿಯೇ ಮರಳಿ ನಗರವನ್ನು ಪ್ರವೇಶ ಮಾಡಿಸುತ್ತೇನೆಂದು ಅಭಿವಚನ ಕೊಟ್ಟು ನಿಯಮಿತ ಪರಿವಾರದೊಡನೆ ತೀರ್ಥಸ್ನಾನಕ್ಕಾಗಿ ಅನಂಗಸೇನೆಯನ್ನು ಹೊರಡಿಸಿದನು ವಿಜಯನಗರದಿಂದ ಕೆಲವು ಮೈಲುಗಳ ವರೆಗೆ ಹೋದ ಬಳಿಕ ಆ ಧೂರ್ತಬ್ರಾಹ್ಮಣನು—ತೀರ್ಥವು ಒಂದು ಅಡವಿಯಲ್ಲಿದ್ದು, ನಾವಿಂತಷ್ಟು ತೆರಳು ಹುಟ್ಟಿಸಿದನು. ಮೇಣೆಯನ್ನು ಹೊತ್ತ ಭೋಯಿಗಳೂ ಇನ್ನುಳಿದ ನಾಲ್ಕಾರು ಜನ ಸಿಪಾಯಿಗಳೂ ಬ್ರಾಹ್ಮಣನ ಕಡೆಯವರೇ ಇದ್ದರು ಆದ್ದರಿಂದ ಅವರು ಬ್ರಾಹ್ಮಣನ ಮಾತಿಗೆ ಕೂಡಲೆ ಒಪ್ಪಿಗೆಯನ್ನು ಕೊಟ್ಟರು ತೀರ್ಥವನ್ನು ಹುಡುಕುತ್ತೇವೆಂದು ಅವರು ಒಂದೇ ಸಮನೆ ಸಂಜೆಯ ವರೆಗೆ ದಾರಿನಡೆದು ವಿಜಯನಗರದಿಂದ ಬಹುದೂರ ಬಂದರು. ಅಷ್ಟರಲ್ಲಿ ಆ ಬ್ರಾಹ್ಮಣನಿಗೂ ಮೇಣೆಯವರಿಗೂ ತಪ್ಪುಸಿಕೆಯುಂಟಾಯಿತು ಮಬ್ಬುಗತ್ತಲಾಗಲು ಎಲ್ಲಿಂದಲೋ ನೂರಾರು ಜನರು ಭೋಯಿಗಳ ಮೇಲೆ ಬಿದ್ದು, ಅವರನ್ನು ಹೊಡೆದೋಡಿಸಿ ಮೇಣೆಗಳನ್ನು ಹೊತ್ತುಕೊಂಡು ನಡೆದರು. ಮುಂದೆ ನಾಲ್ಕಾರು ದಿನಗಳಲ್ಲಿ ರಾಯಚೂರ

ಸಮೀಪಕ್ಕೆ ಅವರು ವಸ್ತಿಯನ್ನು ಮಾಡಿರಲು ಜ್ಯೋತಿಷಿಬ್ರಾಹ್ಮಣನು ಅವರನ್ನು ಹುಡುಕುತ್ತಲಿರುವವನಂತೆ ವಿಷಣ್ಣವದನನಾಗಿ ಬಹಳ ಆವೇಶದಿಂದ ಅಲ್ಲಿಗೆ ಬಂದನು. ತಾನು ಹುಡುಕುತ್ತ ಬಂದ ಮೇಣೆಗಳು ಇವೇ ಎಂದು ಗೊತ್ತಾಗಲು ಅವನು ಅಲ್ಲಿಯೇ ನಿಂತು ಆ ಮೇಣೆಗಳನ್ನು ಹರಣಮಾಡಿ ತಂದವರನ್ನು ಬಾಯಿಗೆ ಬಂದಹಾಗೆ ಬೈಯ್ಯತೊಡಗಿದನು. ಬ್ರಾಹ್ಮಣನ ಬಾಯಿಯು ಕೇಳುವದೇನು? ಈ ಮೇರೆಗೆ ಅವನ ವಷಟ್ಕಾರಗಳು ನಡೆಯಲು ಮೇಣೆಗಳನ್ನು ಹರಣಮಾಡಿ ತಂದವರು ಸಿಟ್ಟಿಗೆದ್ದು ಆ ಬ್ರಾಹ್ಮಣನ ಮೇಲೆ ಏರಿ ಬಂದರು. ಅಷ್ಟರಲ್ಲಿ ಯಾವ ಕಡೆಯಿಂದಲೋ ನೂರಾರು ಜನರು ಬ್ರಾಹ್ಮಣನ ಸಹಾಯಕ್ಕೆ ಬಂದರು, ಇದನ್ನು ಕಂಡು ಮೇಣೆಗಳನ್ನು ಹರಣ ಮಾಡಿ ತಂದ ಜನರು ಓಡಿ ಹೋದರು, ಮೇಣೆಗಳು ಬ್ರಾಹ್ಮಣನ ಕೈವಶವಾದವು. ಆಗ ಮೇಣೆಗಳಲ್ಲಿ ಕುಳಿತು ಶೋಕ ಮಾಡುತ್ತಿದ್ದ ಅನಂಗಸೇನೆ ಹಾಗು ಸುಮಿತ್ರೆಯರು ಇದನ್ನೆಲ್ಲ ನೋಡಿ ಬ್ರಾಹ್ಮಣನ ವಿಷಯವಾಗಿ ಕೃತಜ್ಞರಾದರು. ಪಾಪ! ಅವರಿಗೇನು ಗೊತ್ತು ಇಷ್ಟೆಲ್ಲ ಆಟಗಳನ್ನು ಈ ಬ್ರಾಹ್ಮಣನೇ ಮಾಡಿಸಿರುವನೆಂಬದು!

ಬಳಿಕ ಬ್ರಾಹ್ಮಣನು ಮೇಣೆಗಳ ಸಮೀಪಕ್ಕೆ ಹೋಗಿ ಅನಂಗಸೇನೆಯ ಸಮಾಧಾನಕ್ಕಾಗಿ ಸಮಯೋಚಿತ ಮಾತುಗಳನ್ನಾಡಿದನು. ಕಳ್ಳರ ಕೈಯಿಂದ ಪಾರಾಗಿ ಉಳಿದ ಆಕೆಯು ಅತ್ಯಂತ ದೈನ್ಯದಿಂದ ಬ್ರಾಹ್ಮಣನಿಗೆ ತನ್ನನ್ನು ವಿಜಯನಗರಕ್ಕೆ ಮುಟ್ಟಿಸುವದಕ್ಕಾಗಿ ಪ್ರಾರ್ಥಿಸಿದಳು, ಬ್ರಾಹ್ಮಣನು ಅತ್ಯಂತ ಕುಟಿಲತನದಿಂದ ಆಕೆಗೆ ಆಶ್ವಾಸನ ಕೊಟ್ಟು ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಆಕೆಯನ್ನು ರಾಯಚೂರಿಗೆ ಕರೆದೊಯ್ದನು. ಮುಂದೆ ಆ ಬ್ರಾಹ್ಮಣನ ಕಪಟವು ತಿಳಿದುಬರಲು ಆ ಸ್ತ್ರೀಯರ ಸ್ಥಿತಿಯು ಹ್ಯಾಗಾಯಿತೆಂಬದನ್ನು ನಮ್ಮ ವಾಚಕರು ಹಿಂದಿನ ಪ್ರಕರಣದಲ್ಲಿಯೇ ಓದಿರುವರು.

ಇತ್ತ ವಿಜಯನಗರದಲ್ಲಿ ಅನಂಗಸೇನೆಯು ದಾಸಿಯೊಡನೆ ಕಾಣದಂತಾದ ಸುದ್ದಿಯು ಹಾ ಹಾ ಅನ್ನುವಷ್ಟರಲ್ಲಿ ಸುತ್ತುಕಡೆಗೂ ಪಸರಿಸಿತು. ತಿಮ್ಮರಸನು ಈ ಕಾರಸ್ಥಾನವು ರಾಮಯನದೆಂದೇ ತರ್ಕಿಸಿದನು. ಮತ್ತು ಆಕೆಯ ಶೋಧಕ್ಕಾಗಿ ಮೂವರು ವೀರರನ್ನು ಕಳಿಸಿದನು. ಅವರು ಎಲ್ಲ ಕಡೆಗೂ ಶೋಧಮಾಡುತ್ತ ರಾಯಚೂರಿಗೆ ಬರಲು ಅಲ್ಲಿ ಒಂದು ಸತ್ರದಲ್ಲಿ ಖಾನನು ಹೊಸದಾಗಿ ಇಬ್ಬರು ಹೆಂಗಸರನ್ನು ತಂದಿಟ್ಟ ಸುದ್ದಿಯು ಅವರಿಗೆ ಗೊತ್ತಾಯಿತು. ಆದ್ದರಿಂದ ಅವರು ವೇಷಾಂತರಗಳಿಂದ ಆ ಕೋಟೆಯಲ್ಲಿ ನೆಲೆಸಿ ಆ ಹೆಂಗಸರ ಶೋಧಕ್ಕೆ

ಪ್ರಾರಂಭಿಸಿದರು. ಈ ಮೂವರು ಶೋಧಕರಲ್ಲಿಯೇ ಹಿಂದಿನ ಪ್ರಕರಣದಲ್ಲಿ ಹೇಳಿದ ವೈದ್ಯನು ಒಬ್ಬನಾಗಿದ್ದನು ಅವನು ಔಷಧ ಮಾರುವ ನಿಮಿತ್ತದಿಂದ ದಿನಾಲು ಸತ್ರಕ್ಕೆ ಹೋಗಿ ಬರುತ್ತಿದ್ದನು ಆದರೆ ರಾಜನು ಸತ್ರಕ್ಕೆ ಬಿಗಿಯಾದ ಕಾವಲಿಟ್ಟು ಬಿಟ್ಟದ್ದರಿಂದ ವೈದ್ಯನ ಬಯಕೆಯು ಕೈಗೂಡದೆ ಹೋಗಿತ್ತು ಹೀಗಿರಲು ಒಂದು ದಿನ ವೈದ್ಯನು ಸತ್ರದ ಬಾಗಿಲಕ್ಕೆ ಬರುವದಕ್ಕೂ ಸುಮಿತ್ರೆಯು ಹಣಿಕಿ ಹಾಕುವದಕ್ಕೂ ಮೇಳುಬಿದ್ದಿತು ವೇಷಾಂತರಿಸಿದ ಪ್ರತಾಪನ ಗುರುತು ಸುಮಿತ್ರೆಗೆ ಹತ್ತದಿದ್ದರೂ ಆಕೆಯ ಗುರ್ತನ್ನು ವೈದ್ಯನ ವೇಷವನ್ನಳವಡಿಸಿಕೊಂಡ ಪ್ರತಾಪನು ಹಿಡಿದನು ಆಗ ಅವನು ಅನಂಗಸೇನೆಯೂ ಸುಮಿತ್ರೆಯೂ ಇಲ್ಲಿಯೇ ಇರುವರೆಂದು ನಿಶ್ಚಯಿಸಿ ತಾನು ಬಂದ ಸುದ್ದಿಯನ್ನು ಅವರಿಗೆ ತಿಳಿಸಿ ಧೈರ್ಯವ ಹೇಳಬೇಕಂದು ಯೋಚಿಸಲಾರಂಭಿಸಿದನು ಬಹಳ ಹೊತ್ತು ಅಲ್ಲಿ ನಿಲ್ಲುವಹಾಗೆ ಇಲ್ಲದ್ದರಿಂದ ತನ್ನ ಅಂಗಡಿಗೆ ಬಂದು ಔಷಧ ಸಾಮಾನುಗಳನ್ನು ಹಚ್ಚಿಕೊಂಡು ಕುಳಿತನು ಆದರೆ ಕರ್ಮ-ಧರ್ಮ ಸಂಯೋಗದಿಂದ ಅದೇ ದಿವಸ ರಾತ್ರಿಯಲ್ಲಿ ಅವನು ಕಾವಲುಗಾರರ ಆಮಂತ್ರಣದ ಮೇರೆಗೆ ಸತ್ರಕ್ಕೆ ವೈದ್ಯಗಾರನಾಗಿ ಹೋಗಬೇಕಾಯಿತು ಹೀಗೆ ಕೆಲಸವು ಅನಾಯಾಸವಾಗಿ ಸಾಧಿಸಿತೆಂದು ಅವನು ಹಿಗ್ಗಿ ಅನಂಗಸೇನೆಗೆ ಔಷಧರೂಪವಾಗಿ ಪರಿಣಮಿಸುವ ಒಂದು ಪತ್ರವನ್ನು ಬರದನು. ಅವನು ಪತ್ರದಲ್ಲಿ ಬರೆದ ಸಂಗತಿಯೇನಂದರೆ— "ನಮ್ಮ ಸಾಮ್ರಾಟರ ಮನಮೋಹಿನೀ ಅನಂಗಸೇನಾದೇವೀ, ನೀನು ನೀಚನಾದ ರಾಮಯನಿಂದ ವಂಚಿತಳಾಗಿ ಹೀಗೆ ಶತ್ರುಗಳ ಕೈಸೇರಿದ್ದನ್ನು ರಾಯರು ತಿಳಿದಿರುತ್ತಾರೆ ಹೀಗೆ ನಿಮ್ಮನ್ನು ಮೋಸಗೊಳಿಸಿದವನನ್ನೂ ಹಾಗು ಆ ಮೋಸಗಾರನಿಗೆ ಆಶ್ರಯ ಕೊಟ್ಟವನನ್ನೂ ದಂಡಿಸಿ ನಿಮ್ಮನ್ನು ಶೀಘ್ರವಾಗಿ ಬಿಡಿಸಿಕೊಂಡೊಯ್ಯುವ ಯತ್ನದಲ್ಲಿರುವರು" "ಇತಿ ನಿಮ್ಮ ಸೇವಕ ಪ್ರತಾಪ"

ಈ ಪ್ರಕಾರ ಅನಂಗಸೇನೆಗೆ ಪತ್ರವನ್ನು ಬರೆದ ಪ್ರತಾಪನು ಯಾರೆಂದು ನಮ್ಮ ವಾಚಕರು ಯೋಚನೆಗೊಳಗಾಗಬಹುದು ಈ ಕಾದಂಬರಿಯ ಮೊದಲನೆಯ ಪ್ರಕರಣದಲ್ಲಿ ಯಾವ ತ್ರಿವರ್ಗರು ವಿಜಯನಗರವನ್ನು ಕುರಿತು ಪ್ರಯಾಣ ಬೆಳೆಸಿದರೋ, ಮತ್ತು ಯಾವ ತ್ರಿವರ್ಗರು ಅಕಸ್ಮಾತ್ತಾಗಿ ಶತ್ರುಪಕ್ಷದವರ ಕೈಗೆ ಸಿಕ್ಕು, ಪ್ರತಿಸ್ಪರ್ಧಿಯಾದ ರಾಮನಾಯ್ಕನಿಂದ ಬಿಡಿಸಲ್ಪಟ್ಟರೋ ಆ ತ್ರಿವರ್ಗರಲ್ಲಿ ಪ್ರಸ್ತುತದ ಪ್ರತಾಪನು ಒಬ್ಬನಾಗಿರುವನು. ಇನ್ನುಳಿದ ಇಬ್ಬರು ಯಾರೆಂಬದನ್ನು ನಮ್ಮ ಜಾಣಾಕ್ಷ ವಾಚಕರು ಸ್ಮರಣೆಗೆ ತಂದುಕೊಳ್ಳಬಹುದು

ವಿಜಯನಗರದ ಸಾಮ್ರಾಜ್ಯದಲ್ಲಿ ಪ್ರಮುಖ ಪಾಳೆಯಗಾರರಾದ ಈ ಪ್ರತಾಪ, ಪ್ರಹಾರೇಶ್ವರ, ರುದ್ರದೇವಾದಿ ಮೂವರು ಯಾವ ದಿವಸ ವಿಜಯನಗರದಲ್ಲಿ ಕಾಲಿಟ್ಟರೋ ಆ ದಿವಸನೇ ರಾಮಯನು ಅನಂಗಸೇನೆಯನ್ನು ಹೊರಡಿಸಿದ್ದನು, ಆದ್ದರಿಂದ ಈ ಮೂವರು ಪಾಳಯಗಾರರಿಗೆ ತಾವು ಬಂದ ಉದ್ದೇಶವು ಒತ್ತಟ್ಟಿಗೆ ಉಳಿದು, ತಿಮ್ಮರಸನ ಆಜ್ಞೆಯಮೇರೆಗೆ ಅನಂಗಸೇನೆಯನ್ನು ಹುಡಿಕಿ ತರುವ ಪ್ರಸಂಗವು ಒದಗಿತು. ಈ ಮೂವರು ಯುಕ್ತಿಕೋವಿದರಾಗಿದ್ದರಲ್ಲದೆ ಸಾಮ್ರಾಜ್ಯದ ಅತ್ಯಂತ ಅಭಿಮಾನಿಗಳಾಗಿದ್ದರು ಸಾಮ್ರಾಜ್ಯದ ಅಪಮಾನವನ್ನು ಇವರು ತಮ್ಮ ಸ್ವಂತ ಅಪಮಾನವೆಂದು ಭಾವಿಸುತ್ತಿದ್ದರು ಈ ಬಗೆಯ ಸ್ವಾಮಿನಿಷ್ಠ ಸೇವಕರಿದ್ದರೆಂತಲೇ ಆ ಕಾಲದಲ್ಲಿ ವಿಜಯನಗರದ 'ಸಾಮ್ರಾಜ್ಯವು ಅತ್ಯಂತ ಘನತೆಗೇರಿತ್ತೆಂದು ಹೇಳಬಹುದು. ಈ ತ್ರಿವರ್ಗರ ಕಿವಿಗೆ ಅನಂಗಸೇನೆಯ ಅಪಹರಣದ ಸಂಗತಿಯು ಬೀಳುವದೊಂದೇ ತಡ, ಪ್ರತಾಪನು ಅತ್ಯುಗ್ರನಾಗಿ ತೋರಿದನು. ರುದ್ರದೇವನು ಪ್ರತ್ಯಕ್ಷ ಕಾಲರುದ್ರನೇ ಎಂಬಂತೆ ಭಾಸವಾದನು. ಪ್ರಹಾರೇಶ್ವರನಂತೂ ಇವರಿಗಿಂತಲೂ ಅತ್ಯುಗ್ರನಾಗಿ ತೋರಿದನು ಚತುರನಾದ ತಿಮ್ಮರಸನು ಇಂಥವರಿಂದಲೇ ಕಾರ್ಯವು ನೆರವೇರುವದೆಂದು ಅನಂಗಸೇನೆಯನ್ನು ಹುಡುಕುವ ಕೆಲಸಕ್ಕೆ ಈ ಮೂವರನ್ನೇ ನೇಮಿಸಿ ಬಿಟ್ಟನು.

ಸ್ವಾಮಿಭಕ್ತರಾದ ಈ ಮೂವರು ರಾಯಚೂರಿಗೆ ಮುಟ್ಟುವವರೆಗೆ ಒಬ್ಬರನ್ನೊಬ್ಬರು ಅಗಲದೆ ಇದ್ದರು ಅಲ್ಲಿಯವರೆಗೆ ಇವರ ಮೇಲೆ ಯಾವ ಬಗೆಯ ಆಪತ್ತಿಗಳೂ ಒದಗಲಿಲ್ಲ . ಆದರೆ ರಾಯಚೂರಿಗೆ ಮುಟ್ಟಿದ ಬಳಿಕ ಮೂವರೂ ಒಂದೇ ಕಡೆಯಲ್ಲಿರುವದು ಸಂಶಯಕ್ಕೆ ಕಾರಣವೆಂದು ಬೇರಬೇರೆಯಾದರು. ಅವರು ತಮ್ಮ ಹಿಡತಕ್ಕನುಸರಿಸಿ ಬಗೆಬಗೆಯ ವೇಷಾಂತರಗಳಿಂದ ಸಂಚರಿಸುತ್ತಿರಲು ಊರಲ್ಲಿ ಒಬ್ಬ ಪ್ರಸಿದ್ಧ ಗಾರುಡಿಗನು ಬಂದಿರುವನೆಂಬ ಸುದ್ದಿಯು ಹಬ್ಬಿತು. ಬರಬರುತ್ತ ಈ ಸುದ್ದಿಯು ದಾವಲ್‌ಖಾನನವರೆಗೂ ಹೋಯಿತು. ಪರರಾಜರೊಡನೆ ರಾಜಕಾರಣ ಪ್ರಸಕ್ತಿಯುಂಟಾದಾಗ ಗುಪ್ತಹೇರರು ವೇಷಾಂತರಗಳಿಂದ ಹೀಗೆ ಬರುವರೆಂಬದು ಖಾನನ ಲಕ್ಷದಲ್ಲಿ ಬಂದದ್ದರಿಂದ ಅವನು ಆ ಗಾರುಡಿಗನನ್ನು ಆಟದ ನಿಮಿತ್ಯದಿಂದ ರಾಜವಾಡೆಗೆ ಕರೆಯಿಸಿಕೊಂಡನು. ಗಾರುಡಿಗ ವೇಷಧಾರಿಯು ಒಳ್ಳೇ ಕುಶಲನಿದ್ದದರಿಂದ ಖಾನನ ಪರೀಕ್ಷೆಯಲ್ಲಿ ಎಲ್ಲಿಯೂ ತಪ್ಪಿಗೆ ಸಿಗಲಿಲ್ಲ ಗಾರುಡಿಗನ ಗುರುತನ್ನು ರಾಮ

ಯನು ಹಿಡಿಯದೆ ಹೋದನು, ಆದರೆ ಖಾನನ ಬಳಿಯಲ್ಲಿದ್ದ ಫಕೀರನು ಮಾತ್ರ ಗಾರುಡಿಗನ ಗುರುತನ್ನು ಹಿಡಿದನು.

ಫಕೀರನು ತಾನು ವಿಜಯನಗರದವರ ಪಕ್ಷದವನಲ್ಲೆಂಬದನ್ನು ಖಾನನಿಗೆ ಮನವರಿಕೆ ಮಾಡಿಕೊಡುವ ಈ ಅತ್ಯುತ್ತಮ ಪ್ರಸಂಗವನ್ನು ವ್ಯರ್ಥವಾಗಿ ಕಳೆದು ಕೊಳ್ಳಲಿಲ್ಲ, ಆಟವು ಪೂರ್ಣವಾಗಿ ಮುಗಿದಬಳಿಕ ಖಾನನು ರಾಮಯನ ಮೋರೆಯನ್ನು ನೋಡಿದನು, ಅವನಿಗೆ ಗಾರುಡಿಗನಲ್ಲಿ ಮೋಸವು ಕಂಡು ಬರದ್ದರಿಂದ ಅವನು ನಿರ್ದೋಷಿಯೆಂದು ತನ್ನ ಅಭಿಪ್ರಾಯವನ್ನು ತಿಳಿಸಿದನು. ಬಳಿಕ ಖಾನನು ಫಕೀರನ ಕಡೆಗೆ ನೋಡಿದನು ಆದರೆ ಫಕೀರನು ಆಗ ಯಾವ ಅಭಿಪ್ರಾಯವನ್ನೂ ಪ್ರಕಟ ಮಾಡಲಿಲ್ಲ ಗಾರುಡಿಗನು ಖಾನನಿಂದಲೂ ನೆರೆದ ಜನಸಮೂಹದಿಂದಲೂ ವಸ್ತ್ರ ದ್ರವ್ಯ ಮೊದಲಾದವುಗಳನ್ನು ಬೇಡಿ ಇಸಕೊಂಡು ತನ್ನ ಆಟದ ಉಪಕರಣಗಳನ್ನು ಕಟ್ಟಿಕೊಂಡು ಅಲ್ಲಿಂದ ಹೊರಹೊರಟನು ರಾಮಯನು ತನ್ನ ಬಿಡಾರಕ್ಕೆ ನಡೆದನು, ಬಳಿಕ ಫಕೀರನು ಖಾನನಿಗೆ ಸನ್ನೆಯಿಂದ ಗಾರುಡಿಗನ ವಿಷಯವಾಗಿ ತನಗೆ ಸಂಶಯ ಬರುತ್ತದೆಂದೂ ರಾಮಯನು ಒಳಗಿಂದೊಳಗೆ ವಿಜಯನಗರದವರಿಗೆ ಅನುಕೂಲನಿರುವನೆಂದೂ ತಿಳಿಸಿದನು ಈ ಸಂಗತಿಯನ್ನು ತಿಳಿದು ಖಾನನು ಮೆಟ್ಟಿಬಿದ್ದನು ಮತ್ತು ಫಕೀರನನ್ನು ಕುರಿತು ನುಡಿದನೇನಂದರೆ "ಮಹಾತ್ಮರೇ ಇದೇನು ಹೇಳಿದಿರಿ? ನಾವು ಯಾವ ರಾಮಯನನು ನಮ್ಮ ಪಕ್ಷಪಾತಿಯೆಂದು ತಿಳಿದು ಅವನ ಮೇಲೆಯೇ ಕೃಪೆಯುಳ್ಳವರಾಗಿರುವೆವೋ ಆ ರಾಮಯನು ಶತ್ರುಗಳಿಗೆ ಅನುಕೂಲನಿರುವನೇ? ಹಾಗಾದರೆ ಅವನು ಶತ್ರುಗಳ ಹೊಟ್ಟೆಯಲ್ಲಿ ಹೊಕ್ಕು ಬೆನ್ನಲ್ಲಿ ಬಿರಿದಂತೆ ರಾಯರ ಉಪಪತ್ನಿಯನ್ನು ಅಪಹರಿಸಿಕೊಂಡು ಬರುತ್ತಿದ್ದನೇಕೆ? ಇವೆಲ್ಲ ಅವನ ಕೆಲಸಗಳನ್ನು ನೋಡಿದರೆ ಅವನು ನಮ್ಮ ಹಿತಶತ್ರುವೆಂದು ತೋರುವದಿಲ್ಲ ಆದರೆ ಅತನು ನಮ್ಮ ಹಿತಶತ್ರುವು ಹ್ಯಾಗೆ ಆಗಿರುವನು?

ಫಕೀರ—ಈ ಮಾತನ್ನು ನಿಮಗೆ ಬುದ್ಧಿಯಿಂದ ಹೇಳುತ್ತೇನೆ ರಾಮಯನ ಕೃತಿಗಳನ್ನು ನೀವು ವಿಚಾರಪೂರ್ವಕವಾಗಿ ಪರೀಕ್ಷಿಸುವದಿಲ್ಲ ಅವನು ಈಗ ನಿಮಗೆ ರಾಯರ ಉಪಪತ್ನಿಯನ್ನು ತಂದು ಕೊಟ್ಟಿರುವನೆಂದು ಹೇಳುವನಷ್ಟೇ, ಈ ಮಾತನ್ನೇ ನೀವು ವಿಚಾರಿಸಿರಿ ಸಿಂಹದ ಮನೆಯನ್ನು ಹೊಕ್ಕು ಸಿಂಹಿಣಿಯನ್ನು ಇಷ್ಟು ಸುಲಭದಿಂದ ತರಲಿಕ್ಕಾಗಬಹುದೇ? ಇದರಲ್ಲಿ ಏನಾದರೂ ಮೋಸವಿರಲಿಕ್ಕೆಬೇಕು. ಯಾವ ಸ್ತ್ರೀಯನ್ನು ಅವನು ರಾಯರ ಉಪಪತ್ನಿಯೆದು ತಂದಿರುವನೋ ಆ ಸ್ತ್ರೀಯು ಕದಾಚಿತ್ ರಾಯರ ಉಪಪತ್ನಿಯಾಗಿರದೆ

ಬೇರೆ ಯಾವಳೊಬ್ಬ ಕ್ಷುದ್ರ ಸ್ತ್ರೀಯಾಗಿರಬಹುದು ಒಂದು ವೇಳೆ ಆಕೆಯು ರಾಯರ ಸ್ತ್ರೀಯೇ ಆಗಿದ್ದ ಪಕ್ಷದಲ್ಲಿ ತನ್ನ ಹಿಡತವನ್ನು ಸಾಧಿಸಿಕೊಳ್ಳುವದಕ್ಕಾಗಿ ಆಕೆಯನ್ನು ರಾಯರ ಸಮ್ಮತಿಯಿಂದಲೇ ಇಲ್ಲಿಗೆ ಕರೆತಂದಿರಬೇಕು. ಇಲ್ಲಿಯವರೆಗೆ ನಿಮಗೆ ಆ ಸ್ತ್ರೀಯ ಸಂಪರ್ಕವನ್ನು ಮಾಡಗೊಡದಿರುವದಕ್ಕೆ ಇದೇ ಕಾರಣವಿದ್ದರೂ ಇರಬಹುದು

ಖಾನನು—ಮಹಾತ್ಮರೇ, ಈ ಕಾಫರರ ನೆಚ್ಚಿಗೆಯನ್ನು ಹಿಡಿಯಲಿಕ್ಕೆ ಬರುವದಿಲ್ಲೆಂಬದು ನಿಜ, ಆದರೂ ರಾಮಯನ ವಿಷಯವಾಗಿ ನನಗೆ ಸಂಶಯ ಬರಲಾರದು ನೀವು ಹೇಳುವದೂ ಒಂದು ರೀತಿಯಿಂದ ನಿಜವಿರುತ್ತದೆ. ಇದರ ಪರೀಕ್ಷೆಯನ್ನು ನಾನು ಮಾಡುತ್ತೇನೆ

ಫಕೀರ—ಇರಲಿ, ಖಾನಬಹಾದ್ದೂರರೇ, ಈ ವಿಷಯವನ್ನು ಸಾವಕಾಶವಾಗಿ ಆಲೋಚಿಸೋಣ, ಮೊದಲು ಗಾರುಡಿಗನನ್ನು ಹಿಡತರಿಸಿ ಅವನನ್ನು ಕಾರಾಗೃಹದಲ್ಲಿರಿಸಬೇಕು.

ಈ ಪ್ರಕಾರ ಖಾನನೂ ಫಕೀರನೂ ಮಾತಾಡುತ್ತಿರಲು, ಇತ್ತ ಗಾರುಡಿಗನು ತನ್ನ ಸಾಂಕೇತಿಕ ಸ್ಥಳವನ್ನು ಮುಟ್ಟಿ ತನ್ನ ಸಾಮಾನುಗಳನ್ನೆಲ್ಲ ಅಲ್ಲಿ ಇಟ್ಟು, ಉಶ್ಯೆಂದು ಕೂಡುವಷ್ಟರಲ್ಲಿ ರಾಜದೂತರು ಬಂದು ಅವನನ್ನು ಹಡಮುರಿಗೆ ಕಟ್ಟಿ, ಫಕೀರನು ಹೇಳಿದ ಕಾರಾಗೃಹದಲ್ಲಿ ಚಲ್ಲಿಕೊಟ್ಟರು. ಗಾರುಡಿಗನು ಬಹು ದೊಡ್ಡ ಯೋಚನೆಯಲ್ಲಿ ಬಿದ್ದನು ತಾನು ಇದೇ ಈಗ ರಾಜಸನ್ಮಾನವನ್ನು ಹೊಂದಿ ಬಂದಿರಲು, ಇಷ್ಟರಲ್ಲಿಯೇ ಈ ಅರಿಷ್ಟವು ತನ್ನನ್ನು ಯಾವ ಕಾರಣದಿಂದ ಬಡಿದುಕೊಂಡಿರಬಹುದೆಂದು ಅವನು ಎಷ್ಟು ವಿಧವಾಗಿ ಯೋಚಿಸಿದರೂ ತಿಳಿಯದೆ ಹೋಯಿತು ತನ್ನಿಂದ ಸ್ವಾಮಿಕಾರ್ಯವು ಕೈಗೂಡುವ ಯೋಗವಿಲ್ಲೆಂದು ಚಡಪಡಿಸುತ್ತ ಕಾರಾಗೃಹದಲ್ಲಿ ಬಿದ್ದಿರಲು, ಮಧ್ಯರಾತ್ರಿಯ ಸಮಯಕ್ಕೆ ಒಬ್ಬ ಜಟಾಧಾರಿಯು ಅಲ್ಲಿಗೆ ಬಂದನು

ಜಟಾಧಾರಿ—ಪ್ರಹಾರೇಶ್ವರಾ, ನೀನು ಈ ಊರಿಗೆ ಬಂದು ಎಷ್ಟು ದಿನಗಳಾದವು? ನಿನ್ನ ಕೈಕಾಲುಗಳ ಕಟ್ಟನ್ನು ಸಡಿಲು ಮಾಡಲಿಯಾ? ನಿನಗೆ ಸ್ವಾಮಿಕಾರ್ಯಕ್ಕಾಗಿ ವ್ಯಥೆಕೊಟ್ಟ ಹಾಗಾಯಿತು ಕ್ಷಮಿಸು.

ಪ್ರಹಾರೇಶ್ವರ—(ಆಶ್ಚರ್ಯದಿಂದ) ನನ್ನನ್ನು ಹೆಸರುಗೊಂಡು ಕರೆಯುವ ನೀವಾರು? ನಿಮ್ಮ ಗುರುತು ಸಿಕ್ಕದೆ ಹೋಯಿತು. ಆದ್ದರಿಂದ ಕ್ಷಮಿಸಿ ತಾವು ಯಾರೆಂಬದನ್ನು ಹೇಳುವದಾಗಬೇಕು.

ಜಟಾಧಾರಿ—ನಾನು ಯಾರೆಂಬದು ಇದುವರೆಗೂ ನಿನಗೆ ಗುರುತು ಸಿಗಲಿಲ್ಲವೇ?

ಪ್ರಹಾರೇಶ್ವರ—ಓಹೋ! ಈಗ ತಿಳಿಯಿತು, ತಿಳಿಯಿತು. ಮಿತ್ರಾ, ನೀನು ಇಲ್ಲಿಯೇ ಇರುವಿಯೇನು? ಇಷ್ಟು ರಾತ್ರಿಯಲ್ಲಿ ಬಲವಾದ ಕಾವಲಿದ್ದ ಈ ಕೈದಖಾನೆಗೆ ಹ್ಯಾಗೆ ಬಂದೆ?

ಜಟಾಧಾರಿ—(ಮೆಲ್ಲಗೆ)ನಾನು ಖಾನನನ್ನು ಪೂರ್ಣವಾಗಿ ಒಲಿಸಿಕೊಂಡಿರುತ್ತೇನೆ ಈ ಫಕೀರವೇಷದಿಂದ ಖಾನನ ಗುಪ್ತ ಮಂತ್ರಾಲೋಚನೆಯ ಮಂಡಲದಲ್ಲಿ ಕೂಡಿಕೊಂಡಿರುತ್ತೇನೆ ಈ ದಿನ ನೀನು ಆಟವಾಡಲಿಕ್ಕೆ ಬಂದಾಗ ನಿನ್ನನ್ನು ನೋಡಿ ನಿನ್ನ ಭೆಟ್ಟಿಯಾಗುವದಕ್ಕೋಸ್ಕರ ನಾನೇ ಖಾನನಿಗೆ ಹೇಳಿಕೊಟ್ಟು ನಿನ್ನನ್ನು ಹಿಡತರಿಸಿದ್ದೇನೆ ನಾನು ಯಾವ ಕಾರ್ಯಕ್ಕೆ ಬಂದಿರುವೆನೋ ಅದೇ ಕಾರ್ಯಕ್ಕೆ ನೀನೂ ಬಂದಿರುವಿ ನಾವು ಬಹು ಎಚ್ಚರದಿಂದ ಕಾರ್ಯವನ್ನು ನಡಿಸಬೇಕಾಗಿದೆ, ಇದರಿಂದ ಖಾನನ ಹಾಗು ವಿಜಾಪುರದವರ ಸೊಕ್ಕನ್ನು ಇಳಿಸುವದಲ್ಲದೆ ರಾಮಯನ ತಲೆಯೆತ್ತದಂತೆ ಮಾಡಬೇಕಾಗಿರುತ್ತದೆ ನಿನಗೆ ಆಹಾರವನ್ನು ತಂದಿರುತ್ತೇನೆ ಇದನ್ನು ತಿಂದು ಈ ಹೂಜೆಯಲ್ಲಿಯ ನೀರು ಕುಡಿ.

ಈ ಮೇರೆಗೆ ಜಟಾಧಾರಿಯು ಮಾತನಾಡಲು ಪ್ರಹಾರೇಶ್ವರನು ಸಂತೋಷಪಟ್ಟು ಇನ್ನು ಮುಂದೆ ಚಿಂತೆಮಾಡಲಿಕ್ಕೆ ಆಸ್ಪದವುಳಿಯಲಿಲ್ಲೆಂದು ನುಡಿದು ಅವನು ತಂದ ಆಹಾರವನ್ನು ತಿಂದು ನೀರು ಕುಡಿದನು ಬಳಿಕ ಜಟಾಧಾರಿಯು ನಾಳೆ ಇದೇ ಹೊತ್ತಿಗೆ ನಿನಗೆ ಭೆಟ್ಟಿಯಾಗುವೆನೆಂದು ಹೇಳಿ ಅಲ್ಲಿಂದ ಹೊರಟು ಹೋದನು ಇತ್ತ ಕಾರಾಗೃಹದಲ್ಲಿ ಪ್ರಹಾರೇಶ್ವರನು ಅಕಸ್ಮಾತ್ತಾಗಿ ಒದಗಿದ ಈ ಮಿತ್ರಲಾಭವನ್ನು ಕಂಡು ಸಂಭ್ರಮಪಡುತ್ತ ವಾಸಮಾಡಿದನು.

---

## ೧೦ನೆಯ ಪ್ರಕರಣ.

### ತಂತ್ರಕ್ಕೆ ಪ್ರತಿತಂತ್ರ.

ಈ ಮೇರೆಗೆ ಫಕೀರನು ಪ್ರತಾಪನಿಗೆ ತನ್ನ ಗುರುತನ್ನು ಕೊಟ್ಟು ದಿನಾಲು ನಡುರಾತ್ರಿಯಲ್ಲಿ ಹೋಗಿ ಆತನ ಯೋಗಕ್ಷೇಮವನ್ನು ತಕ್ಕೊಂಡು ಒರತೊಡಗಿ

ದನು ವಿಜಯನಗರದವರೂ, ವಿಜಾಪುರದವರೂ ದಂಡಯಾತ್ರೆಗೆ ಹೊರಟರೆಂಬ ಸುದ್ದಿಗಳು ಅವನ ಕಿವಿವರೆಗೆ ಬಂದವು. ಆಗ ಆತನು ಮನಸಿನಲ್ಲಿ ಯೋಚಿಸಿದ್ದೇನಂದರೆ—"ಇನ್ನು ಮುಂದೆ ಬಹಳ ದಿವಸಗಳ ವರೆಗೆ ಸುಮ್ಮನಿರುವದು ಸರಿಯಲ್ಲ, ರಾಮಯನ ಕಾರಸ್ಥಾನವನ್ನು ಕುಗ್ಗಿಸುವದಕ್ಕಾಗಿ ತಕ್ಕ ಹಂಚಿಕೆಯನ್ನು ಮಾಡಬೇಕು. ತಿಮ್ಮರಸನ ಮಂತ್ರಾಲೋಚನೆಯಂತೆ ಒಂದು ಹರಳು ಒಗೆದು ನೋಡೋಣ, ಇದರಿಂದ ರಾಮಯನ ಅರ್ಧ ಉತ್ಸಾಹವು ಕುಗ್ಗಿದರೂ ನಮ್ಮ ಕೆಲಸವಾಗುವದು." ಹೀಗೆ ಯೋಚಿಸಿ ಆತನು ತನ್ನ ಕಫನಿಯನ್ನು ಸರಿಪಡಿಸಿಕೊಂಡು ಒಳ್ಳೇ ಉತ್ಸಾಹದಿಂದ ಬೇದರದ ಬಾದಶಹನು ಇಳಕೊಂಡಲ್ಲಿಗೆ ತೆರಳಿದನು.

ಮಧ್ಯಾಹ್ನದ ಸಮಯವಾದ್ದರಿಂದ ಬಾದಶಹನು ವಾಸಗೃಹವನ್ನು ಬಿಟ್ಟು ಎಲ್ಲಿಯೂ ಕದಲದೆ ಏನನ್ನೋ ಯೋಚಿಸುತ್ತ ಮನೆಯಲ್ಲಿಯೇ ಕುಳಿತುಕೊಂಡಿದ್ದನು. ಫಕೀರನು ಅಲ್ಲಾನ ಸ್ಮರಣೆ ಮಾಡುತ್ತ ಅವನ ಮುಂದೆ ಹೋಗಿ ನಿಂತುಕೊಳ್ಳಲು, ಬಾದಶಹನು ಚಟ್ಟನೆದ್ದು, ಫಕೀರನನ್ನು ಒಳ್ಳೇ ಆದರದಿಂದ ಗೌರವಿಸಿ ಅವನನ್ನು ಶ್ರೇಷ್ಠವಾದ ಪೀಠದ ಮೇಲೆ ಕುಳ್ಳಿರಿಸಿದನು. ಬಳಿಕ ಅವರಿಬ್ಬರ ನಡುವೆ ಮಾತುಕಥೆಗಳು ನಡೆದವು. ಬಾದಶಹನು ತಾನು ಇಸ್ಲಾಮಿಯಾ ಧರ್ಮದ ಶುದ್ಧಸಂತತಿಯವನೆಂದು ಒಳ್ಳೇ ಅಭಿಮಾನ ಪಡುತ್ತಿದ್ದನು. ಆ ಧರ್ಮದ ಉತ್ಕರ್ಷದ ಬಗ್ಗೆ ಅವನಿಗೆ ಅಭಿಮಾನವು ಬಹಳಿತ್ತು, ಆದ್ದರಿಂದ ಅವನು ಫಕೀರನಮುಂದೆ ಇಸ್ಲಾಮಿಯಾಧರ್ಮದ ವಿಷಯವನ್ನೇ ತೆಗೆದನು. ಫಕೀರನು ಧೂರ್ತತನದಿಂದ ತನ್ನ ಹುಳುಕು ಹೊರಬೀಳದ ಹಾಗೆ ಎಚ್ಚರದಿಂದ ಮಾತನಾಡುತ್ತ ಬಾದಶಹನನ್ನು ಶ್ಲಾಘಿಸಿದನು.

ಫಕ್ಕೀರನು—ಯವನಶ್ರೇಷ್ಠರೇ, ನಿಮ್ಮ ಧರ್ಮಪ್ರೇಮವನ್ನು ನೋಡಿ ನನಗೆ ಸಂತೋಷವಾಗುತ್ತದೆ. ನಿಮ್ಮಂಥವರು ಮನಸ್ಸು ಮಾಡಿದರೆ ಜಗತ್ತಿನಲ್ಲೆಲ್ಲ ನಮ್ಮ ಇಸ್ಲಾಮಿಯಾ ಧರ್ಮವನ್ನೇ ಮಾಡಬಹುದಲ್ಲವೇ?

ಬಾದಶಹ—ಮಹಾತ್ಮರೇ, ನೀವಂದತೆಯೇ ನನ್ನ ಮನಸ್ಸಿನಲ್ಲಿರುತ್ತದೆ. ಆದರೆ ಅಷ್ಟೊಂದು ಘನತರವಾದ ಯೋಗ್ಯತೆಯೊಂದು ಬೇಕಷ್ಟೇ?

ಫಕ್ಕೀರ—ಬಾದಶಾಹೀಸೂತ್ರವೇ ಕೈಯಲ್ಲಿರುವಾಗ ಇದಕ್ಕೂ ಹೆಚ್ಚಿನ ಯೋಗ್ಯತೆಯು ಅದಾವದಿರುವದು?

ಬಾದಶಹ—ಬಾದಶಾಹೀ ಅಧಿಕಾರವಿರುವದೇನೋ ನಿಜ; ಆದರೆ ನಮ್ಮ ರಾಜ್ಯದ ವಿಸ್ತಾರವೆಷ್ಟು? ಇಷ್ಟು ಸಣ್ಣ ರಾಜ್ಯದ ನನ್ನನ್ನು ಕೇಳುವವರಾರು?

ಖುದಾನ ದಯೆಯಿಂದ ಇನ್ನೊಂದು ರಾಜ್ಯವು ನನಗೆ ದೊರತು ನನ್ನ ಬಲವು ಹೆಚ್ಚಿದರೆ ನಾನು ನಿಶ್ಚಯವಾಗಿ ಇಸ್ಲಾಮಿಯಾ ಧರ್ಮವನ್ನು ಒತ್ತಾಯದಿಂದ ಹಬ್ಬಿಸುವೆನು.

ಫಕ್ಕೀರ—(ಏನೋ ಎಣಿಸಿದಂತೆ ಮಾಡಿ) ಬಾದಶಹರೇ ನಿಮ್ಮ ಅಪೇಕ್ಷೆಯು ಪೂರ್ಣವಾಗುವದು, ನಿಮ್ಮ ಇಚ್ಛೆಯಂತೆ ನಿಮಗೆ ಇನ್ನೊಂದು ಹೊಸ ರಾಜ್ಯವು ದೊರೆಯುವ ಯೋಗವಿರುತ್ತದೆ

ಬಾದಶಹ—(ಹರುಷದಿಂದ) ಮಹಾತ್ಮರೇ, ಇದೇನು ಹೇಳಿದಿರಿ? ಇಂಥ ಅಸಂಭವನೀಯ ಕೆಲಸವು ಹ್ಯಾಗಾಗುವದು?

ಫಕೀರ—ಖುದಾನ ದಯವಿದ್ದರೆ ಅಸಾಧ್ಯವೇತರದು? ಖುದಾನ ಮೇಲೆ ವಿಶ್ವಾಸವಿಟ್ಟು ಪ್ರಯತ್ನಮಾಡಿದರೆ ಯಶಸ್ಸು ದೊರೆಯುವದು.

ಬಾದಶಹ—ಮಹನೀಯರೆ, ನಿಮ್ಮ ಮಾತಿನ ಧೋರಣವೇ ನನಗೆ ತಿಳಿಯಲಿಲ್ಲ, ನೀವು ಮಹಾತ್ಮರಿರುವದರಿಂದ ನಿಮ್ಮ ಮಾತನ್ನು ನಾನು ನಿಜವೆಂದು ನಂಬುತ್ತೇನೆ ಆದರೆ ನನಗೆ ಯಾವ ರಾಜ್ಯವು ಸಿಗಬಹುದೆಂಬದನ್ನು ಹೇಳಿರಿ

ಫಕೀರ—ಬಾದಶಹರೇ, ನಿಮಗೆ ಸ್ಪಷ್ಟವಾಗಿ ಹೇಳಲಾ! ರಾಮಯನು ನಿಮಗೆ ದೊಡ್ಡ ಮನೆತನದ ಸ್ತ್ರೀಲಾಭವನ್ನು ಮಾಡಿಕೊಡುವೆನೆಂದು ಹೇಳಿ ನಿಮ್ಮನ್ನು ಇಲ್ಲಿಗೆ ಬರಮಾಡಿಕೊಂಡಿರುವನಷ್ಟೇ? ನಿಮ್ಮ ಹಾಗೂ ವಿಜಾಪುರದ ವರ-ಗೋವಳಕೊಂಡದವರ ಪ್ರಯತ್ನದಿಂದ ವಿಜಯನಗರದ ಸಾಮ್ರಾಜ್ಯವು ನಷ್ಟವಾಗುವದು ಇದರಿಂದ ಉದಯಗಿರಿರಾಜ್ಯವು ಸ್ವತಂತ್ರವಾಗುವದು. ಹ್ಯಾಗೂ ಆ ರಾಜವಂಶದಲ್ಲಿ ಒಬ್ಬ ಸುಂದರ ಬಾಲಿಕೆಯಿರುವಳು. ಆಕೆಯನ್ನೇ ನೀವು ಮದುವೆಮಾಡಿಕೊಂಡಿರೆಂದರೆ ಆ ರಾಜ್ಯವು ನಿಮಗೆ ಸಹಜವಾಗಿ ಸಿಕ್ಕುವದು.

ಬಾದಶಹ—(ಆಶ್ಚರ್ಯದಿಂದ)ಏನು ಮಹಾತ್ಮರೇ, ಉದಯಗಿರಿರಾಜನಿಗೆ ಒಬ್ಬ ಬಾಲಿಕೆಯಿರುವಳೇ? ರಾಮಯನು ನನಗೆ ಒಬ್ಬ ರಾಜಪುತ್ರನಿರುವನೆಂದು ಮಾತ್ರ ಹೇಳಿರುವನು ನೀವು ಹೇಳುವಂತೆ ಬಾಲಿಕೆಯಿದ್ದರೂ ಆಕೆಯ ಮದುವೆಯಿಂದ ನನಗೆ ಉದಯಗಿರಿ ರಾಜ್ಯವು ಹ್ಯಾಗೆ ದೊರೆಯುವದು?

ಫಕೀರ—ಓಹೋ, ರಾಮಯನು ಇಲ್ಲಿಯೇ ನಿಮ್ಮನ್ನು ಠಕ್ಕಿಸಿರುವನು ಅವನ ತಂತ್ರಗಳು ನಿಮಗೆ ತಿಳಿಯಲಾರವು.

ಬಾದಶಹ—ಇದರಲ್ಲಿ ರಾಮಯನದೇನು ತಂತ್ರವಿರುವದು?

ಫಕೀರ—ಉದಯಗಿರಿರಾಜನಿಗೆ ಕಮಲಾಂಬೆ ಎಂಬೊಬ್ಬ ಪ್ರೌಢ ಬಾಲಿಕೆ

ಮಾತ್ರ ಇರುವಳು ಆಕೆಗೇ ಪುರುಷ ವೇಷವನ್ನಳವಡಿಸಿ ರಾಜಕುಮಾರನೆಂದು ರಾಮಯನು ಹೇಳಿರುವನು ನಿಮ್ಮೊಡನೆ ಅವನು ಸಖ್ಯವನ್ನು ಮಾಡಬೇಕೆಂದು ಬಯಸುವದು, ತನ್ನ ಹಿತದ ಸಲುವಾಗಿಯೇ ಹೊರತು ನಿಮ್ಮ ಹಿತಕ್ಕಾಗಿ ಅಲ್ಲ, ಅವನು ತನ್ನ ಮನಸ್ಸಿನೊಳಗಿನ ಗತ್ತನ್ನು ಬಿಡಲಾರನು ಹೀಗೆ ಅವನು ನಿಮ್ಮೊಡನೆ ಸರಳತನದಿಂದ ನಡೆಯಬೇಕಾಗಿದ್ದರೆ ಸ್ತ್ರೀಗೆ ಪುರುಷವೇಷವನ್ನು ಹಾಕಿ ನಿಮ್ಮನ್ನು ರಕ್ಕಿಸುತ್ತಿರಲಿಲ್ಲ ಆ ರಾಜಕುವರಿಯನ್ನು ಕಂಡು ನೀವು ಮೋಹಗೊಳ್ಳುವಿರೆಂದೇ ಆ ತಂತ್ರಗಾರನಾದ ರಾಮಯನು ಹೀಗೆ ಆಚರಿಸಿರುವನು

ಬಾದಶಹ—ನೀವು ಇದನ್ನು ಹ್ಯಾಗೆ ಗೊತ್ತು ಹಚ್ಚಿದಿರಿ?

ಫಕೀರ—ಮೊದಮೊದಲು ನನಗೂ ನಿಮ್ಮ ಹಾಗೆ ಭ್ರಾಂತಿ ಬಂದಿತ್ತು. ಈ ಸಂಗತಿಯನ್ನು ನನ್ನ ಒಬ್ಬ ಸ್ನೇಹಿತನು ಹೇಳಿದನು ನೀವು ಈ ವಿಷಯವಾಗಿ ರಾಮಯನನ್ನು ಕೇಳಬಹುದು

ಬಾದಶಹ—ಆ ರಾಜಕುಮಾರಿಯ ವಿಷಯವಾಗಿ ನಮ್ಮಲ್ಲಿ ಆಶೆ ಹುಟ್ಟಬಾರದೆಂದೇ ಆ ಮಂತ್ರಿಶ್ರೇಷ್ಠನು ಇಷ್ಟು ಪ್ರಯತ್ನ ಪಡುತ್ತಿರುವಾಗ ನಾನು ಕೇಳಿದರೆ ಅವನು ಹಚ್ಚಿಕೊಳ್ಳುವನೇ? ಸುಮ್ಮನೆ ನಮ್ಮ ಅಗೌರವವನ್ನು ನಾನೇ ಮಾಡಿಕೊಂಡಂತಾದೀತು.

ಫಕೀರ—ಬಾದಶಹರೇ, ರಾಮಯನು ನಿಮ್ಮ ಮಾತು ಕೇಳದಿದ್ದರೆ ನೀವು ಅವನ ಮಾತುಕೇಳಿ ವಿಜಯನಗರದವರೊಡನೆ ಯುದ್ಧವನ್ನಾದರೂ ಹ್ಯಾಗೆ ಮಾಡುವಿರಿ? ಈಗ ರಾಮಯನು ನಿಮ್ಮ ಸ್ನೇಹವನ್ನು ಕಾಯ್ದುಕೊಳ್ಳಬೇಕಾದ್ದರಿಂದ ಅವನು ನೀವು ಹೇಳಿದಹಾಗೆ ಕೇಳಲೇ ಬೇಕಾಗುವದು. ದಾವಲಖಾನರಿಗೆ ವಿಜಯನಗರದ ರಾಯರ ಉಪಪತ್ನಿಯನ್ನು ತಂದು ಕೊಟ್ಟಿರುವನು.

ಬಾದಶಹ—ಹೀಗೇನು? ಅಂದಬಳಿಕ ರಾಮಯನು ನನ್ನ ಮಾತನ್ನು ಕೇಳಲೇಬೇಕಾಯಿತು. ಬೇರೆ ದೊಡ್ಡ ವಂಶದ ಸ್ತ್ರೀಯನ್ನು ತಂದು ಕೊಡುವದಕ್ಕಿಂತ ಕೈಯೊಳಗಿದ್ದ ಆ ರಾಜಪುತ್ರಿಯನ್ನು ಕೊಡುವದು ಅವನಿಗಾದರೂ ಸುಲಭವಾಗಿದೆ ಅನಾಯಾಸವಾಗಿ ನಮಗೆ ಸುಂದರ ತರುಣಿಯ ಲಾಭ ಹಾಗು ರಾಜ್ಯಲಾಭಗಳೆರಡೂ ಸಾಧಿಸುವವು.

ಫಕೀರ—(ಮನಸ್ಸಿನಲ್ಲಿ ಆತನ ಮೂರ್ಖತನಕ್ಕೆ ನಗುತ್ತ) ಬಾದಶಹರೇ, ಬಹು ಯೋಗ್ಯವಾಗುವದು. ಈಗಲೇ ರಾಮಯನನ್ನು ಕರೆಯಿಸಿ ಕೇಳಿಬಿಡಿರಿ. ನಾನು ಹೋಗಿಬರುತ್ತೇನೆ.

ಈ ಮೇರೆಗೆ ಫಕೀರನು ರಾಮಯನ ಗುಪ್ತ ತಂತ್ರಗಳಿಗೆ ಕೇರು ಹಾಕುವ ದಕ್ಕಾಗಿ ಬಾದಶಹನ ಹೃದಯಭೂಮಿಕೆಯಲ್ಲಿ ಈ ಬಗೆಯ ಬೀಜವನ್ನು ಬಿತ್ತಿ ಸ್ವಸ್ಥಳಕ್ಕೆ ಹೊರಟುಹೋದನು ಬಳಿಕ ಹೆಣ್ಣಿನ ಹುಚ್ಚು ಹತ್ತಿದ ಆ ಬಾದಶ ಹನು ರಾಮಯನನ್ನು ಕರೆಕಳುಹಿಸಿದನು. ಆತನಾದರೂ ಜಾಗ್ರತೆಯಿಂದ ಹೊರಟುಬಂದು ಬಾದಶಹನಿಂದ ಮರ್ಯಾದೆಯನ್ನು ಹೊಂದಿ ಉಚಿತಾಸನದಲ್ಲಿ ಕುಳಿತುಕೊಂಡನು. ಆಗ—

ಬಾದಶಹನು—ಮಂತ್ರಿಗಳೇ, ಮೊನ್ನೆ ಸಭೆಯಲ್ಲಿ ನಿಮ್ಮ ರಾಜಕುಮಾರ ರನ್ನು ಕರಕೊಂಡು ಬಂದಿದ್ದಿರಲ್ಲವೇ? ಅವರೊಡನೆ ನಾನು ಕೆಲವುಮಾತುಗಳನ್ನಾ ಡಬೇಕೆಂದರೆ ಆಗ ಅನುಕೂಲವಾಗಲಿಲ್ಲ ಈ ದಿನ ಸಂಜೆಯ ಮುಂದೆ ಇಲ್ಲಿಗೆ ಕಳಿಸಿಕೊಡುವಿರೇನು?

ರಾಮಯಮಂತ್ರಿ—(ಗಾಬರಿಯಾಗಿ) ಬಾದಶಹರೇ, ನಮ್ಮ ರಾಜಪುತ್ರರು ಈಗೆರಡು ದಿನಗಳಿಂದ ತಲೆನೋವಿನ ಬಾಧೆಯಾಗಿ ಅಸ್ವಸ್ಥರಾಗಿದ್ದಾರೆ

ಬಾದಶಹ—ಮಂತ್ರಿಗಳೇ, ನಿಮ್ಮ ಗುಟ್ಟು ನನಗೆಲ್ಲ ಗೊತ್ತಾಗಿರುವದು ನಮ್ಮ ಮುಂದೆ ಸಹ ನೀವು ಈ ಪರಿ ಸುಳ್ಳು ಹೇಳಬೇಕೇನು?

ರಾಮಯಮಂತ್ರಿ—ಬಾದಶಹರೇ, ನೀವು ಏನು ಅನ್ನುವಿರಿ? ನಿಮ್ಮ ಮಾತಿನ ಅರ್ಥವೇ ನನಗಾಗಲಿಲ್ಲ

ಬಾದಶಹ—ಮಂತ್ರಿಗಳೇ, ಇಂಥ ಮಾತಿನ ಅರ್ಥವು ನಿಮಗೆ ಹ್ಯಾಗೆ ಆದೀತು? ಸ್ತ್ರೀಗೆ ಪುರುಷವೇಷವನ್ನು ಅಳವಡಿಸಿ ಮುಂದಿಯನ್ನು ರಕ್ಕಿಸಲಿಕ್ಕೆ ಮಾತ್ರ ಬರುತ್ತದೆಂಬಂತೆ ತೋರುತ್ತದೆ

ರಾಮಯಮಂತ್ರಿ—(ಆಶ್ಚರ್ಯಪಟ್ಟು ಸ್ವಗತ) ಎಲ! ಇದೇನು ಅನರ್ಥ ವಾಯಿತಲ್ಲ! ನಾನು ಕಮಲಾಂಬೆಗೆ ಈ ದುರ್ಜನರ ದೃಷ್ಟಿತಾಕಬಾರದೆಂದು ಪುರುಷವೇಷವನ್ನು ಹಾಕಿದ್ದು ಇವರಿಗೆ ಹೇಗೆ ಗೊತ್ತಾಗಿರಬಹುದು? ನಾನು ಇಷ್ಟು ಎಚ್ಚರದಿಂದ ನಡೆದರೂ ನಮ್ಮ ಗುಪ್ತಸಂಗತಿಗಳನ್ನು ಯಾರು ಹೊರಗೆ ಡಹುತ್ತಿರಬಹುದು? ಶಿವ! ಶಿವ! ಈಗೇನು ಉತ್ತರ ಹೇಳಬೇಕಾಯಿತು? (ಪ್ರಕಾಶ) ಬಾದಶಹರೇ, ನನ್ನ ಈ ಕೃತಿಯನ್ನು ನೀವು ಮೋಸವೆಂದು ಭಾವಿಸಿ ದರೆ ನನ್ನ ಯತ್ನವಿಲ್ಲ. ಆದರ ರಹಸ್ಯವನ್ನು ಈಗ ಹೇಳುತ್ತ ಕುಳಿತರೆ ಎರಡು ಮೂರು ದಿನಗಳಾದರೂ ಸಾಲಲಿಕ್ಕಿಲ್ಲ!

ಬಾದಶಹ—ಅದಿರಲಿ, ಮಂತ್ರಿವರ್ಯರೇ, ನೀವು ನಿಮ್ಮ ರಾಜಪುತ್ರಿಗೆ ಇದುವರೆಗೆ ಪುರುಷವೇಷ ಹಾಕಿದ್ದೇ ವಿಹಿತವಾಗಿದೆ ಈಗ ನಾನೊಂದು ಮಾತು ಕೇಳುತ್ತೇನೆ ಅದಕ್ಕೆ ನೀವೇನು ಅನ್ನುವಿರಿ?

ರಾಮಯಮಂತ್ರಿ—ಅದು ಯಾವ ಮಾತೆಂಬುದನ್ನು ನೀವು ಹೇಳಿದ ಹೊರತು ನಾನು ಆ ವಿಷಯವಾಗಿ ಏನು ಮಾತಾಡಲಿ?

ಬಾದಶಹ—ನಿಮ್ಮ ರಾಜಪುತ್ರಿಯನ್ನು ನನಗೆ ನಿಕಾಮಾಡಿಕೊಡಬೇಕು ಇದೇ ನನ್ನ ಪ್ರಶ್ನೆಯು.

ರಾಮಯಮಂತ್ರಿ—(ವಜ್ರಾಘಾತವಾದಂತೆ ನೊಂದುಕೊಂಡು) ಬಾದಶಹರೇ, ಇದನ್ನೇನು ಪ್ರಶ್ನಮಾಡಿದಿರಿ? ಇದಕ್ಕ ನನಗೇ ಹ್ಯಾಗೆ ಉತ್ತರಕೊಡಲಿಕ್ಕೆ ಬಂದೀತು ನಮ್ಮ ರಾಜಪುತ್ರಿಯು ಬಹು ಬುದ್ಧಿಶಾಲಿನಿಯಿರುವಳು ಆಕೆಗೆ ನಾನು ಈ ವಿಷಯವನ್ನು ತಿಳಿಸುವೆನು ಈ ಮಾತಿಗೆ ಅವಳ ಒಪ್ಪಿಗೆಯು ಬೇಕೇ ಹೊರತು ಬರಿಯ ನನ್ನ ಅಭಿಪ್ರಾಯದಿಂದ ಆಗುವ ಹಾಗಿಲ್ಲ

ಬಾದಶಹ—(ಸ್ವಲ್ಪ ತಿರಸ್ಕಾರದಿಂದ) ಹೀಗೆ ನೀವು ಹೊರದಾರಿ ಹಚ್ಚಿ ಮಾತನಾಡಿದರೆ ನಾವಾದರೂ ನಿಮ್ಮ ಸಲುವಾಗಿ ಇಷ್ಟೇಕೆ ಪೇಚಾಡಬೇಕು? ನಿಮ್ಮ ವಚನವು ನಿಮಗೆ ಮುಟ್ಟಿತು ನಾವು ನಾಳೆಗೇ ಇಲ್ಲಿಂದ ಹೊರಟು ಹೋಗುವೆವು.

ರಾಮಯಮಂತ್ರಿ—ಬಾದಶಹರೇ, ಹೀಗೆ ನೀವು ನನ್ನ ಮೇಲೆ ಮುರ ಕೊಂಡುಬಿದ್ದರೆ ನಾನು ಏನು ಮಾಡಲಿ? ರಾಜಪುತ್ರಿಯ ಮನವೊಲಿಸುವ ಪ್ರಯತ್ನಮಾಡುವೆನು. ನನ್ನ ಸ್ವಂತ ಅಭಿಪ್ರಾಯವನ್ನು ಕೇಳಿದರೆ ನಿಮ್ಮಂಥ ವೈಭವಸಂಪನ್ನ ಬಾದಶಹರು ನಮ್ಮ ರಾಜಪುತ್ರಿಯ ಕೈಹಿಡಿದರೆ ಆಕೆಯು ಧನ್ಯಳೆಂದೇ ನಾನು ತಿಳಿಯುತ್ತೇನೆ.

ಬಾದಶಹ—ಆಗಲಿ, ಮಂತ್ರಿಗಳೇ ನಾನಂತೂ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ನಿಮ್ಮ ಮುಂದೆ ಇಟ್ಟಿರುತ್ತೇನೆ ಮುಂದೆ ಮಾಡತಕ್ಕದ್ದನ್ನು ನಿಮಗೆ ಸರಿದೋರಿದ ಹಾಗೆ ನೀವೇ ಗೊತ್ತುಪಡಿಸಿರಿ

ಈ ಮೇರೆಗೆ ಅವರಿಬ್ಬರ ಭಾಷಣವಾಗಲು ರಾಮಯನು ಬಾದಶಹನ ಅಪ್ಪಣೆಪಡೆದು ಸ್ವಗೃಹಾಭಿಮುಖವಾಗಿ ತೆರಳಿದನು ಹೋಗಹೋಗುತ್ತ ಅವನು ಮನಸ್ಸಿನಲ್ಲಿ—"ಈ ತುರ್ಕರ ಸಂಗವು ಸರ್ಪದಸಂಗವಿದ್ದಹಾಗೆ, ನಾನೊಂದು ಹಂಚಿಕೆಯಿಂದ ಇವರೆಲ್ಲರನ್ನೂ ಕಲೆಹಾಕಿದರೆ ಅದು ನನ್ನ ಮೈಮೇಲೆಯೇ ಬರು

ವಂತೆ ತೋರುತ್ತದೆ. ಪಾಪ! ನಮ್ಮ ರಾಜಪುತ್ರಿಯು ಬಹುಶೀಲವತಿಯು, ಯವನರನ್ನು ಕಂಡರೆ ಆಕೆಗೆ ಆಗದು. ಇಂಥ ಸತ್ಕುಲ ಪ್ರಸೂತೆಯನ್ನು ಎಳೆದು ತಂದು ನಾನಾಗಿಯೇ ಎಂಥ ಸಂಕಟಕ್ಕೆ ಗುರಿಮಾಡಿದಹಾಗಾಯಿತಲ್ಲ? ಆಕೆಯು ಇದುವರೆಗೆ ಆನೆಗುಂದಿಯಲ್ಲಿಯೇ ಇದ್ದರೆ ರಾಯರ ಪ್ರಸನ್ನತೆಯಿಂದ ಆಕೆಯು ಸತ್ಕುಲಪ್ರಸೂತನಾದ ಬೇರೊಬ್ಬ ರಾಜನನ್ನು ಮದುವೆಯಾಗಿ ತನ್ನ ತವರುಮನೆಯ ಕೀರ್ತಿಯನ್ನು ಕಳಿಯಲು ಅರ್ಹಳಾಗುತ್ತಿದ್ದಳು. ಆದರೆ ಈಗ ಈ ಭಯಂಕರ ಸುದ್ದಿಯನ್ನು ನಾನು ಆಕೆಯ ಮುಂದೆ ಹ್ಯಾಗೆ ಹೇಳಲಿ? ಎಂದು ಯೋಚಿಸುತ್ತ ಅತಿ ಖಿನ್ನ ಮನಸ್ಸಿನಿಂದ ಮನೆಗೆ ಹೋದನು. ಕಮಲಾಂಬೆಯು ಬಹು ಚಾಣಾಕ್ಷಳಿದ್ದದರಿಂದ ಆಕೆಯು ರಾಮಯನ ಮುಖಲಕ್ಷಣಗಳನ್ನು ಕಂಡು ಹಿಡಿದು ಪ್ರಸಂಗವು ವಿಪರೀತವಾಗಿರಬೇಕೆಂದು ತರ್ಕಿಸಿ— "ಮಂತ್ರಿಗಳೇ, ಇಂದು ನಿಮ್ಮ ಮುಖವು ಹೀಗೆ ಕಂದಲಿಕ್ಕೆ ಕಾರಣವೇನು? ನಿಮ್ಮ ಯುಕ್ತಿಗಳೇನಾದರೂ ಬೈಲಿಗೆ ಬಿದ್ದು ಕಾರ್ಯಹಾನಿ ಮಾತ್ರ ಆಗಿಲ್ಲವಷ್ಟೇ? ಎಂದು ಪ್ರಶ್ನಮಾಡಿದಳು. ಆಕೆಯ ಈ ಪ್ರಶ್ನೆಯಿಂದ ಆತನಿಗೆ ಮತ್ತಷ್ಟು ವ್ಯಸನವಾಯಿತು. ಅವನು ಅದನ್ನು ಹೇಳಲಾರದೆ ಏನೂ ಇಲ್ಲ, ಎಂದು ತಲೆ ಕೊಡಹಿದನು.

ಹೀಗೆ ಮಂತ್ರಿಯು ಕಾರಣವನ್ನು ಹೇಳದ್ದರಿಂದ ಕಮಲಾಂಬೆಯ ಜಿಜ್ಞಾಸೆಯು ಹೆಚ್ಚಿತು. ಆಕೆಯು ನಡೆದ ಸಂಗತಿಯನ್ನು ಹೇಳಲೇಬೇಕೆಂದು ದುಂಬಾಲಬಿದ್ದಳು. ಕಡೆಗೆ ನಿರ್ವಾಹವಿಲ್ಲದೆ ರಾಮಯನು ಆಕೆಗೆ ಆದ ಸಂಗತಿಯನ್ನು ಹೇಳಬೇಕಾಯಿತು.

ರಾಮಯನು—ತಂಗೀ ಕಮಲಾ, ಇಂದಿನ ದಿವಸ ನನ್ನ ಅಸಮಾಧಾನಕ್ಕೆ ಕಾರಣವಾದ ಸಂಗತಿಯನ್ನು ನಿನ್ನ ಮುಂದೆ ಹೇಳಬಾರದೆಂದರೆ ನೀನು ಕೇಳಲೊಲ್ಲ. ಅದರಿಂದ ನಿನಗೂ ದುಃಖವಾಗದೆ ಇರದು. ಉಪಾಯವಿಲ್ಲದೆ ಹೇಳುತ್ತೇನೆ ಕೇಳು— ಬೀದರದ ಬಾದಶಹನು ನೀನು ಪುರುಷವೇಷದಿಂದಿದ್ದರೂ ಸ್ತ್ರೀ ಇರುವಿಯೆಂಬದನ್ನು ಕಂಡುಹಿಡಿದಿರುವನು. ಯಾರೋ ದುಷ್ಟರು ನಮ್ಮ ಈ ರಹಸ್ಯವನ್ನರಿತು ಅವನಿಗೆ ಚುಚ್ಚಿಕೊಟ್ಟಿರುವರು. ಆ ಕಾಮಾಂಧನು ನಿನ್ನನ್ನು ನಿಕಾಮಾಡಿಕೊಳ್ಳಲು ಅಪೇಕ್ಷಿಸುವನು. ಈ ದಿವಸ ನನ್ನನ್ನು ಕರೆಯಿಸಿದ್ದು ಇದಕ್ಕಾಗಿಯೇ, ತಂಗೀ, ಕಮಲಾ, ಏನು ಹೇಳಲಿ? ನಾನಾಗಿಯೇ ನಿನ್ನ ಕೊ-

ರಳು ಕೊಯ್ದು ಹಾಗಾಗಿರುವದು ಈ ದುಷ್ಟರ ಮಧ್ಯದಲ್ಲಿ ನಿನ್ನನ್ನು ತಂದಿರಿ ಸಿದ್ದು ನನ್ನಿಂದ ದೊಡ್ಡ ಅಪರಾಧವಾಯಿತು

ಕಮಲಾಂಬೆ—ಮಂತ್ರಿಗಳೇ, ಬಾದಶಹನ ಪ್ರಶ್ನೆಗೆ ಏನು ಉತ್ತರವನ್ನು ಕೊಟ್ಟು ಬಂದಿರುವಿರಿ?

ರಾಮಯನು—ತಂಗೀ, ಏನು ಉತ್ತರ ಕೊಡಲಿ? ಅವನ ಈ ಪ್ರಶ್ನೆ ಯಿಂದ ನನ್ನ ಸರ್ವಸ್ವವೂ ಘಾತವಾಯಿತೆಂದು ಭಾಸಿಸಿದೆನು ಮಾತ್ರ, ಆದರೆ ಆತನ ಪ್ರಶ್ನೆಗೆ ಏನಾದರೂ ಉತ್ತರ ಕೊಡಬೇಕಷ್ಟೇ? ನಮ್ಮ ರಾಜಪುತ್ರಿಗೆ ಈ ವಿಷಯವನ್ನು ತಿಳಿಸಿ ಆಕೆಯ ಅಭಿಪ್ರಾಯ ತಿಳಿದು ನಿಮಗೆ ಹೇಳುತ್ತೇನೆಂದು ಹೇಳಿ ಬಂದಿರುವೆನು ಮುಂದೆ ಏನು ಮಾಡಬೇಕೆಂಬದೇ ಈಗ ನನ್ನ ಯೋ-ಚನೆಯಲ್ಲಿರುತ್ತದೆ

ಕಮಲಾಂಬೆ—ಮಂತ್ರಿಗಳೇ ಹೀಗೆಯಾಕ ಹೇಳಿದಿರಿ?

ರಾಮಯ—ಮತ್ತೇನು ಹೇಳಬೇಕಾಗಿತ್ತು?

ಕಮಲಾಂಬೆ—ನಿಮಗೇನೂ ನಾನು ರಾಜಕರಣ ಕಲಿಸಬೇಕೆಂಬಂತಿಲ್ಲ. ಹೂ! ಅಂದು ಬರಬೇಕಾಗಿತ್ತು. ಈಗ ನಾವು ಆ ದುಷ್ಟರ ದವಡೆಯಲ್ಲಿ ಸಿಕ್ಕಿದ್ದು, ಅವರ ವಿರುದ್ಧ ವರ್ತಿಸಿದರೆ ಇಂದೇ ಅನರ್ಥವು ಒದಗುವದು. ಹಾಗೆ ಮಾಡು ವದಕ್ಕಿಂತ ಯುಕ್ತಿಯಿಂದ ನಮ್ಮ ಕಾರ್ಯವ ಮಾಡಿಕೊಂಡು ಅನಂತರ ನಮ್ಮ ಬುದ್ಧಿಯನ್ನು ನಾವು ಕಂಡುಕೊಳ್ಳುವದು ವಿಹಿತವಾಗಿರುವದು ಇನ್ನುಮೇ ಲಾದರೂ ನೀವು ಬಾದಶಹನ ಬಳಿಗೆ ಹೋಗಿ ಅವನ ಅಸಮಾಧಾನವಾಗದಂತೆ ಹೇಳತಕ್ಕದ್ದನ್ನು ಹೇಳಿ ಬರ್ರಿ.

ರಾಮಯ—ತಂಗೀ, ನಿನ್ನ ಯುಕ್ತಿಯೆಲ್ಲ ಒಂದು ಬಗೆಯಿಂದ ಯೋಗ್ಯ ವಿದೆ. ಬಂದ ಪ್ರಸಂಗದಲ್ಲಿ ಏನಾದರೂ ಹಂಚಿಕೆ ಮಾಡಿ ಪಾರಾಗೋಣ

ಈ ಪ್ರಕಾರ ಸಂಭಾಷಣವಾದ ಬಳಿಕ ರಾಮಯನು ಕಮಲಾಂಬಿಕೆಯ ಒಳಿಯಿಂದ ಹೊರಟು ತನ್ನ ವಿಶ್ರಾಂತಿಯ ಸ್ಥಳಕ್ಕೆ ಹೋದನು. ಅಲ್ಲಿ ಅವನು ಕುಳಿತುಕೊಳ್ಳಲು ಹಲವು ಬಗೆಯ ಕಲ್ಪನೆಗಳು ಅವನ ಮನಸ್ಸಿನಲ್ಲಿ ಬರತೊಡಗಿ ದವು. ಅವನು ಬಹು ದೀರ್ಘಕಾಲದವರೆಗೆ ಯೋಚಿಸಿದನು ಅವನ ವಿಶಾಲ ವಾದ ಬುದ್ಧಿಗೆ ಈ ಗುಪ್ತಸಂಗತಿಗಳ ಸ್ಫೋಟವು ಹ್ಯಾಗಾಯಿತೆಂಬದು ಹೊಳೆಯದೆ ಹೋಯಿತು. ಆಗ ಅವನು ತನ್ನಲ್ಲಿ—"ನಾನು ತಿಮ್ಮರಸನಿಗೆ ಮಂಕುಬೂದಿ ಯನ್ನು ಹಚ್ಚಿ ಹಲವು ಕಾರಸ್ಥಾನಗಳನ್ನು ನಡಿಸಿರಲು, ಆ ಬುದ್ಧಿಶಾಲಿಯು ನನ್ನ

ಕಾರಸ್ಥಾನಗಳನ್ನು ನನಗೇ ಮುಳುವುಮಾಡುವದಕ್ಕೆ ಪ್ರಯತ್ನಿಸುವಂತೆ ತೋರುತ್ತಿದೆ. ಯಾಕಂದರೆ ಈ ನಗರಿಯಲ್ಲಿ ತಿಮ್ಮರಸನಿಂದ ಪ್ರೇರಿತರಾದ ಗುಪ್ತಚಾರರಿದ್ದಹೊರತು ನಮ್ಮ ಗುಪ್ತ ಸಂಗತಿಗಳು ಮುಂದಿಗೆ ತಿಳಿಯಲಾರವು. ನನ್ನ ತಂತ್ರಕ್ಕೆ ಪ್ರತಿ ತಂತ್ರಗಳನ್ನು ಹೂಡಲು ತಿಮ್ಮರಸನೊಬ್ಬನೇ ಸಮರ್ಥನು, ಎಂದು ಬಹು ವಿಧವಾಗಿ ಯೋಚಿಸಿದನು

---

# ೧೧ನೆಯ ಪ್ರಕರಣ.

## ಖಾನನ ವಿಷಯಾಂಧತೆ.

---(೦)---

ದಿನಮಣಿಯು ಅಸ್ತಂಗತನಾಗಿ ಎಷ್ಟೋ ತಾಸುಗಳು ಕಳೆದುಹೋಗಿವೆ. ಗಾಢಾಂಧಃಕಾರವು ತನ್ನ ಸಾಮ್ರಾಜ್ಯವನ್ನು ಭದ್ರವಾಗಿ ನೆಲೆಗೊಳಿಸಿದೆ. ಗಗನಾಂಗಣದಲ್ಲಿ ಮಿನುಗುಟ್ಟುವ ತಾರೆಗಳು ತಮ್ಮ ಸಂಖ್ಯಾಬಾಹುಳ್ಯವನ್ನು ಲಕ್ಷಿಸದೆ ಒತ್ತಿಬರುವ ನಿಶಾದೇವಿಯ ಸಾಹಸಕ್ಕೆ ನಾಚಿಕೊಂಡು ತಮ್ಮ ಪ್ರಕಾಶವನ್ನು ಹೆಚ್ಚು ಥಾಳಾಗಿ ಮಾಡುವ ಹವ್ಯಾಸವನ್ನು ತಳೆದಂತೆ ತೋರುತ್ತಲಿವೆ. ಈ ಅಂಧಃಕಾರದಲ್ಲಿ ಪ್ರಕಾಶವು ಹ್ಯಾಗಿರುತ್ತದೆಂಬದನ್ನು ತಿಳಿಯಬೇಕಾದರೆ ಆಕಾಶದ ಕಡೆಗೆ ನೋಡಿದ ಹೊರತು ಗತ್ಯಂತರವಿಲ್ಲದಾಗಿದೆ. ಇಂಥ ಸಮಯದಲ್ಲಿ ಸಮಸ್ತ ಪ್ರಪಂಚವೆಲ್ಲವೂ ನಿದ್ರಾಂಗನೆಯ ಆಲಿಂಗನ ಸೌಖ್ಯವನ್ನು ಯಥೇಷ್ಟವಾಗಿ ಅನುಭವಿಸುತ್ತಿದ್ದರೂ, ರಾಯಚೂರ ದುರ್ಗದಲ್ಲಿ ಒಂದು ಪ್ರತಿಷ್ಠಿತ ವ್ಯಕ್ತಿಯು ಆ ಸುಖಕ್ಕೆ ಹೊರತಾಗಿ ಹಲವು ಬಗೆಯ ವಿಚಾರಗಳಿಂದ ತಳಮಳಿಸುತ್ತ ಹಾಸಿಗೆಯ ಮೇಲೆ ಹೊರಳಾಡುತ್ತಿತ್ತು. ಬಹಳ ಹೊತ್ತು ಆ ಮಗ್ಗಲಿನಿಂದ ಈ ಮಗ್ಗಲು, ಈ ಮಗ್ಗಲಿನಿಂದ ಆ ಮಗ್ಗಲು ಹೊರಳಾಡಿದ ಒಳಿಕ ಆ ವ್ಯಕ್ತಿಯು ಆಂತರಿಕ ಸಮಾಧಾನವಿಲ್ಲದೆ ದಿಗ್ಗನೆ ಎದ್ದು ಕುಳಿತಿತು, ಮತ್ತು ಆಕಾಶವನ್ನು ನೋಡುತ್ತ ಮನದಲ್ಲಿ ಈ ರೀತಿಯಾಗಿ ಚಿಂತಿಸತೊಡಗಿತು —"ಎಲೈ ಪರವರದಿಗಾರನೇ,, ನನ್ನನ್ನು ಇಷ್ಟೇಕೆ ವಿರಹದುಃಖದಲ್ಲಿ ಮುಣುಗಿಸಿರುವಿ? ನಿನ್ನ ದಯೆಯಿಂದ ನಾನು ಇಷ್ಟೊಂದು ವೈಭವಸಂಪನ್ನನಾಗಿದ್ದರೂ ಆ ಲಲನಾಮಣಿಯ ಕ

ಸಂಭೋಗಸುಖವನ್ನು ಹೊಂದುವಷ್ಟು ದೈವಶಾಲಿಯು ನಾನಿಲ್ಲವೇ? ಯುದ್ಧ ಮುಖದಿಂದ ಗೆದ್ದು ತಂದ ತರುಣೀಮಣಿಯು ನನ್ನ ದುರ್ದೈವದಿಂದ ಅಂತರಿಸಿ ದಳು. ವಿಜಯನಗರದವರ ಈ ಹಾಳು ಯುದ್ಧವು ತೀರುವವರೆಗೆ ನಾನವಳ ಸನಿಯಕ್ಕೆ ಸುಳಿಯುವ ಹಾಗಿಲ್ಲ ಇದೂ ಇರಲಿ, ರಾಮರಾಯನು ಚಾತುರ್ಯ ದಿಂದ ಹಿಡಿದುತಂದ ಅನಂಗಸೇನೆಯ ಅಂಗಸುಖವಾದರೂ ನನಗೆ ಇದುವರೆಗೆ ಲಭಿಸಬಾರದೆಂದರ ಪರಮಾಶ್ಚರ್ಯವೆನಿಸುತ್ತದೆ. (ಅಹಮುಹಿಮಿಕೆಯನ್ನು ತಾಳಿ) ಇದರಲ್ಲಿ ಆಶ್ಚರ್ಯವೇತರದು? ನಾನಾಗಿಯೇ ಆ ಹೆಂಗಳೆಯರ ಮನಸ್ಸು ನೋಯಿಸಬಾರದೆಂದು ಬಿಟ್ಟಿರುವೆನು ದುರ್ಗವನ್ನೇ ಸುಟ್ಟು ಸೂರೆಗೊಳ್ಳಲು ಅಧಿ ಕಾರಪದ್ದ ನನಗೆ ಆ ಹೆಂಗಳೆಯರ ಅಂಗಸುಖವನ್ನು ಹೊಂದುವದು ದೊಡ್ಡ ಮಾತಾಗಬಹುದೇ? ಛೇ! ನಾನು ಮೂರ್ಖನು, ಸುಮ್ಮನೆ ಖುದಾನಿಗೆ ಮೊರೆ ಯಿಡುತ್ತಿರುವೆನು. ಈಗಲೇ ಅನಂಗಸೇನೆಯ ಮಂದಿರಕ್ಕೆ ಹೋಗಿ ಆಕೆಯು ಸಮ್ಮತಿಸದಿದ್ದರೂ ಆಕೆಯೊಡನೆ ಬಲಾತ್ಕಾರದಿಂದಲಾದರೂ ಮನಸೋಕ್ತವಾಗಿ ರಮಿಸುವೆನು ''

ಪ್ರಿಯವಾಚಕರೇ, ಹೀಗೆ ಯೋಚಿಸುವ ಈ ವ್ಯಕ್ತಿಯು ಯಾವುದೆಂಬದು ನಿಮ್ಮ ಕಲ್ಪನೆಯಲ್ಲಿ ತಟ್ಟನೆ ಬಂದು ಹೋಗಿರಬಹುದು ದೇಶ-ಕಾಲ ಪರಿಸ್ಥಿತಿ ಗಳನ್ನು ನೋಡದೆ, ಇಂಥ ವಿಷಯಲಂಪಟ ವಿಚಾರಗಳನ್ನು ತಲೆಯಲ್ಲಿ ತುಂಬಿ ಕೊಂಡು ಅದರ ಭಾರದಿಂದ ಘಾಸಿಯಾಗುವದು ದಾವಲಖಾನನಂಥ ವಿಷಯಾಂ ಧನಿಗಲ್ಲದೆ ಇನ್ನಾರಿಗಾದರೂ ಸಲ್ಲಬಹುದೇ? ಪ್ರಸ್ತುತದಲ್ಲಿ ಆ ವಿಷಯಾಂಧನು ಹೀಗೆ ಯೋಚಿಸಿ ಅಂಗರಕ್ಷಕರನ್ನು ಕೂಗಿದನು, ಮತ್ತು ಅವರಿಗೆ ಒಂದು ಸುಂದರ ಡೋಲಿಯನ್ನು ತರಹೇಳಿದನು ಕೂಡಲೆ ಸೇವಕರು ಡೋಲಿಯನ್ನು ಸಿದ್ಧಪಡಿಸಿದರು ಡೋಲಿಯು ಸಿದ್ಧವಾದದ್ದೊಂದೇ ತಡ, ಖಾನನು ಅದರಲ್ಲಿ ಕುಳಿತು ಧರ್ಮಸತ್ರಕ್ಕೆ ಅದನ್ನು ಹೊರಡಿಸಲಾಜ್ಞಾಪಿಸಿದನು

ಖಾನನ ಅಪ್ಪಣೆಯಂತೆ ಶೀಘ್ರಗಾಮಿಗಳಾದ ಭೋಯಿಗಳು ಡೋಲಿ ಯನ್ನು ಧರ್ಮಸತ್ರದ ಪಟಾಂಗಣದಲ್ಲಿ ತಂದಿಳಿಸಿದರು. ಹೀಗೆ ಅಕಸ್ಮಾತ್ತಾಗಿ ಖಾನನು ಬಂದದ್ದರಿಂದ ಕಾವಲುಗಾರರು ತಡವರಿಸುತ್ತ ಎದ್ದುನಿಂತು ಅವನಿಗೆ ಸಲಾಮುಮಾಡಿ ದೂರ ಸರಿದು ನಿಂತರು ಗೊರಕೆ ಹೊಡೆಯುತ್ತಿದ್ದ ಕಾವಲು ಗಾರರಂತೂ ತಮ್ಮ ಸಂಬಳಕ್ಕೆ ಎಲ್ಲಿ ನೀರು ಬರುವದೋ ಎಂದು ಅಂಜುತ್ತ ಕತ್ತಲೆಯನ್ನು ಆಶ್ರಯಿಸಿದರು. ಅನಂಗಸೇನೆಯನ್ನೇ ಲಕ್ಷಿಸುತ್ತಿದ್ದ ಖಾನನು

ಕಾವಲುಗಾರರ ಕಡೆಗೆ ವಿಶೇಷ ಲಕ್ಷ್ಯಗೊಡದೆ ಮಂದಿರವನ್ನು ಪ್ರವೇಶಿಸಿದನು. ಅವನು ಬಹು ತವಕದಿಂದ ಉಪ್ಪರಿಗೆಯನ್ನೇರಿ ಅಲ್ಲಿದ್ದ ಪರದೆಯನ್ನು ಓರೆಮಾಡಿ ತನ್ನ ಅರಗಿಳಿಯ ಮುದ್ದು ಮಾತುಗಳು ಕೇಳಬರುವವೋ ಎಂದು ನೋಡತೊಡಗಿದನು ಆ ಕಾಲಕ್ಕೆ ಅನಂಗಸೇನೆಯು ಮಲಗಿದ್ದು, ಆಕೆಯ ಬಳಿಯಲ್ಲಿ ಸುಮಿತ್ರೆಯು ಜಾಗರೂಕಳಾಗಿ ಕುಳಿತಿದ್ದಳು ಪರದೆಯನ್ನು ಯಾರೋ ಓರೆಮಾಡಿದಂತೆ ತೋರಲು ಸುಮಿತ್ರೆಯು ಆ ಕಡೆಗೆ ದಿಟ್ಟಿಸಿ ನೋಡಿದಳು ದೀಪದ ಸ್ವಚ್ಛಪ್ರಕಾಶದಲ್ಲಿ ಆಕೆಗೆ ಖಾನನ ಕರಾಳ ಗಡ್ಡಗಳು ಸ್ಪಷ್ಟವಾಗಿ ಗೋಚರಿಸಿದವು ಕೂಡಲೆ ಆ ಚದುರೆಯು ಎದ್ದು ನಿಂತು ಖಾನನನ್ನು ಬಹು ಗೌರವದಿಂದ ಆದರಿಸಿದಳು. ಸುಮಿತ್ರೆಯ ಪ್ರಸನ್ನ ಮುಖವನ್ನೂ ಆಕೆಯ ಆದರವನ್ನೂ ನೋಡಿ ಖಾನನು ಬೆಪ್ಪಾದನು ಅವನಿಗೆ ಸ್ವರ್ಗವು ಮೂರೇ ಬೆರಳು ಉಳಿದಂತಾಯಿತು ಇಂದಿನ ವರೆಗೆ ಅವನು ಎನಿಲ್ಲೆಂದರೂ ಹತ್ತೆಂಟುಸಾರೆ ಅನಂಗಸೇನೆಯ ಮಂದಿರಕ್ಕೆ ಬಂದಿದ್ದು, ಇಷ್ಟು ಸನ್ಮಾನವನ್ನು ಹೊಂದಿದ್ದು, ಇದೇ ಪ್ರಥಮವಾಗಿತ್ತು ಈ ದಿವಸದ ಸನ್ಮಾನದಿಂದಾದಷ್ಟು ಸಂತೋಷವು ಅವನಿಗೆ ಹಿಂದಿನ ಯಾವ ಸನ್ಮಾನಗಳಿಂದಲೂ ಆಗಿದ್ದಿಲ್ಲ ಅಂತೇ ಅವನು ಹೀಗೆ ಭ್ರಾಂತನಾಗಿ ತಾನು ಎಲ್ಲಿರುವೆನೆಂಬುದನ್ನು ಕೂಡ ತಿಳಿಯದೆ ಸುಮಿತ್ರೆಯು ತೋರಿಸಿದ ಪೀಠದಮೇಲೆ ಸೂತ್ರದ ಗೊಂಬೆಯಂತೆ ಕುಳಿತುಕೊಂಡನು

ತನ್ನ ಅರ್ಥಪೂರ್ಣವಾದ ನೋಟ, ನಗೆಮೊಗದ ಮಾಟ, ಮಂಜುಳ ಮಾತಿನ ಸವಿಯೂಟ ಇವುಗಳು ಖಾನನನ್ನು ಪೂರ್ಣವಾಗಿ ಮರುಳುಗೊಳಿಸಿದವೆಂದು ತಿಳಿಯಲು ಸುಮಿತ್ರೆಯು ಕೂಡಲೆ ಒಂದು ನಿಟ್ಟುಸಿರು ಬಿಟ್ಟು ಖಾನನನ್ನು ಕುರಿತು ನುಡಿದಳೇನಂದರೆ—"ಖಾವಿಂದರೇ ತಮ್ಮ ದಯೆಗೆ ಪಾತ್ರರಾದ ನಾವು ಯಾವ ಕೊರತೆಯೂ ಇಲ್ಲದೆ ಸುಖವಾಗಿ ಇರುವೆವು ಆದರೆ ನಮ್ಮ ಅವ್ವನವರಿಗೆ ಬೇನೆ ಮಾತ್ರ ಬಿಡದಾಗಿದೆ ವೈದ್ಯರ ಬಳಿಗೆ ಹೋಗಿ ಔಷಧ ತರಬೇಕೆಂದರೆ ಕಾವಲುಗಾರರು ಬಿಡುವದಿಲ್ಲ ಇದನ್ನು ತಮ್ಮ ಮುಂದೆ ಹ್ಯಾಗೆ ತಿಳಿಸಬೇಕೆಂದು ಮಾಡಿರಲು ಅನಾಯಾಸವಾಗಿ ತಾವೇ ಬಂದದ್ದು ಬಹಳ ಒಳಿತಾಯಿತು"

ಖಾನ—ಹೀಗೇನು? ಇದರ ಸುತ್ರಾಂ ಸುದ್ದಿ ಸಹ ನನಗೆ ಗೊತ್ತಿಲ್ಲವಲ್ಲ? ನಮ್ಮ ರಾಜವೈದ್ಯನನ್ನು ಕರೆಯಿಸಿ ಈಗಲೇ ತೋರಿಸುವೆನು ಸುಂದರೀ, ಇದುವರೆಗೆ ನಾನು ಈ ಕಡೆಗೆ ದುರ್ಲಕ್ಷ್ಯ ಮಾಡಿದ್ದಕ್ಕೆ ನನ್ನನ್ನು ಕ್ಷಮಿಸು.

ಸುಮಿತ್ರಾ—ಖಾವಿಂದರೇ, ಯಃಕಶ್ಚಿತ್ ದಾಸಿಯಾದ ನನ್ನ ಕ್ಷಮೆಯನ್ನು ಬೇಡಿಕೊಳ್ಳುವರೇ? ಈಗ ತಮಗೆ ವಿನಂತಿಮಾಡಿಕೊಳ್ಳುವದೇನಂದರೆ— ವೈದ್ಯರನ್ನು ಇಲ್ಲಿಗೆ ಕರೆಯಿಸಬಾರದು. ಯಾಕಂದರೆ ನಮ್ಮ ಅವ್ವನವರ ಸುಂದರ ರೂಪವು ಅನ್ಯರ ದೃಷ್ಟಿಗೆ ಬೀಳುವದು ಸರಿಯಾಗದು! ನನ್ನ ಮಾತು ಯೋಗ್ಯವೋ ಹೇಗೆಂಬದನ್ನು ಖಾವಿಂದರವರು ತಾವೇ ಯೋಚಿಸಬೇಕು

ಖಾನ—ನಿನ್ನ ಮಾತು ಒಂದು ಬಗೆಯಿಂದ ಯೋಗ್ಯವಾಗಿದೆ ಆದರೆ ವೈದ್ಯನು ಬರದಿದ್ದರೆ ನಿನ್ನ ಸ್ವಾಮಿನಿಯು ಬೇನೆಯು ವಾಸಿಯಾಗುವ ಬಗೆಯೆಂತು?

ಸುಮಿತ್ರಾ ಇದಕ್ಕೊಂದು ಉಪಾಯವಿದೆ.

ಖಾನ—ಯಾವ ಉಪಾಯುವದು?

ಸುಮಿತ್ರಾ—ನಾನು ವೈದ್ಯರ ಮುಂದೆ ಅವ್ವನವರ ಬೇನೆಯು ಲಕ್ಷಣಗಳನ್ನು ಹೇಳಿ ಅವರಿಂದ ತಕ್ಕ ಔಷಧ ಇಸಗೊಂಡು ಬರುವೆನು ನಾಲ್ಕೆಂಟುದಿನ ಹೀಗೆ ಮಾಡಿದರೆ ನಮ್ಮ ಅವ್ವನವರ ಬೇನೆಯು ಹಿಮ್ಮೆಟ್ಟುವದು. ಆದರೆ ಇಷ್ಟೊಂದು ಅನುಕೂಲವು ನಮಗೆಲ್ಲಿ ಬರಬೇಕು?

ಖಾನ(ವಿಸ್ಮಿತನಾಗಿ)—ಏನು, ಇದಕ್ಕೆ ನಿಮಗೆ ಅನುಕೂಲವಿಲ್ಲವೋ? ಏನು ಅನುಕೂಲವಾಗಬೇಕಂಬದನ್ನು ಹೇಳು, ಈ ದುರ್ಗಾಧಿಪತಿಯೇ ನಿಮ್ಮ ದಾಸನಾಗಿ ಎದುರಿಗೆ ನಿಂತಿರುವಾಗ ನಿಮಗಾವ ಕೊರತೆಯುದು?

ಸುಮಿತ್ರಾ—ಖಾವಿಂದರವರ ಅನುಗ್ರಹವನ್ನು ನೋಡಿ ನಮಗೆ ಸಂತೋಷವಾಗುತ್ತದೆ. ನಮಗೆ ಆಗತಕ್ಕ ಅನಾನುಕೂಲತೆಯೆಂದರೆ—ಈ ಕಾವಲುಗಾರರು ಯಾತಕ್ಕೂ ನಮ್ಮನ್ನು ಹೊರಗೆ ಬಿಡುವದಿಲ್ಲ. ದುರ್ಗಾಧಿಪತಿಗಳ ಅನುಗ್ರಹಕ್ಕೆ ಪಾತ್ರರಾದ ನಮಗೆ ಈ ತರದ ಸೆರೆಮನೆಯು ಅವಸ್ಥೆಯೇ?

ಖಾನ—ಸರಿ! ಸರಿ! ಸುಂದರೀ, ನಿನ್ನ ಮನೋಭಿಪ್ರಾಯವು ತಿಳಿಯಿತು. ನಿಮಗಿದ್ದ ಈ ತೊಂದರೆಯನ್ನು ದೂರಮಾಡುವೆನು ಇನ್ನು ಮುಂದೆ ಯಾವ ಕಾವಲುಗಾರರೂ ನಿಮಗೆ ಹೊರಗೆ ಹೋಗುವದಕ್ಕೆ ತಡೆಯನ್ನುಂಟುಮಾಡಲಾರರು.

ಸುಮಿತ್ರಾ—ಖಾವಿಂದರವರೇ, ತಾಸಿಗೆ ಮೂರುಸಾರೆ ಕಾವಲುಗಾರರು ಬದಲಾಯಿಸುವರು. ಒಬ್ಬರಿಗೆ ಅಪ್ಪಣೆ ಮಾಡಿದರೆ ಅದು ನಡೆಯುವ ಬಗೆ ಹ್ಯಾಗೆ? ಪುನಃ ನಮಗೆ ಸೆರೆಮನೆಯು ಹಾಡು ತಪ್ಪುವದಿಲ್ಲ.

ಖಾನ—ಕೋಮಲಾಂಗೀ, ಇನ್ನು ಮುಂದೆ ಈ ರೀತಿಯಾಗಿ ಮಾತ ನಾಡಬೇಡ ನಿಮಗೆ ನನ್ನ ಬೆರಳಿನಲ್ಲಿರುವ ಮುದ್ರೆಯುಂಗುರವನ್ನೇ ಕೊಡು ವೆನು. ಇದನ್ನು ತೋರಿಸಿದರೆ ನಿಮ್ಮನ್ನು ಯಾವ ಕಾವಲುಗಾರನೂ ತಡೆಯು ಲಾರನು ಇಷ್ಟೇ ಅಲ್ಲ, ನಮ್ಮ ಎಂಥ ದೊಡ್ಡ ಅಧಿಕಾರಿಯಾದರೂ ನಿಮಗೆ ಸನ್ಮಾನಮಾಡುವನು.

ಈ ರೀತಿಯಾಗಿ ಖಾನನು ಸುಮಿತ್ರೆಯೊಡನೆ ಮಾತನಾಡಿ ಅನಂಗಸೇನೆಗೆ ಸಂತೋಷವಾಗಬೇಕೆಂದು ತನ್ನ ಬೆರಳಿನೊಳಗಿನ ಮುದ್ರೆಯುಂಗುರವನ್ನು ತೆಗೆದು ಸುಮಿತ್ರೆಯ ಕೈಯಲ್ಲಿ ಕೊಟ್ಟನು, ಮತ್ತು ಆಕೆಯನ್ನು ಕುರಿತು—ಸುಮಿತ್ರಾ, ನನ್ನನ್ನು ಪರಕೀಯನೆಂದು ತಿಳಿಯಬೇಡ ನಿಮಗೆ ಅಂಥದೇನಾದರೂ ಪ್ರಸಂಗ ಬಂದರೆ, ಈ ಉಂಗರದ ಸಹಾಯದಿಂದ ನನ್ನ ಕಡೆಗೆ ಬಂದು ಎಲ್ಲ ಸಂಗತಿಯನ್ನು ಹೇಳು ಇಲ್ಲವೆ ನನಗೇ ದಿನಾಲು ಇಲ್ಲಿಗೆ ಬರಲಿಕ್ಕ ಅಪ್ಪಣೆ ಮಾಡಿದರೆ ಹಾಗೆ ಮಾಡುವೆನು, ಎಂದು ಹೇಳಿದನು ಅದಕ್ಕೆ ಸುಮಿತ್ರೆಯು ಹಾಸ್ಯವದನದಿಂದ— ಖಾವಿಂದರೇ, ಹಾಗೇನು ಬೇಡ, ಪ್ರಸಂಗ ಬಂದಾಗ ನಾನೇ ತಮ್ಮ ಬಳಿಗೆ ಬರು ವೆನು, ಎಂದು ಹೇಳಲು, ನಿದ್ರೆಯು ಬಾಧಿಸಹತ್ತಿದ್ದರಿಂದ ಖಾನನು ಅಲ್ಲಿಂದ ಹೊರಹೊರಟನು ಅನಂಗಸೇನೆಯನ್ನು ನೋಡಿಯಾದರೂ ಕಣ್ಣುಪ್ರೀತಿಯನ್ನು ಕಳಕೊಳ್ಳದೆ ಹಾಗೇ ಹೋಗಬೇಕಾದ್ದರಿಂದ ಅವನಿಗೆ ಅಸಹ್ಯವೇದನೆಯಾಗಲಾರಂ ಭಿಸಿತು. ಆದರೂ ಅವನು ಸುಮಿತ್ರ-ಅನಂಗಸೇನೆಯರ ಮನಸ್ಸು ತನ್ನ ವಿಷಯ ವಾಗಿ ಸುಪ್ರಸನ್ನವಾದ್ದರಿಂದ ಇಂದಿಲ್ಲ ನಾಳೆಯಾದರೂ ಆಕೆಯು ತನ್ನವಳೇ ಎಂಬ ಸಂತೋಷವನ್ನು ಹಚ್ಚಿಕೊಂಡು ರಾಣೀವಾಸಕ್ಕೆ ಹೋಗಿ ಪವಡಿಸಿದನು.

ಈ ಮೇರೆಗೆ ಸುಮಿತ್ರೆಯು ಖಾನನನ್ನು ಮರುಳುಗೊಳಿಸಿ, ಅವನಿಂದ ಮುದ್ರೆಯುಂಗರವನ್ನು ಕಸಿದುಕೊಂಡು ಅವನನ್ನು ಭ್ರಾಂತನನ್ನಾಗಮಾಡಿ ಹೊರ ಗಟ್ಟಿದಬಳಿಕ, ಅನಂಗಸೇನೆಯು ಸುಮಿತ್ರೆಯ ಬೆನ್ನಚಪ್ಪರಿಸಿ--ಸುಮಿತ್ರೇ, ನಿನ್ನಂಥ ಚತುರೆಯಾದ ಸಖಿಯಸಹಾಯವಿರಲು ನಾನಂಜುವ ಕಾರಣವಿಲ್ಲ. ಸಖೀ, ನೀನು ಎಷ್ಟು ಮಾಯಗಾತಿ೯ಯವ್ವಾ! ಆ ಖಾನನನ್ನು ಒಂದೇ ಕ್ಷಣದಲ್ಲಿ ಮರುಳುಗೊ ಳಿಸಿ ಬಿಟ್ಟೆಯಲ್ಲ! ಆ ಮೂರ್ಖನು ತನ್ನ ಸರ್ವಸ್ವವಾದ ಮುದ್ರೆಯುಂಗರವನ್ನು ನಿನ್ನ ವಶಮಾಡಿ ಹೋದನು ಇಂಥ ನರಪಶುಗಳಿಗೆ ದೇವರು ಇಷ್ಟು ಮಂದಬುದ್ಧಿ ಯನ್ನು ಹಾಕದಿದ್ದರೆ, ಅವರು ನಮ್ಮಂಥ ಎಷ್ಟೋಜನ ಸುದತಿಯರ ಗೋಳನ್ನು ಕಟ್ಟಿಕೊಳ್ಳುತ್ತಿದ್ದರು. ಇರಲಿ. ಆದದ್ದು ಒಳಿತಾಯಿತು. ಈ ಮುದ್ರೆಯ ಸಹಾ

ಯದಿಂದ ನಾವು ಈ ದುರ್ಗದಿಂದ ಸಹಜವಾಗಿ ಪಾರಾಗಬಹುದಾಗಿದೆ. ಇನ್ನು ಮುಂದೆ ಆ ನೀಚಯವನನ ಅಂಜಿಕೆಯನ್ನು ಬಿಟ್ಟುಬಿಡುತ್ತೇನೆ, ಎಂದು ನುಡಿದಳು. ತನ್ನ ಒಡತಿಗೆ ಈ ರೀತಿಯಾಗಿ ಆದ ಆನಂದವನ್ನು ನೋಡಿ ಸುಮಿತ್ರೆಗೂ ಬಹಳ ಸಂತೋಷವಾಯಿತು. ಬಳಿಕ ಅನಂಗಸೇನೆಯು ವಿನೋದಪರವಾಗಿ ಸಂಭಾಷಣ ಮಾಡತೊಡಗಿದಳು —"ಸಖೀ, ಸುಮಿತ್ರಾ, ನಿನ್ನ ಈ ಉಪಕಾರಕ್ಕೆ ಪ್ರತ್ಯುಪಕಾರವನ್ನೇನು ಮಾಡಲಿ? ನಾವು ಸುರಕ್ಷಿತವಾಗಿ ನಮ್ಮ ನಗರಿಗೆ ಹೋದವೆಂದರೆ ಆ ನಿನ್ನ ಸ್ವಾಮಿಯು ಮುಂದೆ ನಿನ್ನ ಕುಶಲತೆಯನ್ನು ಚನ್ನಾಗಿ ವರ್ಣಿಸಿ, ಅವನಿಂದ ನಿನಗೆ ಒಂದು ಚುಂಬನಕೊಡಿಸುವೆನು. ಯಾಕೆ ಸುಮಿತ್ರೇ, ಈ ಬಹುಮಾನವನ್ನು ನೀನು ಮನಮುಟ್ಟಿ ಬಯಸುವದಿಲ್ಲವೇ?

ಸುಮಿತ್ರೆ—ಅವ್ವನವರೇ, ನಿಮ್ಮ ಮಾತುಗಳು ನನಗೆ ತಿಳಿಯಲಾರವು. ಏನಾದರೂ ಕೊಡಿಸುವಿರಂತೆ, ಈಗ ರಾತ್ರಿಯಾಯಿತು, ನನ್ನ ಕಣ್ಣಲ್ಲಿ ನಿದ್ದೆಯು ಹಣಿಕಿ ಹಾಕುತ್ತಿರುವದು. ಸದ್ಯಕ್ಕೆ ನಿದ್ದೆಯು ಇನಾಮು ನನಗೆ ಬೇಕಾಗಿದೆ.

ಹೀಗೆ ಆ ಸ್ತ್ರೀಯರಿಬ್ಬರು ಮಾತನಾಡಿ ಸ್ವಲ್ಪ ಒರಗಿಕೊಳ್ಳಲು, ಅರುಣೋದಯವಾಯಿತು. ಕೋಳಿಗಳ ಕೂಗು ದುರ್ಗದಲ್ಲಿ ಪ್ರತಿಧ್ವನಿಗೊಂಡು ಘಟ್ಟಿಯಾಗಿ ಕೇಳಲಾರಂಭಿಸಿತು. ಆ ಕೂಗಿನಿಂದ ಸುಮಿತ್ರೆಯ ನಿದ್ರೆಯು ಹಾರಿ ಅವಳು ನಿಚ್ಚಳವಾಗಿಕಣ್ಣು ತೆರೆದು—ಅವ್ವಯ್ಯಾ! ಏನು ಘಾತುಕ ಕೋಳಿಯಿದು! ಅದಕ್ಕೇ ಯವನರು ಇದನ್ನು ಕೊಯ್ದು ತಿನ್ನುವರು! ನನ್ನ ನಿದ್ದೆಯನ್ನು ಹಾಳು ಮಾಡಿಬಿಟ್ಟಿತು, ಎಂದು ಒಟಗುಟ್ಟುತ್ತ ಎದ್ದು ನಿಂತಳು. ಅನಂಗಸೇನೆಯು ಮುದ್ರೆಯುಂಗರವು ದೊರೆತ ಸಂಭ್ರಮದಲ್ಲಿ ನಿದ್ದೆ ಇಲ್ಲದೆ ಏನೇನೋ ಮನೋರಾಜ್ಯದಲ್ಲಿ ವಿಲಕ್ಷಣ ಸುಖವನ್ನನುಭವಿಸುತ್ತಿದ್ದಳು. ಆಗ ಆಕೆಯು ಸುಮಿತ್ರೆಯ ಈ ಒಟ ಒಟ ಶಬ್ದಕ್ಕೆ ಎಚ್ಚತ್ತು—ಸುಮಿತ್ರೇ, ಹೀಗೇಕೆ ಎದ್ದು ನಿಂತೆ! ಎಂದಳು. ಸುಮಿತ್ರೆಯು ನಕ್ಕು ಅವಳ ಬಳಿಗೆ ಹೋಗಿ ಮೆಲ್ಲಗೆ—ದುರ್ಗದ ಹೊರಗೆ ಹೋಗಲಿಕ್ಕೆ ಎಲ್ಲೆಲ್ಲಿ ಮಾರ್ಗವಿರುವದೆಂಬದನ್ನು ನೋಡಿ ಬರುತ್ತೇನೆ, ಪೂರ್ಣ ಬೆಳಗಾದ ಮೇಲೆ ಹೋದರೆ ಯಾರಿಗಾದರೂ ಸಂಶಯಬರಬಹುದಾಗಿದೆ, ಎಂದು ಹೇಳಿ ಉಪ್ಪರಿಗೆಯನ್ನಿಳಿದು ಹೆಬ್ಬಾಗಿಲದ ಬಳಿಗೆ ಹೋದಳು. ಬೆಳಗಿನ ತಂಗಾಳಿಗೆ ಎಚ್ಚತ್ತ ಕಾವಲುಗಾರರು ಚಿಲಿಮೆಯನ್ನು ಹೊತ್ತಿಸಿ ಧೂಮ್ರಪಾನ ಮಾಡುತ್ತ ಕುಳಿತಿದ್ದರು. ಸುಮಿತ್ರೆಯು ನಿರ್ಭಯದಿಂದ ಬಾಗಿಲವನ್ನು ದಾಟಲು, ಆ ಮೈಸೊಕ್ಕಿನ ಕಾವಲುಗಾರರು ಅಚ್ಚ ಉರ್ದುಭಾಷೆಯಿಂದ ಆಕೆಯನ್ನು ಬೈಯುತ್ತ

ಅವಳ ಮುಂದೆ ನಿಂತುಕೊಂಡರು ಆ ದೈತ್ಯರ ಅಕರಾಳ-ವಿಕರಾಳ ಸ್ವರೂಪಕ್ಕೆ ಸುಮಿತ್ರೆಯು ಬೆದರಿದರೂ, ಬಳಿಯಲ್ಲಿ ಖಾನನ ಮುದ್ರೆಯಿದ್ದದರಿಂದ ಧೈರ್ಯ ತಾಳಿ ಅವಳು ಅದನ್ನು ಆ ರಾಕ್ಷಸರಿಗೆ ತೋರಿಸಿದಳು ಅದನ್ನು ನೋಡಿ ಆ ರಾಕ್ಷಸರ ಉದ್ದಾಮತನವು ಒಮ್ಮೆಲೆ ಇಳಿದುಹೋಗಿ, ಅವರು ಆಕೆಗೆ ಸಲಾಮು ಮಾಡಿ ದೂರ ಸರಿದು ನಿಂತರು ಸುಮಿತ್ರೆಯು ನಿರಾತಂಕವಾಗಿ ಸತ್ರದಿಂದ ಬಹು ದೂರದವರೆಗೆ ಹೋದಳು ಇಸ್ಟು ಕತ್ತಲು ಇದ್ದದರಿಂದ ಆಕೆಗೆ ದುರ್ಗದಲ್ಲಿ ಎಲ್ಲೆಲ್ಲಿ ಮಾರ್ಗಗಳಿವೆ? ಎಂಬದು ಸ್ಪಷ್ಟವಾಗಿ ಕಾಣಿಸಲೊಲ್ಲದು ಅವಳು ಒಂದು ದಾರಿಯನ್ನು ಹಿಡಿದು ಸಾಗಿರಲು, ಹಿಂದಿನಿಂದ ಯಾರೋ ಒಬ್ಬರು ಆಕೆಯ ಭುಜದ ಮೇಲೆ ಕೈಯನ್ನಿಟ್ಟರು ಮನುಷ್ಯನ ಹಸ್ತಸ್ಪರ್ಶವಾಗಲು, ಆ ಸುಶೀಲೆಯು ಒಮ್ಮೆಲೆ ಬೆಚ್ಚಿಬಿದ್ದು, ಹಿಂದಿರುಗಿದಳು ಆಗ ಅವಳ ಕಣ್ಣುಗಳು ಕೆಂಡದಂತಾಗಿದ್ದವು, ಹ್ಯದಯ ನಡಗುತ್ತಿತ್ತು ಮುಖಮುದ್ರೆಯು ಉಗ್ರವಾಗಿತ್ತು. ಅವಳು ಇನ್ನುಮೇಲೆ ತನ್ನ ಭುಜದ ಮೇಲೆ ಕೈಯಿಟ್ಟ ವ್ಯಕ್ತಿಯ ಸಮಾಚಾರವನ್ನು ತಕ್ಕೊಳ್ಳತಕ್ಕವಳು, ಅಷ್ಟರಲ್ಲಿ ಆಕೆಯ ಈ ಭಾವವನ್ನು ತಿಳಿದು ಆ ವ್ಯಕ್ತಿಯು —ಪ್ರಿಯೇ, ಇಷ್ಟೇಕೆ ಗಾಬರಿಯಾಗಿರುವಿ, ನಾನು ನಿನ್ನ ಪ್ರಿಯನಾದ ಶಂಕರರಡ್ಡಿಯು, ಬೆದರಬೇಡ, ಎಂದು ಮಾತನಾಡಿದನು 'ಶಂಕರರಡ್ಡಿಯು' ಎಂಬ ಹೆಸರನ್ನು ಕೇಳಿದ ಕೂಡಲೆ ದನಿಯು ಗುರುತು ಹಿಡಿದು ಸುಮಿತ್ರೆಯ ಮೋರೆಯು ಹಿಗ್ಗಿ ಇಷ್ಟಗಲವಾಯಿತು ಅವಳು ಅತ್ಯಂತ ಪ್ರೇಮದಿಂದ ಆತನ ಕೊರಳಿಗೆ ತೆಕ್ಕೆಬಿದ್ದು ಗಾಢಾಲಿಂಗನದಿಂದ ತಣಿಸಿದಳು ಕ್ಷಣಹೊತ್ತಿನವರೆಗೆ ಆ ಗಂಡ-ಹೆಂಡಿರಿಬ್ಬರ ಮುಖಗಳಿಂದ ಮಾತುಗಳೇ ಹೊರಡಲಿಲ್ಲ. ಬಳಿಕ ಗಾಢಾಲಿಂಗನವನ್ನು ಶಿಥಿಲಗೊಳಿಸಿ ಸುಮಿತ್ರೆಯು ನುಡಿದಳೇನಂದರೆ—ಪ್ರಿಯನೇ, ನೀನೂ ಇಲ್ಲಿಗೇ ಬಂದಿರುವಿಯೇನು? ನಮ್ಮ ನಗರಕ್ಕೆ ನಗರವೇ ಇಲ್ಲಿಗೆ ಬಂದ ಹಾಗೆ ತೋರುತ್ತದೆ ಇರಲಿ, ನೀನು ಇಂಥ ಕತ್ತಲಲ್ಲಿ ನನ್ನನ್ನು ಹ್ಯಾಗೆ ಗುರ್ತಿಸಿದಿ?

ಶಂಕರರಡ್ಡಿ—ಪ್ರಿಯೇ, ನೀನು ಸತ್ರದಲ್ಲಿ ಕಾವಲುಗಾರರಿಗೆ ಮುದ್ರೆಯುಂಗುರವನ್ನು ತೋರಿಸಿ ಇತ್ತ ಬಂದಾಗ ನಾನು ಅಲ್ಲೇ ಇದ್ದೆನು. ನಿನ್ನ ಹಾಗು ಅಪ್ಪನವರ ಬಂಧಮುಕ್ತತೆಗಾಗಿ ನಾವು ಇಲ್ಲಿಗೆ ಬಂದಿರುವೆವು. ನೀನು ಇತ್ತ ಬಂದದ್ದರಿಂದ ನಿನ್ನನ್ನು ಹಿಂಬಾಲಿಸಿ ಬಂದೆನು.

ಸುಮಿತ್ರೆ—ಅವ್ವಯ್ಯಾ- ಎಷ್ಟು ಸಾಹಸವು ನಿಮ್ಮದು? ಆ ಕಾವಲು ಗಾರರಿಗೆ ಅಂತಹತ್ತಗೊಡದೆ ಅವರಲ್ಲಿ ಹ್ಯಾಗೆ ಬೆರೆತುಕೊಂಡಿರುವಿರಿ?

ಶಂಕರರಡ್ಡಿ—ಮುಸಲ್ಮಾನ ಕಾವಲುಗಾರರೆಂದರೆ, ಕೇವಲ ಕ್ಷುದ್ರರು, ಅವರಿಗೆ ಸವಿಯುಣಿಸುಗಳೂ, ಸೇದುವದಕ್ಕೆ ಹಸರುತಂಬಾಕವು ಸಿಕ್ಕರೆ ಸಾಕು. ಅವರು ಯಾವ ಉಸಾಬರಿಗೂ ಬರುವದಿಲ್ಲ ಇಷ್ಟರಲ್ಲಿಯೇ ನಾನು ನಿಮ್ಮ ಬಳಿಗೆ ಬಂದು ನಿಮ್ಮನ್ನು ಇಲ್ಲಿಂದ ಹೊರಡಿಸಿಕೊಂಡು ಹೋಗತಕ್ಕವ ನಿದ್ದೆನು, ಆದರ ನಿನ್ನೆಯದಿನ ವಿಜಯನಗರದಿಂದ ಒಂದು ಶುಭವಾರ್ತೆಯು ಬಂದಿರುವದು. ಅದಕ್ಕೆ ತಡೆದಿದ್ದೇನೆ

ಸುಮಿತ್ರೆ —ಪ್ರಿಯನೆ ಆ ಶುಭವಾರ್ತೆಯು ಯಾವದು?

ಶಂಕರರಡ್ಡಿ —ರಾಯರು ಸ್ವತಃ ಈ ಕೋಟೆಯ ಮೇಲೆ ಸ್ವಾರೀ ಮಾಡು ವದಕ್ಕೆ ಹೊರಟಿರುವರಂತೆ! ಇನ್ನೊಂದು ವಾರದೊಳಗೆ ಅವರು ಇಲ್ಲಿಗೆ ಬರು ವರು. ಅವರು ಬಂದಮೇಲೆ ನಿಮ್ಮ ಎದುರಿಗೆ ಈ ನರಾಧಮರ ಚಂಡುಗ ಳನ್ನು ಹರಿಗಡಿದು, ವಿಜಯಶ್ರೀಯೊಡನೆ ದೇವಿಯವರನ್ನು ಕರದೊಯ್ಯಬೇಕೆಂದು ರಾಯರ ಮನೋದಯವಿರುವದಂತೆ!

ಸುಮಿತ್ರೆಯು—ಪ್ರಿಯಾ ಇದು ನಿಜವೇ?

ಶಂಕರರಡ್ಡಿ—ನಿನ್ನ ಮುಂದೆ ನಾನು ಸುಳ್ಳು ಹೇಳುವೆನೆ?

ಈ ಮೇರೆಗೆ ಅವರ ಸಂಭಾಷಣವು ನಡೆದಿರಲು, ಬೆಳ್ಳಗೆ ಬೆಳಗಾಯಿತು. ಮುಂದಿ ಯಾರಾದರೂ ಕಂಡಾರೆಂದು ಸುಮಿತ್ರೆಯು ಶಂಕರರಡ್ಡಿಗೆ ಬೇರೆ ಕಡೆಗೆ ಹೋಗ ಹೇಳಿ, ತಾನು ಸತ್ರದ ಕಡೆಗೆ ತಿರುಗಿದಳು.

# ೧೨ನೆಯ ಪ್ರಕರಣ.

## ಮುತ್ತಿಗೆ.

ಇಂದು ರಾಯಚೂರ ದುರ್ಗದಲ್ಲಿ ಕೋಲಾಹಲ! ದುರ್ಗದ ಹೊರಭಾಗದಲ್ಲಿ ಶತ್ರುಪಕ್ಷದ ಸೈನ್ಯವು ತಕತಕ ಕುಣಿಯುತ್ತಲಿರುವದು ಈಗೇನಾಗುವದೋ ಇನ್ನೊಂದು ತಾಸಿಗೇನಾಗುವದೋ ಎಂಬ ಅಂಜಿಕೆಯು ಪ್ರತಿಯೊಬ್ಬನ ಹೃದಯದಲ್ಲಿ ತುಂಬಿಕೊಂಡಿದೆ ವ್ಯಾಪಾರಸ್ಥರು ಇನ್ನು ಮುಂದೆ ತಮ್ಮ ಅಪಾರ ಸಂಪತ್ತಿಯು ಗತಿಯೇನೆಂದು ಚಡಪಡಿಸಹತ್ತಿರುವರು ಪತಿವ್ರತೆಯರು ತಮ್ಮ ಮಾನಧನದ ಸಂರಕ್ಷಣೆಯನ್ನು ಮಾಡೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತಿರುವರು. ಉಳಿದವರು ತಮಗಿಷ್ಟವಾದ ಸಂಗತಿಯನ್ನು ನೆನೆನೆನಿಸಿ ದುಃಖಿಸುತ್ತಿದ್ದರು ಈ ಪ್ರಕಾರ ಪುರವಾಸಿಗಳು ಬಡುಕುತ್ತಿರಲು ದುರ್ಗಾಧಿಪತಿಯಾದ ದಾವಲ್‌ಖಾನನು ತನ್ನ ಸಹಾಯಕ್ಕಾಗಿ ಬರುತ್ತಿರುವ ವಿಜಾಪುರದ ಅದಿಲ್‌ಶಹನಿಗೆ ತ್ವರೆಮಾಡುವದಕ್ಕೆ ಪತ್ರವನ್ನು ಕಳುಹಿಸಿ, ಎಂದಿನಂತೆ ತನ್ನ ಸುಖಮಯ ಮನೋರಾಜ್ಯದಲ್ಲಿ ತಲ್ಲೀನನಾದನು ಹೀಗೆ ಖಾನನು ಬಹಿರ್ವ್ಯಾಪಾರವನ್ನು ಮರೆತು ಕುಳಿತುಕೊಂಡಿರಲು, ಇತ್ತ ಆತನನ್ನೂ ರಾಮಯ ಮಂತ್ರಿಯನ್ನೂ ನಂಬಿಕೊಂಡು ಬಂದಿದ್ದ ಬೀದರದ ಬಾದಶಹನು ತನ್ನ ಗತಿಯು ಏನಾಗುವದೋ ಎಂದು ಚಡಪಡಿಸುತ್ತಿದ್ದನು ಅಷ್ಟರಲ್ಲಿ ಬೀದಿಯಲ್ಲಿ ಯಾವನೋ ಒಬ್ಬ ದೂತನು ಕೈಯಲ್ಲಿ ಒಂದು ಲಕ್ಕೋಟೆಯನ್ನು ಹಿಡಿದುಕೊಂಡು ನೆಟ್ಟಗೆ ಬಾದಶಹನ ಮಂದಿರವನ್ನು ಹೊಕ್ಕು ಅಲ್ಲಿದ್ದ ಜಾಸೂದನ ಕೈಯಲ್ಲಿ ಆ ಪತ್ರವನ್ನು ಕೊಟ್ಟನು. ಜಾಸೂದನು ಅದನ್ನು ಲಗಬಗೆಯಿಂದ ಒಯ್ದು ಏಕಾಂತದಲ್ಲಿ ಕುಳಿತಿದ್ದ ಬಾದಶಹನ ಮುಂದೆ ಇಟ್ಟನು ಚಿಂತಾಭರದಿಂದ ಬೇಸರಗೊಂಡ ಆ ಬಾದಶಹನು ಆ ಪತ್ರವನ್ನು ಮೆಲ್ಲಗೆ ತಕ್ಕೊಂಡು ಕೇವಲ ಔದಾಸೀನ್ಯದಿಂದ ಅದನ್ನು ಓದತೊಡಗಲು, ಓದುತ್ತ ಹೋದಂತೆ ಅವನ ಮುಖಲಕ್ಷಣವು ಬೇರೆಯಾಗತೊಡಗಿತು. ಅವನು ಪತ್ರವನ್ನು ಒಮ್ಮೆ ಪೂರ್ಣವಾಗಿ ಓದಿ ಮುಗಿಸಿ —ಎಲ! ಇದೇನು?

ಈಗಿಂದೀಗಲೆ ಬಂದರೆ ನಿಮಗೆ ರಾಜಕುಮಾರಿಯ ಲಾಭವಾಗುವದೆಂದು ರಾಮಯನು ಬರೆದಿದ್ದಾನಲ್ಲ? ಉದಯಗಿರಿಯ ರಾಜಪುತ್ರಿಯು ನನ್ನನ್ನು ವರಿಸಲು ಸಮ್ಮತಿಸಿರಬಹುದೇನು? ಇದು ಸ್ವಪ್ನವಲ್ಲವಷ್ಟೇ? ಎಂದು ನುಡಿದು ಮತ್ತೊಮ್ಮೆ ಪತ್ರವನ್ನು ಓದಿದನು ಈ ಎರಡನೆಯ ವಾಚನದಿಂದ ಅವನ ನಂಬಿಗೆಯು ಮತ್ತಷ್ಟು ದೃಢವಾಯಿತು ಕೂಡಲೆ ಅವನು ಕಾಲುಗಳಿಗೆ ಪಾಯಜಾಮೆಯನ್ನು ಏರಿಸಿದನು, ಮೈಯಲ್ಲಿ ಕಿನಕಾಪಿನ ಉದ್ದಂಗಿಯನ್ನು ತೊಟ್ಟು ತಲೆಗೆ ಮುಸಲ್ಮಾನೀ ರೀತಿಯ ಮುಂಡಾಸವನ್ನು ಹಾಕಿಕೊಂಡು ಒಳ್ಳೇ ಆಡಂಬರದಿಂದ ಡೋಲಿಯಲ್ಲಿ ಕುಳಿತು ಕರಯಬಂದಿದ್ದ ಸೇವಕನನ್ನು ಹಿಂಬಾಲಿಸಿ ನಡೆದನು ಆ ದೂತನು ಒಳ್ಳೇ ವೇಗದಿಂದ ನಡೆದು, ಸಾಂಕೇತಿಕ ಸ್ಥಳಕ್ಕೆ ಹೋಗಿ ಮುಟ್ಟಿದನು ಬಳಿಕ ಖಾನನು ಡೋಲಿಯಿಂದಿಳಿದು ರಾಮಯಮಂತ್ರಿಗಳೆಲ್ಲಿ? ಎಂದು ನುಡಿಯುತ್ತ ಆ ವಿಶಾಲವಾದ ದಿವಾಣಖಾನೆಯನ್ನು ಪ್ರವೇಶಿಸಿ ಅಲ್ಲಿದ್ದ ಸುಂದರ ಪೀಠದಮೇಲೆ ಕುಳಿತುಕೊಂಡನು

ಬಾದಶಹನು ಕುಳಿತ ಬಳಿಕ ಕೆಲವು ಹೊತ್ತಿನಮೇಲೆ ಓರ್ವ ಸುಂದರ ತರುಣಿಯು ಪರದೆಯನ್ನು ಓರೆಮಾಡುತ್ತ ನಗೆಮುಖದಿಂದ ಹೊರಗೆ ಬಂದಳು. ಆ ತರುಣಿಯನ್ನು ಕಂಡೊಡನೆ ಬಾದಶಹನ ಮೈಯಲ್ಲಿ ಭೂತಸಂಚಾರವಾದಂತಾಯಿತು ಅವನು ತತ್‌ಕ್ಷಣದಲ್ಲಿ ಕುಳಿತ ಸ್ಥಳದಿಂದೆದ್ದು ಆ ತರುಣಿಯನ್ನು ಆದರಿಸಿದನು. ತರುಣಿಯು ಒಳ್ಳೇ ರಸಿಕತೆಯಿಂದ ಅವನ ಮನಸ್ಸನ್ನಾಕರ್ಷಿಸಿಕೊಂಡು ತೀರ ಅವನ ಹತ್ತಿರಕ್ಕೆ ಹೋಗಿ ನಿಂತುಕೊಂಡಳು ಆ ಪ್ರಮದೆಯ ಸಾಮೀಪ್ಯದಿಂದ ಬಾದಶಹನು ಮನದಲ್ಲಿಯೇ ತನ್ನ ಧನ್ಯತೆಯನ್ನು ಕೊಂಡಾಡಿಕೊಳ್ಳತೊಡಗಿದನು ಇನ್ನು ಅವನು ಆ ತರುಣಿಯ ಬೆನ್ನಮೇಲೆ ಕೈಚಲ್ಲಿ ಏನೋ ಮಾತಾಡ ತಕ್ಕವನಿದ್ದನು. ಅಷ್ಟರಲ್ಲಿ ಆಕೆಯ ಕೈಬೆರಳುಂಗರವು ಕೆಳಕ್ಕೆ ಬೀಳಲು, ಆಕೆಯ ಪ್ರಸನ್ನತೆಗೋಸ್ಕರ ಅದನ್ನು ಎತ್ತಿಕೊಡಬೇಕೆಂದು ಆತನು ಬೊಗ್ಗಿ ಆ ಉಂಗರಕ್ಕೆ ಕೈನೀಡಿದನು. ಬಾದಶಹನು ಬೊಗ್ಗಲು ಅವನ ಬಹು ಉದ್ದವಾದ ಗಡ್ಡಗಳು ಸಹಜವಾಗಿ ನೆಲದ ಮೇಲೆ ಪಸರಿಸಿದವು. ಈ ಸಂಧಿಯನ್ನು ಬೇಕೆಂತಲೇ ಉಂಟುಮಾಡಿಕೊಂಡಿದ್ದ ಆ ತರುಣಿಯು ನೆಲದಮೇಲೆ ಚಲ್ಲುವರಿದ ಆ ಗಡ್ಡಗಳನ್ನು ತಡವಿಲ್ಲದೆ ಕಾಲಿನಿಂದ ಗಟ್ಟಿಯಾಗಿ ಮೆಟ್ಟಿದಳು. ಬಾದಶಹನು ಕೊಸರಿಕೊಳ್ಳಬೇಕೆನ್ನುವಷ್ಟರಲ್ಲಿ ಹಿಂದಿನಿಂದ ಯಾರೋ ಅವನ ಬೆನ್ನಮೇಲೆ ಬಡಿಗೆಯ ಪೆಟ್ಟುಗಳನ್ನು ಹಾಕಿದರು. ಆ ಬಲವಾದ ಹೊಡತಕ್ಕೆ ಖಾನನ ಟೊಂಕವು

ನೋಡಿದಾಗಲು ಎದ್ದುನಿಂತು ಟೊಂಕವನ್ನು ಹಿಡಿದು—ಯಾ ಅಲ್ಲಾ! ಎಂದು ಉಚ್ಚರಿಸುತ್ತಿರಲು, ಅವನ ಗಡ್ಡಗಳು ಬೊಡ್ಡಿಯವರೆಗೆ ಕತ್ತರಿಸಲ್ಪಟ್ಟವು. ಎದುರಿಗಿದ್ದ ತರುಣಿಯು ತರುಣಿಯಾಗಿರದೆ, ಶತ್ರುಪಕ್ಷದ ತರುಣನಾಗಿದ್ದನು ಘಾತವಾಯಿತೆಂದು ಬಾದಶಹನು ಗಾಬರಿಯಾಗುತ್ತಿರಲು, ಎದುರಿಗಿದ್ದ ತರುಣನು ಎತ್ತಲೋ ಮಾಯವಾದನು ಕೂಡಲೆ ಬಾದಶಹನು ಅಲ್ಲಿಂದ ಕಾಲ್ತೆಗೆದು ತನ್ನ ಬಿಡಾರವನ್ನು ಸೇರಿ ತನ್ನ ಪ್ರೀತಿಯ ಕುದುರೆಯನ್ನೇರಿ ಬೀದರದ ದಾರಿಯನ್ನು ಹಿಡಿದನು ಆದರೆ ಓಡಿಹೋಗಬೇಕೆಂಬ ಅವನ ಇಚ್ಛೆಯು ಸಫಲವಾಗದೆ ಅವನು ದುರ್ಗವನ್ನು ಸುತ್ತುವರಿದ ವಿಜಯನಗರದವರ ಸೆರೆಯಲ್ಲಿಬಿದ್ದುಕೊಂಡನು.

ಪ್ರಿಯವಾಚಕರೇ, ವಿಷಯಾಂಧರ ಬಾಳು ಎಂದಾದರೂ ಒಂದು ದಿನ ಹೀಗೆಯೇ ಆಗುವದು ನಿಶ್ಚಯವು ಉದಯಗಿರಿಯ ರಾಜಪುತ್ರಿಯ ವಿಷಯವಾಗಿ ಬಾದಶಹನಲ್ಲಿ ಆಶಾಂಕುರವನ್ನು ಉಂಟುಮಾಡಿದ್ದ ಫಕೀರನು ನಿಜವಾದ ಫಕೀರನಾಗಿರದೆ, ನಾವು ಹಿಂದೆ ಹೇಳಿದ ಗಜಪತಿಯ ಮಂತ್ರಿಯಾದ ಸದಾಶಿವನಾಗಿದ್ದನು. ಅವನು ಪದ್ಮೆಯನ್ನು ಬಿಡಿಸಿಕೊಳ್ಳುವದಕ್ಕೋಸರ ತಿಮ್ಮರಸನ ಮಂತ್ರಾಲೋಚನೆಯಂತೆ ರಾಯಚೂರ ದುರ್ಗಕ್ಕೆ ಬಂದಿದ್ದು, ಫಕೀರವೇಷದಿಂದ ಖಾನನ ಆಸ್ಥಾನವನ್ನು ಹ್ಯಾಗೆ ಆಕ್ರಮಿಸಿದ್ದನೆಂಬದು ನಿಮಗೆ ಗೊತ್ತಿರುವದು. ಅವನು ರಾಮಯನ ತಂತ್ರಕ್ಕೆ ಪ್ರತಿತಂತ್ರಗಳನ್ನು ಹೂಡಿ ಅವನನ್ನು ಸರ್ವತೋಪರಿಯಿಂದ ಮುಖಭಂಗಿತನನ್ನಾಗ ಮಾಡಿ ಅವನ ಪಾರುಪತ್ಯ ಮಾಡಬೇಕೆಂದು ಹವಣಿಕೆ ಹಾಕಿದ್ದನು ಆದರೆ ತಿಮ್ಮರಸನ ಮಂತ್ರಾಲೋಚನೆಗಳ ಪ್ರಭಾವದಿಂದಲೋ ಅಥವಾ ಕನ್ನಡಿಗರ ಕಾರಸ್ಥಾನವು ಮುಸಲ್ಮಾನರಿಗೆ ಗೊತ್ತಾಗುವ ಯೋಗವಿದ್ದದರಿಂದಲೋ ಅಥವಾ ದುರ್ಜನನಾದ ಖಾನನ ಸೆರೆಯಲ್ಲಿ ಸಿಕ್ಕ ಪತಿವ್ರತೆಯರ ಪುಣ್ಯಪ್ರಭಾವದಿಂದಲೋ ಅವನ ತಂತ್ರಗಳಿಗೆ ಯಶಸ್ಸು ದೊರೆತು ರಾಮಯ ಮಂತ್ರಿಯ ತಂತ್ರವು ನಾಟದಂತಾಯಿತು

ಈ ಮೇರೆಗೆ ಸದುದ್ದೇಶದಿಂದ ಉದ್ಯುಕ್ತನಾದ ಸದಾಶಿವನು ಬೀದರ ಬಾದಶಹನಿಗೆ ತಾನೇ ತನ್ನ ಕೈಮುಟ್ಟ ರಾಮಯಮಂತ್ರಿಯ ಹೆಸರಿನಿಂದ ಪತ್ರವನ್ನು ಬರೆದು ಅವನನ್ನು ಮೇಲೆ ಹೇಳಿದಂತೆ ದಿವಾಣಖಾನೆಗೆ ಬರಮಾಡಿಕೊಂಡುಶಂಕರ ರಡ್ಡಿಗೆ ಸ್ತ್ರೀವೇಷವನ್ನಳವಡಿಸಿ ಅವನ ಮುಖಾಂತರ ಬಾದಶಹನ ಅವಮರ್ಯಾದೆಯನ್ನುಮಾಡಿಸಿ ಕೈಬಿಟ್ಟ ಬಳಿಕ, ಈ ಸುದ್ದಿಯನ್ನು ತಡವಿಲ್ಲದೆ ದಾವಲ್‌ಖಾನನಿಗೆ

ರಾಮಯನ ಕಪಟ ತಂತ್ರಗಳಿಂದ ಹೀಗಾಯಿತೆಂದು ತಿಳಿಸಿದನು. ಚರರವುಖಾಂತರವಾಗಿ ಬೇದರದ ಬಾದಶಹನನ್ನು ರಾಮಯನು ಕರೆಯಿಸಿಕೊಂಡದ್ದೂ, ಆತನ ಗಡ್ಡಗಳನ್ನು ಕೊಯ್ದು ಅವನನ್ನು ಅಪಮಾನಗೊಳಿಸಿದ್ದೂ, ಮತ್ತು ಅವನು ಈ ಅವಮಾನವನ್ನು ಸಹಿಸದೆ ಬೇದರಕ್ಕೆ ಓಡಿಹೋಗಬೇಕೆಂದು ಹೊರಟು, ವಿಜಯನಗರದವರ ಸೆರೆಯಲ್ಲಿ ಸಿಕ್ಕದ್ದೂ ಖಾನನಿಗೆ ತಿಳಿದು, ಆತನಿಗೆ ಫಕೀರನ ಮಾತುಗಳು ನಿದರ್ಶನಕ್ಕೆ ಬಂದವು ಕೂಡಲೆ ಸಂತಪ್ತನಾದ ಆ ಯವನ ದುರ್ಗಾಧಿಪತಿಯು ರಾಮಯನನ್ನು ಹಿಡತರಿಸಿ ಅವನು ಶಿಕ್ಷೆಯುವಾಗಿಯೂ ವಿಜಯನಗರದವರಿಗೆ ಫಿತೂರ ಇರುವನೆಂದೂ, ಅವನು ಮೋಸ ಮಾಡಿ ಸವಿಮಾತನಾಡಿ ತಮ್ಮನ್ನು ಈ ರೀತಿ ಸಂಕಟಕ್ಕೆ ಗುರಿಮಾಡಿದನೆಂದೂ [illegible] ಅವನನ್ನು ತೋಪಿನ ಬಾಯಲ್ಲಿ ಕೊಟ್ಟು ಹಾರಿಸಬೇಕೆಂದು ಅಜ್ಞೆ ಮಾಡಿದನು. ಖಾನನ ಈ ಭಯಂಕರ ಅಪ್ಪಣೆಯನ್ನು ಕೇಳಿ ರಾಮಯನ ಹಲ್ಲಣವು ಹಾರಿಹೋಯಿತು ಮಾಡುತ್ತಾನೇನು? ತಾನಾಗಿಯೇ ಆತನ ಆಶ್ರಯವನ್ನು ಬೇಡಿ ಬಯಸಿ ಬಂದಿದ್ದನು ಆದರ ದೈವವು ಪ್ರತಿಕೂಲವಾದದ್ದರಿಂದ, ಅದೇಕೆ ಅವನ ದುಷ್ಟವಾಸನೆಯೇ ಅವನಿಗೆ ಮುಳುವಾದ್ದರಿಂದ ಈ ರೀತಿ ಅವನು ಖಾನನ ಶಿಕ್ಷೆಗೆ ಗುರಿಯಾಗಬೇಕಾಯಿತು

ಇಳಿಹೊತ್ತಿನ ಸಮಯ ವಿಜಯನಗರದವರ ಮುತ್ತಿಗೆಯಿಂದ ಊರಲ್ಲಿ ಯಾರಿಗೂ ಸಮಾಧಾನವಿದ್ದಿಲ್ಲ ಕೊಲೆಗಡಕರು ರಾಮಯನನ್ನು ವಧಸ್ಥಾನಕ್ಕ ಕರೆದೊಯ್ಯುತ್ತಿದ್ದರು ಆಗ ಆತನಿಗೆ ವಧ್ಯಲಕ್ಷಣಯುಕ್ತವಾದ ವಸ್ತ್ರಗಳನ್ನು ಉಡಿಸಿದ್ದರು. ಕೊರಳಲ್ಲಿ ಕಣಗಿಲ ಹೂಮಾಲೆಗಳನ್ನು ಒಂದರಮೇಲೊಂದರಂತೆ ಹಾಕಿದ್ದರು. ಅವನ ತಲೆಯಮೇಲೆ ಯಾವ ಬಗೆಯ ಶಿರೋವೇಷ್ಟನವೂ ಇದ್ದಿಲ್ಲ. ಕಾಲಲ್ಲಿ ಜೋಡುಗಳಿದ್ದಿಲ್ಲ ಡಂಗುರದವನು ಅವನ ಅಪರಾಧವನ್ನು ಸಾರುತ್ತ ಅವನ ಮುಂದೆ ನಡೆದಿದ್ದನು ಎಷ್ಟೋ ಜನರು ಆತನಿಗೆ ಪ್ರಾಪ್ತವಾದ ಈ ಸ್ಥಿತಿಯನ್ನು ಕಂಡು ಮರಮರನೆ ಮರುಗುತ್ತಿದ್ದರು ಕೆಲವರು "ಮಾಡಿದವರು ಉಣ್ಣುವರು ಮಣೆಯಂಥ ಕಡಬು" ಎಂಬ ಗಾದೆಯನ್ನು ಹೇಳುತ್ತ ಅವನ ದುಃಖದ ವಿಷಯವಾಗಿ ಉಪಹಾಸ ಮಾಡುತ್ತಿದ್ದರು. ಹೀಗೆ ಹಲವರು ಹಲವು ಬಗೆಯ ಉದ್ಗಾರಗಳನ್ನು ತೆಗೆಯುತ್ತಿರಲು, ರಾಮಯನ ಮೆರವಣಿಗೆಯು ಅವನ ಪರಿವಾರವಿರುವ ಮಂದಿರದ ಸಮೀಪಕ್ಕೆ ಬಂದಿತು ಆಗ ಅನಾಥವಾದ ಅವನ ಪರಿವಾರದ ಗೋಳನ್ನು ವರ್ಣಿಸಲಾಸಲ್ಲ! ಉದಯಗಿರಿಯ ರಾಜಪುತ್ರಿಯಂತೂ ದುಃಖಾಗ್ನಿಯಿಂದ ಕಮರಿ ಕಪ್ಪಿಟ್ಟು ಹೋಗಿದ್ದಳು. ಅವಳು ಎಷ್ಟು

ಚತುರೆಯಾಗಿದ್ದರೂ ತೀರಾ ಕೈಕಾಲು ಬಿಟ್ಟಳು. ರಾಮಯನು ಕೈಬಿಟ್ಟದ್ದರಿಂದ ತಾನು ರಾಕ್ಷಸರಾದ ಯವನರ ಕಾಮಾಗ್ನಿಗೆ ತುತ್ತಾಗುವ ಹೊತ್ತು ಒಂತೆಂದು ಘೋರವಾಗಿ ಅತ್ತಳು. ಆದರೆ ಆ ಕಠಿಣ ಪ್ರಸಂಗದಲ್ಲಿ ಅವಳನ್ನು ಸಮಾಧಾನ ಪಡಿಸುವವರಾರು? ಕಡೆಗೆ ತಾನೇ ದಯಾಘನನಾದ ಪರಮೇಶ್ವರನಿಗೆ ಮೊರೆ ಯಿಟ್ಟು ಗುಟುಕುವನ್ನು ನುಂಗಿಕೊಂಡಳು.

ಈ ರೀತಿಯಾಗಿ ಉದಯಗಿರಿಯ ರಾಜಕುವರಿಯೇ ಮೊದಲಾದವರು ಶೋಕಾಗ್ನಿಯಿಂದ ಬೆಂದು ಬೆಂಡಾಗುತ್ತಿರಲು, ರಾಮಯನನ್ನು ವಧ್ಯಸ್ಥಾನಕ್ಕೆ ತಂದರು. ಆ ಧೂರ್ತ ಮುತ್ಸದ್ದಿಯು ತನ್ನ ಮುತ್ಸದ್ದಿತನವನ್ನು ಹಳಿದುಕೊ ಳ್ಳುತ್ತ, ರಾಜಪುತ್ರಿಯು ಸುರಕ್ಷಿತಳೆಯು ಸಲುವಾಗಿ ಚಿಂತಿಸುತ್ತಿದ್ದನು ತನ್ನ ದೇಹವು ಭಸ್ಮೀಭೂತವಾಗಲಿ, ಚೂರು ಚೂರಾಗಲಿ ಅದರ ಪರಿವೆಯು ಅವನಿ ಗಿದ್ದಿಲ್ಲ. ಆಗ ಅವನ ಮನಸ್ಸಿನಲ್ಲಿ ಹಲವು ವಿಚಾರಗಳು ಬರಹತ್ತಿದವು ಇಂಥ ಸ್ಥಿತಿಯಲ್ಲಿ ಅವನು ಪ್ರಾಣಹಾರಕವಾದ ತೋಫಿನ ಮುಂದೆ ನಿಂತುಕೊಂಡನು. ಪ್ರತ್ಯಕ್ಷ ಕಾಲಿಯೋ ಎಂಬಂತೆ ಆ ದೊಡ್ಡ ತೋಫು ತೆರದ ಬಾಯಿಯಿಂದ ಬಹು ಭಯಂಕರವಾಗಿ ತೋರುತ್ತಿತ್ತು. ಅದರಲ್ಲಿ ಸಾಕಷ್ಟು ಮದ್ದು-ಗುಂಡು ಗಳನ್ನು ಹಾಕಿ ರಾಮಯನ ಶರೀರವನ್ನು ಉಸುಗಿನ ಕಣದಂತೆ ಹಾರಿಸುವ ಸಿದ್ಧ ತೆಯನ್ನು ಮಾಡಿದ್ದರು ಯಾವ ತೋಫಿನ ಬಾಯಲ್ಲಿ ರಾಮಯನನ್ನು ಹಾರಿಸ ಬೇಕೆಂದು ಖಾನನ ಅಪ್ಪಣೆಯಾಗಿತ್ತೋ, ಆ ತೋಫಿನ ಮೇಲೆ ಸದಾಶಿವನ (ಫಕ್ಕೀರನ) ಜನರೇ ಅಧಿಕಾರಿಗಳಾಗಿದ್ದರು ಅವರು ಸದಾಶಿವನ ಸಂಕೇತ ದಂತೆ ತೋಫಿಗೆ ಕೊಳ್ಳಿಯನ್ನು ಕೊಡುವಾಗ ರಾಮಯನನ್ನು ಅಲ್ಲಿಂದ ಹಿಡಿದೆ ಳೆದು, ಅವನನ್ನು ಪ್ರತಿಬಂಧಿಸಿ, ಖಾನನಿಗೆ ತಿಳಿಯದ ಸ್ಥಳದಲ್ಲಿರಿಸಿ, ಬಳಿಕ ತೋಫನ್ನು ಹಾರಿಸಿದರು ಈ ತೋಫಿನ ಸಪ್ಪಳದಿಂದ ರಾಮಯನು ಸತ್ತನೆಂದು ಖಾನನೂ, ಅವನ ಪರಿವಾರದವರೂ ತಿಳಿದರು ಕೋಟೆಗೆ ಮುತ್ತಿಗೆಯನ್ನಿ ಟ್ಟಿದ್ದ ವಿಜಯನಗರದವರು ರಾಮಯನು ಖಾನನ ನಿಗ್ರಹಕ್ಕೆ ಗುರಿಯಾಗಿ ಸದಾ ಶಿವನ ಸೆರೆಯಲ್ಲಿ ಸಿಕ್ಕನೆಂದು ತಿಳಿದರು ಈ ಸಂಕೇತದಿಂದ ಅವರು ಖಾನನನ್ನು ಹಣ್ಣಿಗೆ ತರುವದಕ್ಕೋಸ್ಕರ ಮುತ್ತಿಗೆಯನ್ನು ಮತ್ತಷ್ಟು ದೃಢಪಡಿಸಿ, ಒಳಗಿ ನವರು ಹೊರಗೆ ಬರದಂತೆಯೂ, ಹೊರಗಿನವರು ಒಳಗೆ ಹೋಗದಂತೆಯೂ ಏರ್ಪಡಿಸಿದರು. ವಿಜಯನಗರದವರ ಈ ವ್ಯವಸ್ಥೆಯಿಂದ ಖಾನನಿಗೆ ವಿಜಾಪುರ

ದವರ ಸುದ್ದಿಯು ತಿಳಿಯದಾಯಿತು ಆದರಿಂದ ಅವನು ಗಾಬರಿಯಾಗಿ ಪ್ರಸ್ತುತದ ಮುತ್ತಿಗೆಯ ವಿಷಯವಾಗಿ ಪಕೀರನಿಗೆ ರಮಲು ನೋಡೆಂದು ದುಂಬಾಲ ಬಿದ್ದನು.

---

## ೧೩ನೆಯ ಪ್ರಕರಣ.

### ವಿಜಯನಗರದವರಿಗೆ ವಿಜಯ.

---

ಫಕೀರನು ಖಾನನನ್ನು ಸಂತೈಸುತ್ತಲೇ ಇದ್ದನು ಆಯುತ ಸಮಯದಲ್ಲಿ ರಾಮಯನ ಅವಸ್ಥೆಯು ಹೀಗಾದ್ದರಿಂದ ಆತನಿಗೆ ಫಕ್ಕೀರನ ಹೊರತು ಮಂತ್ರಾಲೋಚಕರೇ ಇಲ್ಲದಾಯಿತು ಫಕ್ಕೀರನು ತನ್ನ ಧರ್ಮಗುರುವೆಂದು ಖಾನನು ಅವನ ಮೇಲೆ ಅವಿಶ್ವಾಸ ಮಾಡಲಿಲ್ಲ ಆದ್ದರಿಂದ ಆ ಅಂಧವಿಶ್ವಾಸವೇ ಅವನ ನಾಶಕ್ಕೆ ಕಾರಣವಾಯಿತು.

ವಿಷಯಾಂಧನಾದ ಖಾನನು ಅನಂಗಸೇನೆಯ ಮೇಲಿನ ಮೋಹದಿಂದ ಸುಮಿತ್ರೆಯ ಮಾತಿಗೆ ಮರುಳಾಗಿ, ಆಕೆಗೆ ತನ್ನ ಮುದ್ರೆಯುಂಗುರವನ್ನು ಸಮರ್ಪಿಸಿ ಬಂದಿದ್ದನಷ್ಟೇ, ಕಾಮುಕನಾದ ಅವನಿಗೆ ಅದರ ಮುಂದಿನ ಪರಿಣಾಮವೇನಾದೀತೆಂಬುದು ಕನಸು-ಮನಸುಗಳಲ್ಲಿ ಸಹ ಬರಲಿಲ್ಲ. ಆದರೆ ಅನಾಯಾಸವಾಗಿ ದೊರೆತ ಈ ಅನುಕೂಲ ಪ್ರಸಂಗವನ್ನು ಫಕೀರ ವೇಷಧಾರಿಯಾದ ಸದಾಶಿವ ಮಂತ್ರಿಯು ಉಪಯೋಗಿಸಿಕೊಳ್ಳದೆ ಬಿಡಲಿಲ್ಲ. ಅವನು ಉರ್ದೂಭಾಷೆಯಲ್ಲಿ ಖಾನನು ಬರೆದಂತೆ ಪತ್ರ ಬರೆದು, ಅದನ್ನೂ, ಮುದ್ರೆಯುಂಗುರವನ್ನೂ ತನ್ನೊಬ್ಬ ವಿಶ್ವಾಸಿಕನಾದ ಚತುರದೂತನ ಕೈಯಲ್ಲಿ ಕೊಟ್ಟು, ದುರ್ಗದ ಪಶ್ಚಿಮ ದ್ವಾರರಕ್ಷಕನ ಕಡೆಗೆ ಕಳುಹಿದನು ದೂತನು ಅತ್ಯಂತ ತ್ವರೆಯಿಂದ ಅವನೆಡೆಗೆ ಹೋಗಿ ಪತ್ರವನ್ನು ಕೊಟ್ಟನು. ದ್ವಾರರಕ್ಷಕನು ಅದನ್ನು ಓದಿಕೊಂಡು— ನಿಮ್ಮಲ್ಲಿ ಮುದ್ರೆಯುಂಗುರವು ಎಲ್ಲಿದೆ? ಎಂದು ಕೇಳಿದನು. ಕೂಡಲೆ ದೂತನು

ಸ್ಫಟಿಕದ ಪೆಟ್ಟಿಗೆಯಲ್ಲಿದ್ದ ಆ ಉಂಗುರವನ್ನು ತೋರಿಸಿದನು. "ನನ್ನ ಮುದ್ರೆ ಯುಂಗುರವನ್ನು ತೋರಿಸುವ ಈ ಸರದಾರನನ್ನು ಈವೊತ್ತು ಒಂದು ದಿನದಮಟ್ಟಿಗೆ ನಿನ್ನ ಅಧಿಕಾರದ ಸ್ಥಳದಲ್ಲಿ ನಿಯಮಿಸಿದ್ದರಿಂದ ತಡಮಾಡದೆ ಆತ ನಿಗೆ ನಿನ್ನ ಕೆಲಸದ ಎಲ್ಲ ವಿಚಾರಗಳನ್ನು ತಿಳಿಸಿ, ನೀನು ಮದ್ದಿನ ಖಜಾನೆಯ ಮೇಲ್ವಿಚಾರಣೆ ನೋಡತಕ್ಕದ್ದು ಪ್ರಸಂಗವು ಕಠಿಣವಿದ್ದದರಿಂದ ಈ ಕಾಲಕ್ಕೆ ಬಹಳ ಜಾಗರೂಕತೆಯಿಂದ ವರ್ತಿಸತಕ್ಕದ್ದು" ಎಂದು ಖಾನನು ಪತ್ರದಲ್ಲಿ ಬರೆದದ್ದಕ್ಕೂ, ದೂತನು ಉಂಗುರವನ್ನು ತೋರಿಸಿದ್ದಕ್ಕೂ ಮೇಳುಬಿದ್ದದರಿಂದ ಆ ದ್ವಾರರಕ್ಷಕನು ಅದರಂತೆ ವ್ಯವಸ್ಥೆಮಾಡಿ ಹೋದನು

ಈ ರೀತಿಯಾಗಿ ಸದಾಶಿವನ ಯುಕ್ತಿಯು ನಾಟಲು ಬಳಿಕ ಕೇಳುವದೇನು? ಗುಪ್ತಚಾರರು ಗಾಳಿಗಿಂತಲೂ ಶೀಘ್ರವಾಗಿ ಹೋಗಿ ತಿಮ್ಮರಸನಿಗೆ ಸುದ್ದಿಯನ್ನು ಮುಟ್ಟಿಸಿದರು ಈ ಸಮಯವನ್ನೇ ಕಾಯ್ದುಕೊಂಡು ಕುಳಿತಿದ್ದ ತಿಮ್ಮರಸನು ಸೈನ್ಯ ಹೊರಡಿಸಿ ಕೋಟೆಯ ಪಶ್ಚಿಮದ್ವಾರದ ಬಳಿಗೆ ತಂದನು. ಸಂಕೇತಕ್ಕನುಸರಿಸಿ ಪಶ್ಚಿಮದ್ವಾರದ ನೂತನ ಅಧಿಕಾರಿಯು ಬಾಗಿಲ ತೆರೆಯಲು ವಿಜಯನಗರದ ಸೈನ್ಯವು ಒಳನುಗ್ಗಿತು ಮುಸಲ್ಮಾನ ಸಿಪಾಯಿಗಳು ಯಾ, ಅಲ್ಲಾ ಎಂದೆನ್ನುತ್ತ ದಾರಿಸಿಕ್ಕ ಕಡೆಗೆ ಓಡತೊಡಗಿದರು.

ಫಕ್ಕೀರನು ಈ ರೀತಿಯಾಗಿ ವಿಜಯನಗರದ ಸೈನ್ಯವನ್ನು ಕೋಟೆಯೊಳಕ್ಕೆ ಕರೆದುಕೊಳ್ಳುತ್ತಿರಲು, ಇತ್ತ ಖಾನನು ಈ ಯಾವ ಸುದ್ದಿಯನ್ನೂ ಅರಿಯದೆ ದಿನಾಲು ಪದ್ಮೆಯ ಕಾಲ್ಪನಿಕ ಆಲಿಂಗನ ಸುಖವನ್ನು ಹೊಂದಿ ಹೊಂದಿ ಬೇಸತ್ತು ಈ ದಿನ ಆದದ್ದಾಗಲಿ, ಆಕೆಯ ಮಂದಿರಕ್ಕೆ ಹೋಗಿಯೇ ತೀರಬೇಕೆಂದು ನಿರ್ಧರಿಸುತ್ತಿದ್ದನು ರಾತ್ರಿಯು ಹೆಚ್ಚಾದಂತೆ ಆ ಯವನ ದುರ್ಗಾಧಿಪತಿಯ ನಿರ್ಧಾರವೂ ಹೆಚ್ಚು ಹೆಚ್ಚು ದೃಢಪಡಲಾರಂಭಿಸಿತು. ಕಡೆಗೆ ಅವನು ಅಂತಃಪುರವನ್ನು ತ್ಯಜಿಸಿ ಪದ್ಮೆಯನ್ನು ಇರಿಸಿದಲ್ಲಿಗೆ ನಡೆದನು ಅವನು ಆಕೆಯನ್ನು ತನ್ನ ದುರ್ಗದಲ್ಲಿ ತಂದಿಟ್ಟ ಬಳಿಕ ಹಿಂದೆ ಹೇಳಿದಂತೆ ಅದಿಲ್‌ಶಾಹಿಯ ಕಟ್ಟಪ್ಪಣೆಯ ಮೇರೆಗೆ ಇದುವರೆಗೂ ಆಕೆಯ ಮಂದಿರದ ಸನಿಯಕ್ಕೆ ಸಹ ಸುಳಿದಿದ್ದಿಲ್ಲ ಆದರೂ ಅವನು ಆಕೆಯ ವಿಷಯವಾಗಿ ಒಳ್ಳೇ ದಕ್ಷತೆಯನ್ನು ತಾಳಿದ್ದನು. ಆಕೆಗೆ ಯಾವದಕ್ಕೂ ಕೊರತೆಯಾಗದಂತೆ ವ್ಯವಸ್ಥೆಯನ್ನಿಟ್ಟಿದ್ದಲ್ಲದೆ ಆಕೆಯ ಕಾವಲಿಗಾಗಿ ಹನ್ನೆರಡು ಜನ ಖೋಜಾ ಜನರನ್ನು ನೇಮಿಸಿದ್ದನು.

ಅವರು ದಿನಾಲು ಸರತಿಯಂತೆ ಎಚ್ಚತ್ತು ಆಕೆಯ ಸನಿಯಕ್ಕ ಯಾರನ್ನೂ ಸುಳಿಯಗೊಡದಂತೆ ಕಾಯುತ್ತಿದ್ದರು

ಈ ದಿನ ಅಪರಾತ್ರಿಯ ಸಮಯದಲ್ಲಿ ಖಾನನು ಅಕಸ್ಮಾತ್ತಾಗಿ ಬರಲು, ಆ ಕಾಲಕ್ಕೆ ಪಹರೆಮಾಡುತ್ತಿದ್ದ ಖೋಜಾಜನರು ಎದ್ದು ನಿಂತು ಅವನನ್ನು ಆದರಿಸಿದರು ಖಾನನು ಅವರನ್ನು ಹತ್ತರ ಕರೆದು ಮೆಲ್ಲಗೆ ಪದ್ಮೆಯೇನುಮಾಡುತ್ತಿರುವಳೆಂದು ಕೇಳಿದನು ಇಂದಿನವರೆಗೆ ಖಾನನು ತನ್ನ ಸನಿಯಕ್ಕೆ ಸುಳಿಯದ್ದರಿಂದಲೂ ಅದಿಲ್‌ಶಾಹಿಯು ಬರುವವರೆಗೆ ಖಾನನು ತನ್ನ ಮಂದಿರಕ್ಕೆ ಬರುವ ಸಂಭವವಿಲ್ಲದ್ದರಿಂದಲೂ ಫಕೀರವೇಷಧಾರಿಯಾದ ಸದಾಶಿವನು ಧೈರ್ಯವ ಹೇಳುತ್ತಿದ್ದದರಿಂದಲೂ ಪದ್ಮೆಯು ಖಾನನ ಅಂಜಿಕೆಬಿಟ್ಟು ನಿಶ್ಚಿಂತೆಯಿಂದಿದ್ದಳು. ಅವಳಿಗೆ ಖಾನನ ಅಂಜಿಕೆಯು ಸ್ವಲ್ಪಾದರೂ ಉಳಿದಿದ್ದಿಲ್ಲ ಅವಳು ದಿನಾಲು ಸ್ವಾಭಾವಿಕವಾಗಿ ಮಲಗುವಂತೆ ಈ ದಿನವೂ ಮಲಗಿಕೊಂಡಿದ್ದಳು ಆಕೆಗೆ ಗಡದ್ದು ನಿದ್ದೆಹತ್ತಿಹೋಗಿತ್ತು ಆಕಯ ಸಖಿಯೂ ಮಲಗಿಕೊಂಡಿದ್ದಳು. ಖಾನನ ಪ್ರಶ್ನೆಗೆ ಆ ಖೋಜಾಜನರು ಪದ್ಮೆಯ ಈ ಸ್ವಾಭಾವಿಕ ದಿನಚರ್ಯೆವನ್ನು ಹೇಳುವದಲ್ಲದೆ, ಈಗ ಆಕೆಯೂ, ಆಕೆಯ ಗೆಳತಿಯೂ ನಿದ್ದೆಹೋಗಿರುವರೆಂದು ಹೇಳಿದರು ಬಳಿಕ ಖಾನನು ಪದ್ಮೆಯು ಮಲಗಿದಲ್ಲಿಗೆ ಹೋಗಿ ದೂರಿನಿಂದಲೇ ಹಣಿಕಿ ನೋಡಿ ಆಕೆಯ ಸಖಿಯನ್ನು ಗದ್ದಲವಾಗದಂತೆ ಆ ಕೋಣೆಯಿಂದ ಹೊರಹೊರಡಿಸಿರೆಂದು ಖೋಜಾ ಜನರಿಗೆ ಆಜ್ಞಾಪಿಸಿದನು.

ಖಾನನ ಮುಖದಿಂದ ಅಪ್ಪಣೆಯು ಹೊರಡುವದೊಂದೇ ತಡ, ಮೂರು ನಾಲ್ಕು ಖೋಜಾ ಜನರು ಟೊಂಕಕಟ್ಟಿ ಗಟ್ಟಿಯಾಗಿ ಉಸಿರು ಸಹ ಬಿಡದೆ, ವಸಂತಸೇನೆಯು ಮಲಗಿದ್ದ ಮಂಚವನ್ನೇ ಹೊತ್ತರು ಒಳ್ಳೇ ನಿದ್ದೆಯ ಸಮಯವಾದ್ದರಿಂದ ವಸಂತಸೇನೆಯು ಒಡಿದು ಚಲ್ಲಿದಹಾಗೆ ಬಿದ್ದುಬಿಟ್ಟಿದ್ದಳು ಆಕೆಗ ಈ ರಾಕ್ಷಸರ ಕೃತಿಯಿಂದ ಎಚ್ಚರವಾಗಲಿಲ್ಲ ಅವರು ಬಹು ಜೋಕಯಿಂದ ಆಕೆಯ ಮಂಚವನ್ನು ಬೇರೊಂದು ಕೋಣೆಯಲ್ಲಿರಿಸಿ ಕದವನ್ನುಮುಚ್ಚಿಬಿಟ್ಟರು. ಈ ಹಂಚಿಕೆಯಿಂದ ಪದ್ಮೆಯೊಬ್ಬಳೇ ಏಕಾಂತದಲ್ಲಿ ಉಳಿಯಲು, ಖಾನನ ಕಾಮಾಗ್ನಿಯು ಪ್ರಜ್ವಲಿಸಿತು ಅವನು ಆ ಖೋಜಾಜನರಿಗೆ ಅವರ ಸ್ಥಳಕ್ಕೆ ಹೋಗ ಹೇಳಿ, ತಾನು ಪದ್ಮೆಯ ಕೋಣೆಯನ್ನು ಸೇರಿ ಕದಮುಚ್ಚಿಕೊಂಡನು ಆಗ ಆ ಕಾಮಾಂಧನ ಮನಸ್ಸಿನಲ್ಲಿ ನಿದ್ದೆಹೋದ ಪದ್ಮೆಯನ್ನು ಎಚ್ಚರಗೊಳಿಸದೆ, ತನ್ನ

ಇಚ್ಛೆಯನ್ನು ನೆರವೇರಿಸಿಕೊಳ್ಳಬೇಕೆಂಬ ವಿಚಾರವು ತಲೆಹಾಕಿತು. ಹಾಗೆ ಮಾಡುವದರಿಂದ ಅಪರೂಪವಾಗಿ ದೊರೆತ ಈ ಯೋಗವು ವಿರಸವಾದೀತೆಂದು ಯೋಚಿಸಿ, ಆ ಸಾಹಸವನ್ನು ಬಿಟ್ಟು ಪದ್ಮಿಯನ್ನು ಎಚ್ಚರಗೊಳಿಸುವ ಉಪಾಯ ನಡಿಸಿದನು. ತನ್ನ ದವಡೆಯಲ್ಲಿ ಸಿಕ್ಕ ಪದ್ಮೆಯು ಅಸಮ್ಮತಿ ತೋರಿಸಲಿಕ್ಕಿಲ್ಲೆಂಬ ಭರವಸೆಯು ಅವನಿಗಿತ್ತು. ಹಾಗೆ ಆಕೆಯು ಸಮ್ಮತಿಸಿದಲ್ಲಿ ಆಗಲೆ ಕಾಜಿಯನ್ನು ಕರೆಯಿಸಿ ಅವಳಿಗೆ ಮುಸಲ್ಮಾನೀ ದೀಕ್ಷೆಕೊಡಿಸಿ, ನಿಕಾಮಾಡಿಕೊಳ್ಳುವದು ಅವನ ಉದ್ದೇಶವಾಗಿತ್ತು. ಒಂದು ವೇಳೆ ತಾತ್ಕಾಲಕ್ಕೆ ನಿಕಾಮಾಡಿಕೊಳ್ಳುವ ಯೋಗ ಕೂಡಿಬರದಿದ್ದರೆ ತನ್ನ ಕಾಮೇಚ್ಛೆಯನ್ನಾದರೂ ಪೂರ್ಣಪಡಿಸಿಕೊಳ್ಳಬೇಕೆಂದು ಆತನ ಮನೋದಯವಾಗಿತ್ತು. ಅದಕ್ಕಾಗಿ ಅವನು ಅಷ್ಟೊಂದು ಸಾಹಸಪಟ್ಟು ಪದ್ಮೆಯನ್ನು ಎಬ್ಬಿಸುವ ಗೊಂದಲಕ್ಕೆ ಬಿದ್ದನು.

ನಿದ್ದೆಗಣ್ಣಿನಲ್ಲಿದ್ದ ಪದ್ಮೆಯು ಪುರುಷಹಸ್ತಸ್ಪರ್ಶದಿಂದ ಚಟ್ಟನೆದ್ದು ಕುಳಿತಳು. ಅವಳು ನಿಚ್ಚಳವಾಗಿ ಕಣ್ಣುತೆರೆಯಲು, ಎದುರಿಗೆ ಖಾನನು ಕಂಡನು. ಆಗ ಆಕೆಗೆ ಇದು ಸ್ವಪ್ನವೋ ಅಥವಾ ತಾನು ನಿಜವಾಗಿಯೂ ಖಾನನ ಬಳಿಯಲ್ಲಿ ಕುಳಿತಿರುವೆನೋ ಎಂಬದು ತಿಳಿಯದಾಯಿತು. ಕ್ಷಣಹೊತ್ತು ಅವಳು ಭ್ರಾಂತಳಾಗಿ ಅತ್ತಿತ್ತ ನೋಡಿದಳು. ಆಕೆಯು ಹೀಗೆ ಭ್ರಾಂತಿಷ್ಠಳಂತೆ ಮಾಡುವದನ್ನು ಕಂಡು ಖಾನನು ಅತ್ಯಂತ ದೈನ್ಯದಿಂದ ನುಡಿದನೇನಂದರೆ—ಪ್ರಿಯೇ ಪ್ರಾಣಸಖೀ, ನಿನ್ನ ಸಲುವಾಗಿ ನಾನು ಪ್ರಾಣಭಯವನ್ನೂ ಕೂಡ ಬಿಟ್ಟು ಬಂದಿರುವೆನು. ಅದಿಲ್‍ಶಾಹಿಯ ಆಜ್ಞೆಯನ್ನು ಮೀರಿರುವೆನು. ಈಗ ಪ್ರತ್ಯಕ್ಷ ವಿಜಯನಗರದವರು ಕೋಟೆಗೆ ಮುತ್ತಿಗೆಯನ್ನಿಕ್ಕಿದ್ದರೂ ಅದನ್ನು ಲೆಕ್ಕಿಸದೆ ಬಂದಿರುವೆನು. ಪ್ರಿಯೇ, ನಿನ್ನ ಹೊರತು ನನಗೆ ಒಂದೂ ಬೇಕಾಗಿರುವದಿಲ್ಲ. ನಾನು ನಿನ್ನ ಕೇವಲ ದಾಸಾನುದಾಸನಾಗಿರುವೆನು. ಇಷ್ಟು ದೈನ್ಯದಿಂದ ಬೇಡಿಕೊಳ್ಳುವ ನನ್ನನ್ನು ನೀನು ನಿನ್ನ ಕಡೆಗಣ್ಣಿನಿಂದ ನೋಡಿ ನನ್ನನ್ನು ಧನ್ಯನನ್ನಾಗ ಮಾಡಬಾರದೆ? ಸಖೀ ಸ್ತ್ರೀಯರು ಕೋಮಲ ಹೃದಯರೆಂಬ ಮಾತು ನಿನ್ನ ಈ ಕೃತಿಯಿಂದ ಸುಳ್ಳಾಗುವದಲ್ಲ?

ಈ ಪ್ರಕಾರ ಖಾನನು ಮಾತನಾಡಿ ಇಲ್ಲದ ಸಲಿಗೆಯನ್ನು ತೋರಿಸುತ್ತ ಆಕೆಯ ಭುಜದ ಮೇಲೆ ಕೈಯಿಡಹೋಗಲು, ಪದ್ಮೆಯ ಕಣ್ಣುಗಳು ಕೆಂಡದಂತಾದವು. ಅವಳಿಗೆ ನಡೆದ ಸಂಗತಿಯು ಹೊಳೆದು ಮೈಯಲ್ಲಿ ನಡುಗುಂಟಾಯಿತು.

ಆ ನಡುಗು ಅಂಜಿಕೆಯದೆನ್ನುವದಕ್ಕಿಂತ ಸಂತಾಪದ್ದೆಂದರೆ ಹೆಚ್ಚು ಶೋಭಿಸು ವದು. ಅವಳು ಮಂಚದಿಂದ ಚಟ್ಟನೆ ಕೆಳಗಿಳಿದು ದೂರ ಸರಿದು ನಿಂತು ಕೆರಳಿದ ನಾಗಿಣಿಯಂತೆ ಒಮ್ಮೆಲೆ ನುಡಿದಳೇನಂದರೆ—"ಮೂರ್ಖ, ಯಾರ ಮೈಮೇಲೆ ಬರುತ್ತೀ ಎಂಬದನ್ನು ಲಕ್ಷ್ಯದಲ್ಲಿಡು, ನಾನು ಗಜಪತಿಯ ಧರ್ಮಪತ್ನಿಯಿದ್ದೇನೆ. ನನ್ನ ಪಾತಿವ್ರತ್ಯಪ್ರಭಾವವು ನಿನ್ನನ್ನು ಅರಕ್ಷಣದಲ್ಲಿ ಸುಟ್ಟು ಭಸ್ಮೀಭೂತನನ್ನಾಗಿ ಮಾಡಿಬಿಟ್ಟೀತು ನಾನು ಈಗ ಒಬ್ಬಳೇ ಏಕಾಂತದಲ್ಲಿ ನಿನ್ನ ಕೈಯಲ್ಲಿ ಸಿಕ್ಕಿರುವೆ ನೆಂದು ನೀನು ಈ ಅಬಲೆಯ ಮೇಲೆ ಬಲುಮೆಮಾಡಬಹುದೆಂದುಎಣಿಸುತ್ತಿರಬಹು ದು, ಆದರೆ ಈಗ ನಾನು ಅಬಲೆಯಲ್ಲ, ನನ್ನ ಪಾತಿವ್ರತ್ಯವನ್ನುಕಾಪಾಡಲು ಪರಮಾ ತ್ಮನು ನನ್ನ ಬೆನ್ನಮೇಲಿರುವನು ಸುಮ್ಮನೆ ಬಂದದಾರಿಯಿಂದ ತಿರುಗಿಹೋಗು."

ಪದ್ಮೆಯು ಹೀಗೆ ತಿರಸ್ಕರಿಸಿ ಮಾತನಾಡಲು, "ಕಾಮಾತುರಾಣಾಂ ನಭ ಯನ್ನಲಜ್ಜಾ" ಎಂಬ ಸುಭಾಷಿತೋಕ್ತಿಯಂತೆ ನಾಚಿಕೆ ಮೊದಲಾದವುಗಳನ್ನು ಬಿಟ್ಟ ಆ ಖಾನನು ಮತ್ತೆ ಪದ್ಮೆಯನ್ನು ಕುರಿತು—ಪ್ರಿಯೆ, ಹೀಗೇಕೆ ಅಗಡುತನ ಮಾಡುವಿ? ನಿನ್ನ ಗಜಪತಿಯು ಅಡವೀಕೂಡಿ ಹೋದನು ಅವನನ್ನು ನೀನು ಈ ಜನ್ಮದಲ್ಲಿ ಕಾಣಲಾರೆ, ಸುಂದರೀ, ಈ ನಿನ್ನ ಸುಂದರ ತನುಲತೆಗೆ ನನ್ನಂಥ ಪುರುಷಶ್ರೇಷ್ಠನ ಆಶ್ರಯವು ಅನಾಯಾಸವಾಗಿ ದೊರೆತಿರಲು ನೀನು ಅದನ್ನು ನಿರಾಕರಿಸುವಿಯಾ? ಹೀಗೆ ನಿರಾಕರಿಸಿ ನಿನ್ನ ಅನುಪಮ ಸೌಂದರ್ಯವನ್ನು ವ್ಯರ್ಥವಾಗಿ ಮಣ್ಣುಪಾಲು ಮಾಡುವಿಯಾ? ವಿಚಾರ ಮಾಡಿನೋಡು ಬೇಗನೆ ನನಗೆ ಅನುಕೂಲಳಾಗು, ಇಲ್ಲದಿದ್ದರೆ ಎಂದು ನುಡಿಯುತ್ತಿರಲು, ಪದ್ಮೆಯು ಅತ್ಯಂತ ರೂಚ್ಚಿನಿಂದ—"ಮೂರ್ಖ, ಇಲ್ಲವಿದ್ದರೆ ಮುಂದೇನು? ಅನಾಥ ಹೆಂಗ ಸರ ಮೇಲೆ ಪೌರುಷವನ್ನು ತೋರಿಸುವ ನಿನ್ನಂಥ ಅಧಮನ ಪರಾಕ್ರಮಕ್ಕೆ ಬೆಂಕಿಹಚ್ಚಿತು ಅಂಥ ಪೌರುಷವಿದ್ದವನು ಕಳ್ಳನಂತೆ ಕೋಟೆಯೊಳಗೇಕೆ ಹೊಗ್ಗಿಕೂಂಡು ಕುಳಿತಿರುವಿ? ಮುತ್ತಿಗೆಹಾಕಿದ ಶತ್ರುಗಳ ಮೈಮೇಲೆ ಬೀಳ ಬಾರದೇ? ಮೂರ್ಖ, ಹೋಗು, ಸುಮ್ಮನೆ ಪೌರುಷಕೊಚ್ಚಿ ಬಾಯಿಹೊಲಸು ಮಾಡಿಕೊಳ್ಳಬೇಡ" ಎಂದು ಮಾತಾಡಿದಳು.

ಆಗ ಖಾನನು ಈಕೆಯು ಸಾಮೋಪಚಾರದಿಂದ ಹಾದಿಗೆ ಬರುವದಿಲ್ಲೆಂದು ತಿಳಿದನು, ಮತ್ತು ತನ್ನ ಮನೋಇಚ್ಛೆಯಂತೆ ನಡೆಯಲು ಉದ್ಯುಕ್ತನಾದನು. ಆ ನೀಚನು ಆ ಅಬಲೆಯ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದು—"ಯಾಕೆ ಈಗಲಾದರೂ ನನಗನುಕೂಲೆಯಾಗುವೆಯೋ ಅಥವಾ ನನ್ನ ಇಚ್ಛೆಗೆ ಬಂದಹಾಗೆ

ನಡೆಯುಲಿಲೋ'' ಎಂದು ಗದ್ದರಿಸಿ ಆಕೆಯ ನೆರಗನ್ನು ಕೆಳಕ್ಕೆ ಜಗ್ಗಿದನು. ಪಾಪ! ಆ ಅನಾಥೆಯು ಈಗ ಪೂರಾ ಕೈಕಾಲುಗೆಟ್ಟಳು. ಅವಳ ಹೌಹಾರಿ ಹೋಯಿತು. ಇನ್ನು ಈ ನೀಚನು ತನ್ನ ಮಾನಭಂಗ ಮಾಡದೆ ಬಿಡನೆಂದು ಭಾವಿಸಿ, ಪರಮಾತ್ಮ ನನ್ನು ಕುರಿತು ಗಟ್ಟಿಯಾಗಿ ಕೂಗಿದಳು. ಆಕೆಯ ಆ ಆರ್ತಭಾವದ ಕೂಗು ಪರಮಾತ್ಮನಿಗೆ ಕೇಳಿಸಿ ಅವನು ಓ ಕೊಟ್ಟನೋ ಎಂಬಂತೆ ಹೊರಗಿನಿಂದಯಾರೋ ಆಕೆಗೆ ಪ್ರತ್ಯುತ್ತರವಾಗಿ ಹಾ! ತಡೆ ಹೆದರಬೇಡ, ಪ್ರತ್ಯಕ್ಷ ಕಾಲನ ದವಡೆಯಲ್ಲಿ ದ್ದರೂ ನಿನ್ನನ್ನು ಬಿಡಿಸುವೆನು, ಎಂದು ನುಡಿದ ಸ್ವರವು ಕೇಳಿಸಿತು. ಉತ್ತರ ಕ್ಷಣದಲ್ಲಿಯೇ ''ಜಯಭುವನೇಶ್ವರಿ''ಎಂಬ ರಣಗರ್ಜನೆಯೂ ಕೇಳತೊಡಗಿತು. ಪದ್ಮೆಯ ಮಂದಿರದಲ್ಲಿ ಸಾವಿರಾರು ಜನರು ನುಗ್ಗಿದರು ಯಾವಾತನು ಪದ್ಮೆಗೆ ಪ್ರತ್ಯುತ್ತರ ಕೊಟ್ಟನೋ ಅವನು ಕೈಯೊಳಗೆ ಪಟ್ಟಾಕತ್ತಿಯನ್ನು ಹಿಡಿದುಕೊಂ ಡು ಕದವನ್ನು ದೂಡಿ ಪದ್ಮೆಯ ಕೋಣೆಯೊಳಗೆ ಧುಮುಕಿದನು. ಅಕಸ್ಮಾತ್ತಾಗಿ ಬಂದ ಈ ಜನರು ಯಾರೆಂಬದನ್ನು ತಿಳಿಯದೆ ಖಾನನು ತನ್ನ ಸುಖದಲ್ಲಿ ಮಣ್ಣು ಗೂಡಿದ್ದಕ್ಕೆ ಸಂತಪ್ತನಾದನು. ಅವನು ಬಾಗಿಲ ತೆರೆದ ಕೂಡಲೆ ತಿರುಗಿ ನೋಡಲು ಖಡ್ಗಧಾರಿಯಾದ ಫಕೀರನು ಕಂಡನು ತನ್ನ ಸುಖದಲ್ಲಿ ಮಣ್ಣು ಗೂಡಿಸಿದ ಮಹಾನೀಚನು ಇವನೇ ಎಂದು ಖಾನನು ಅವನ ಮೇಲೆ ಹಲ್ಲುತಿನ್ನ ಹತ್ತಿದನು. ಇನ್ನು ಅವನು ಫಕೀರನಿಗೆ ಮನಬಂದಂತೆ ಬೈಯುತಕ್ಕವನು ಅಷ್ಟ ರಲ್ಲಿ ಶತ್ರುಗಳು ಅವನನ್ನು ಸೆರೆಹಿಡಿದು ಅತ್ತಿತ್ತ ಉಲುಕಲು ಸಹ ಬಾರದಂತೆ ಪ್ರತಿ ಬಂಧಿಸಿದರು

ಪ್ರಿಯವಾಚಕರೇ, ಹೀಗೆ ಅಕಸ್ಮಾತ್ತಾಗಿ ಒಂದು ಪದ್ಮೆಯ ಪಾತಿವ್ರತ್ಯ ವನ್ನು ರಕ್ಷಿಸಿ, ಖಾನನ ದೌರ್ಜನ್ಯಕ್ಕೆ ತಕ್ಕ ಪ್ರಾಯಶ್ಚಿತ್ತವನ್ನುಂಟುಮಾಡಿದ ವರು ಯಾರೆಂಬದು ನಿಮ್ಮ ಮನಸ್ಸಿನಲ್ಲಿ ತಟ್ಟನೆ ಬಂದು ಹೋಗಿರಬಹುದು. ಈ ಪ್ರಕರಣದ ಪ್ರಾರಂಭದಲ್ಲಿ ಬರೆದಂತೆ ರಾಯಚೂರ ದುರ್ಗವನ್ನು ಪಶ್ಚಿಮ ದ್ವಾರದಿಂದ ಪ್ರವೇಶಮಾಡಿದ ವಿಜಯನಗರದ ದಂಡಾಳುಗಳೇ ಕೋಟೆಯಲ್ಲೆಲ್ಲ ಹಬ್ಬಿ ಹರಿಬಿದ್ದು, ಖಾನನ ಸೈನಿಕರನ್ನು ನಾಶಗೊಳಿಸಲಾರಂಭಿಸಿದರು. ಅವರಲ್ಲಿ ಕೆಲವರು ಶಂಕರರಡ್ಡಿಯನ್ನು ಮುಂದೆಮಾಡಿಕೊಂಡು ಅನಂಗಸೇನೆಯ ಬಿಡು ಗಡೆಗಾಗಿ ಅವಳ ಮಂದಿರಕ್ಕೆ ಹೋದರು. ಫಕೀರ ವೇಷಧಾರಿಯಾದ ಸದಾ ಶಿವನು ಕೆಲಜನ ಸೈನಿಕರೊಡನೆ ಪದ್ಮೆಯ ಮಂದಿರದವರೆಗೆ ಬರಲು, ಮೇಲೆ ಬರೆ

ದಂತೆ ಆಕೆಯ ಆರ್ತಧ್ವನಿಯು ಅವನಿಗೆ ಕೇಳಿಸಿತು. ಕೂಡಲೆ ಅವನು ಏನೋ ಘಾತವಾಯಿತೆಂದು ಅವಸರದಿಂದ ಬರಲು ಖಾನನ ನೀಚ ಕೃತ್ಯವು ಕಂಡದ್ದರಿಂದ ಅವನಿಗೆ ತಕ್ಕ ಶಾಸನವನ್ನು ಮಾಡಿದನು.

ಖಾನನು ಶತ್ರುಗಳಿಗೆ ಸೆರೆಸಿಕ್ಕ ವಾರ್ತೆಯು ಹಾ ಹಾ ಅನ್ನುವಷ್ಟರಲ್ಲಿ ದುರ್ಗದಲ್ಲೆಲ್ಲ ಪಸರಿಸಿತು ವಿಜಯನಗರದ ಸೈನಿಕರ ಹೊಡತಗಳಿಂದ ಎಚ್ಚತ್ತ ಮುಸಲ್ಮಾನ ದಂಡಾಳುಗಳು ತುಬಾಕಿಗಳನ್ನೂ, ಭಲ್ಲ-ಬರ್ಚಿಗಳನ್ನೂ ಹುಡುಕಿ ಅವುಗಳನ್ನು ಸರಿಪಡಿಸುತ್ತಿರಲು, ಈ ಭಯಂಕರ ಸುದ್ದಿಯು ಅವರ ಕಿವಿವರೆಗೆ ಹೋಯಿತು. ಬಳಿಕ ಅವರ ಗೋಳಾಟವನ್ನು ಕೇಳುವದೇನು? ಹಿಂದುಗಳು ಎಗ್ಗಿಲ್ಲದೆ ಅವರನ್ನು ತುಂಡರಿಸಹತ್ತಿದರು ಕೋಟೆಯನ್ನು ಬಿಟ್ಟು ಓಡಬೇಕೆಂದು ಅವರು ಯಾವ ಬಾಗಿಲಿಗೆ ಹೋದರೂ ಅಲ್ಲಿ ವಿಜಯನಗರದ ದಂಡಾಳುಗಳೇ ಕಾವಲುಗಾರರಾಗಿದ್ದರು ತೋಫಖಾನೆಗಳನ್ನೆಲ್ಲ ಅವರೇ ವ್ಯಾಪಿಸಿದ್ದರು ರಾತ್ರಿಯ ಸಮಯವಾದ್ದರಿಂದ ಇದೇನು ಈ ಸೈತಾನರು ಭೂಮಿಯ ಹೊಟ್ಟೆಯೊಳಗಿಂದಲೇ ಹೊರಬಿದ್ದರೋ ಎಂಬ ಹಾಗೆ ಅವರಿಗೆ ತೋರಿತು ತಿಮ್ಮರಸನು ಸಾವಿರಾರು ಪಂಜುಗಳನ್ನು ಹಚ್ಚಿಸಿ ಮುಸಲ್ಮಾನ ದಂಡಾಳುಗಳನ್ನೆಲ್ಲ ಸೆರೆಹಿಡಿದು ಅವರ ಆಯುಧಗಳನ್ನೆಲ್ಲ ಸ್ವಾಧೀನಪಡಿಸಿಕೊಂಡನು ಅಷ್ಟರಲ್ಲಿ ಪದ್ಮೆಯ ಪಾತಿವ್ರತ್ಯವನ್ನು ರಕ್ಷಿಸಿ ಸದಾಶಿವನು ಅವನಲ್ಲಿಗೆ ಬಂದನು ಆಗ ಆ ಉಭಯ ಮಂತ್ರಿಗಳಿಗಾದ ಆನಂದವನ್ನು ವರ್ಣಿಸಲಾಸಲ್ಲ! ಅನಂಗಸೇನೆ-ಸುಮಿತ್ರೆಯರು ಸುರಕ್ಷಿತವಾಗಿ ನಮ್ಮ ಹಸ್ತಗತರಾದರೆಂದು ಶಂಕರರಡ್ಡಿಯು ಬಂದು ಹೇಳಿದನು ಈ ಹೆಂಗಳೆಯರ ಶೋಧಕ್ಕಾಗಿ ಬಂದಿದ್ದ ವಿಜಯನಗರದ ಸರದಾರರೆಲ್ಲರೂ ತಮ್ಮ ವೇಷಗಳನ್ನು ಕಿತ್ತೊಗೆದರು ಬೆಳಗು ಹರಿಯುವಷ್ಟರಲ್ಲಿ ದುರ್ಗದಲ್ಲಿ ವಿಜಯನಗರದ ಹಿಂದೂ ಪತಾಕೆಯು ಸ್ಥಾಪಿಸಲ್ಪಟ್ಟಿತು. ಬೆಳ್ಳಗೆ ಬೆಳಗಾದ ಮೇಲೆ ವಿಜಯನಗರದ ಸಾರ್ವಭೌಮರಾದ ಕೃಷ್ಣದೇವರಾಯರು ಮಂಗಲವಾದ್ಯಗಳು ಮೊಳಗುತ್ತಿರಲು, ಜಯಘೋಷ ಧ್ವನಿಯು ಕೇಳಬರುತ್ತಿರಲು, ದುರ್ಗಪ್ರವೇಶವನ್ನು ಮಾಡಿದರು ಈ ಪ್ರಕಾರ ವಿಶೇಷವಾಗಿ ಪ್ರಾಣಹಾನಿಯಾಗದೆ, ಯುಕ್ತಿಯಿಂದ ವಿಜಯವು ಸಿಕ್ಕದ್ದಕ್ಕೆ ರಾಯರಿಗೆ ತುಂಬಾ ಸಂತೋಷವಾಯಿತು. ಅವರು ಆ ಕೂಡಲೆ ದರ್ಬಾರವನ್ನು ನೆರೆಯಿಸಿ ಕೋಟೆಯನ್ನು ಕೈವಶಮಾಡಿಕೊಳ್ಳುವದರಲ್ಲಿ ಸಾಹಸಪಟ್ಟ ಎಲ್ಲ ಸರದಾರರ ಅಭಿನಂದನ

ಮಾಡಿ, ಅವರವರಿಗೆ ಉಚಿತವಾದ ಉಡುಗರೆಗಳನ್ನು ಕೊಟ್ಟರು. ಮತ್ತು ಪದ್ಮೆ-ವಸಂತಸೇನೆಯರಿಗೆ ಅಭಯವನ್ನು ಕೊಟ್ಟು, ಅನಂಗಸೇನೆ-ಸುಮಿತ್ರೆಯರನ್ನು ಕಾರುಣ್ಯಭಾವದಿಂದ ನೋಡಿದರು. ಅಂದು ಎಲ್ಲ ಕಡೆಗೂ ವಿಜಯೋತ್ಸವವೇ ಕಂಡುಬರತೊಡಗಿತು.

## ೧೧ನೆಯ ಪ್ರಕರಣ.

### ಉಪಸಂಹಾರ.

ರಾಯಚೂರ ದುರ್ಗವು ವಿಜಯನಗರದವರ ಹಸ್ತಗತವಾದ ಸುದ್ದಿಯು ಕಾಳ್ಗಿಚ್ಚಿನಂತೆ ಹಬ್ಬುತ್ತ ಆದಿಲ್‌ಶಾಹಿಯ ಕಿವಿಯವರೆಗೆ ಹೋಯಿತು ಅಷ್ಟೊತ್ತಿಗೆ ಆತನು ತನ್ನ ದಂಡಿನೊಡನೆ ರಾಯಚೂರ ಸಮೀಪಕ್ಕೆ ಬಂದಿದ್ದನು. ಇನ್ನು ಒಂದು ದಿನದ ಪಯಣ ಬೆಳೆಯಿಸಿದ್ದರೆ ಆತನು ದುರ್ಗವನ್ನು ಮುಟ್ಟಬಹುದಾಗಿತ್ತು ಆದರೆ ಅವನು ಚಾರರ ಮುಖಾಂತರವಾಗಿ ಎಲ್ಲ ಸಂಗತಿಗಳನ್ನು ಕೇಳಿಕೊಂಡು ಒಂದು ನಿಟ್ಟುಸಿರು ಬಿಟ್ಟನು ಬಳಿಕ ಅವನು "ಮಹಾಪರಾಕ್ರಮಿಯಾದ ಬೇದರ ಬಾದಶಹನು ಅವಮಾನಹೊಂದಿ ವಿಜಯನಗರದವರ ಸೆರೆಯಾಳಾದನು. ತಂತ್ರಕೋವಿದನಾದ ರಾಮಯನು ದಾವಲ್‌ಖಾನನ ಅವಿವೇಕತನದಿಂದ ಇಹಲೋಕದಿಂದ ಅಂತರಿಸಿದನು ಇದಲ್ಲದೆ ಆ ಖಾನನೂ ಆಮಿಷಕ್ಕೆ ಮನಸೋತು ಗಂಟಲೊಳಗೆ ಮೊಳೆಚುಚ್ಚಿಕೊಳ್ಳುವ ಮೀನುಗಳಂತೆ ಶತ್ರುಗಳ ಕೈವಶವಾದನು. ಇಷ್ಟೆಲ್ಲ ಕಾರ್ಯಗಳನ್ನು ಏನೊಂದೂ ಗದ್ದಲವಿಲ್ಲದೆ ನೆರವೇರಿಸಿಕೊಳ್ಳಬೇಕಾದರೆ ಶತ್ರುಗಳ ಕಾರಸ್ಥಾನವು ಭಾರಿಯಾಗಿರಬೇಕು. ದಾವಲ್‌ಖಾನನಲ್ಲಿ ಯಾವನೋ ಫಕೀರನಿದ್ದನಂತೆ! ಅವನು ಶತ್ರುಪಕ್ಷದ ವೇಷಧಾರಿಯೆಂಬುದು ಆ ಮೂರ್ಖ ಖಾನನಿಗೆ ತಿಳಿಯಬಾರದೆಂದರೆ ನಮ್ಮ ದುರ್ದೈವವು. ಇದರಿಂದ ನಮ್ಮ ಮುಸಲ್ಮಾನರ ದಡ್ಡತನ ಹಾಗ ವಿಷಯಾಂಧತೆಗಳು ವ್ಯಕ್ತವಾಗುವಂತೆ

ಕನ್ನಡಿಗರ ಕಾರಸ್ಥಾನಗಳು ಎಷ್ಟೆಂಬದು ಸ್ಪಷ್ಟವಾಗುತ್ತದೆ. ಇನ್ನು ಮುಂದೆ ನಾನು ಹ್ಯಾಗೆ ಮಾಡಬೇಕು? ರಾಯಚೂರಿಗೆ ಹೋದರೆ ಬುಭುಕ್ಷಿತರಾದ ಆ ಕನ್ನಡಿಗರು ನನ್ನನ್ನೂ ನನ್ನ ದಂಡಾಳುಗಳನ್ನೂ ಒಡಿದು ಬಾಯಲ್ಲಿ ಹಾಕಿಕೊಳ್ಳುವರು. ತಿರುಗಿ ನಾವು ವಿಜಾಪುರವನ್ನೂ ಕಾಣಲಾರೆವು. ಇನ್ನು ಹಾಗೇ ಇತ್ತಿಂದಲೇ ತಿರುಗಿ ಹೋಗಬೇಕೆಂದರೆ ನಮ್ಮ ದಂಡಿನಲ್ಲಾದರೂ ಶತ್ರುಗಳ ಗುಪ್ತಹೇರರು ಎಷ್ಟು ಜನರು ಇರುವರೋ ಯಾರಿಗೆ ಗೊತ್ತು? ನಾವು ಮುಂದೆ ಹೋಗಲು ಹಿಂದಿನಿಂದ ಕನ್ನಡಿಗರು ಗಂಟುಬಿದ್ದು, ನಡುದಾರಿಯಲ್ಲಿಯೇ ನಮ್ಮನ್ನು ತರುಬಿದರೆ ಹ್ಯಾಗೆ ಮಾಡಬೇಕು?'' ಎಂದು ಮನಸ್ಸಿನಲ್ಲಿ ಯೋಚಿಸಿದನು. ಕಡೆಗೆ ಅವನು ವೃಥಾದುರಭಿಮಾನಕ್ಕೆ ಬೀಳದೆ ವಿಜಯನಗರದ ರಾಯರೊಡನೆ ಮೊದಲಿನಂತೆ ಸಖ್ಯವನ್ನು ಕಾಯ್ದುಕೊಂಡು ಹೋಗುವದು ಉಚಿತವೆಂದು ಭಾವಿಸಿದನು.

ಈ ಮೇರೆಗೆ ಅದಿಲ್‌ಶಾಹಿಯು ತಿಮ್ಮರಸನ ತಂತ್ರಗಳ ಅಬ್ಬರಕ್ಕೆ ಬೆದರಿ ಒಡಂಬಡಿಕೆಯ ಅನುಸಂಧಾನವನ್ನು ನಡಿಸಿದನು ಅದಿಲ್‌ಶಾಹಿಯ ರಾಯಭಾರಿಯು ಕೃಷ್ಣದೇವರಾಯನನ್ನು ಕಂಡು ನಮ್ಮ ಒಡೆಯನು ನಿಮ್ಮೊಡನೆ ಎಂದಿನಂತೆ ಸಖ್ಯಬೆಳಿಸಬೇಕೆಂದು ಮಾಡಿರುವನೆಂಬರ್ಥದ ಅಭಿಪ್ರಾಯವನ್ನು ತಿಳಿಸಿದನು. ಅದಕ್ಕೆ ರಾಯರು—''ನಿಮ್ಮ ಒಡೆಯನೇ ಈ ನ್ಯಾಯವನ್ನು ಬುದ್ಧಿಪೂರ್ವಕವಾಗಿ ಕೊಂಡುಕೊಂಡಿರುವನು ಅದಕ್ಕೆ ನಾವಾದರೂ ಏನು ಮಾಡೋಣ? ನಾವು ನಮ್ಮ ರಾಯಭಾರಿಯನ್ನು ಕಳಿಸಿದಾಗ ದಾವಲ್‌ಖಾನನಿಂದ ಕೊಂಡಪಲ್ಲಿಯ ರಾಣಿಯವರನ್ನು ಬಿಡುಗಡೆಮಾಡಿಸಿ ಬಿಟ್ಟಿದ್ದರೆ ಇಷ್ಟೆಲ್ಲ ಆಯಾಸವೂ ಖರ್ಚೂ ನಮಗೆಲ್ಲಿ ಉಂಟಾಗುತ್ತಿತ್ತು? ಇದು ನಮ್ಮ ತಪ್ಪೋ ಅಥವಾ ನಿಮ್ಮ ತಪ್ಪೋ? ವಿಚಾರಮಾಡಿ ಒಪ್ಪಂದದ ಕರಾರುಗಳನ್ನು ಬರೆದುಕೊಂಡು ಬಂದರೆ ನೋಡುವೆವು.'' ಎಂದು ನುಡಿದರು ರಾಯಭಾರಿಯು ಪುನಃ ಅದಿಲ್‌ಶಹನ ಬಳಿಗೆ ಹೋಗಿ ನಡೆದ ವೃತ್ತಾಂತವನ್ನು ತಿಳಿಸಿದನು ಕೃಷ್ಣದೇವರಾಯನು ನಿಜವಾಗಿಯೂ ದೊಡ್ಡ ಮನುಷ್ಯನೆಂಬದನ್ನು ಅದಿಲ್‌ಶಹನು ಪೂರ್ಣವಾಗಿ ತಿಳಿದಿದ್ದನು. ಆದ್ದರಿಂದ ಅವನು ತನ್ನ ಮಂತ್ರಿಮಂಡಲದೊಡನೆ ಆಲೋಚಿಸಿ ಒಂದು ಕರಾರಪತ್ರವನ್ನು ಬರೆಯಿಸಿ ಕಳಿಸಿದನು. ಕೃಷ್ಣದೇವರಾಯರು ತಿಮ್ಮರಸನ ಒಪ್ಪಿಗೆಯಂತೆ ಆ ಕರಾರಪತ್ರಕ್ಕೆ ಒಪ್ಪಿಕೊಂಡು ಅದಿಲ್‌ಶಹನೊಡನೆ ಒಪ್ಪಂದಮಾಡಿಕೊಳ್ಳಲು ಒಡಂಬಟ್ಟರು. ಆ ಕರಾರಪತ್ರದಲ್ಲಿ ಬರೆದ ಅಭಿಪ್ರಾಯವೇನೆಂದರೆ (೧)

ವಿಜಯನಗರದವರ ಯುದ್ಧದ ಖರ್ಚನ್ನು ಅದಿಲ್‌ಶಹನು ಕೊಡುವದಲ್ಲದೆ ರಾಯಚೂರ ಕೋಟೆಯನ್ನೂ ಅವರಿಗೆ ಬಿಟ್ಟುಕೊಡಬೇಕು. (೨) ಪರಸ್ಪರರು ತಮ್ಮ ತಮ್ಮ ಸೆರೆಯಲ್ಲಿದ್ದ ಪರಸ್ಪರರ ಜನರನ್ನು ಬಿಟ್ಟುಬಿಡಬೇಕು

ಈ ರೀತಿಯಾಗಿ ಉಭಯತರಲ್ಲಿ ಒಪ್ಪಂದವಾಗಲು ಪರಸ್ಪರರು ತಮ್ಮತಮ್ಮ ಸೆರೆಯಲ್ಲಿದ್ದ ಜನರನ್ನು ಬಿಟ್ಟುಕೊಟ್ಟರು. ದಾವಲ್‌ಖಾನನು ತನ್ನ ವಿಷಯಾಂಧತನಕ್ಕೆ ನಾಚಿಕೊಂಡು ಪುನಃ ಅದಿಲ್‌ಶಾಹಿಯ ದರ್ಬಾರವನ್ನು ಸೇರಿದನು ಒಳಿಕ ಅದಿಲ್‌ಶಹನು ತನ್ನ ರಾಜಧಾನಿಗೆ ಹೊರಟು ಹೋದನು

ಅನಂತರ ಇತ್ತ ರಾಯಚೂರಲ್ಲಿ ರಾಯರು ಕೆಲದಿನ ನಿಂತು, ಗಜಪತಿಯ ಶೋಧಹಚ್ಚಿ, ಪದ್ಮೆಯನ್ನು ಆತನಿಗೊಪ್ಪಿಸಿ ಅವನ ರಾಜ್ಯವನ್ನು ಅವನಿಗೆ ಕೊಟ್ಟು ಬಿಟ್ಟರು ಬಳಿಕ ರಾಯಚೂರ ದುರ್ಗಕ್ಕೆ ಈ ವಿಜಯದಲ್ಲಿ ಹೆಚ್ಚಾಗಿ ಸಹಾಯ ಮಾಡಿದ ಪ್ರತಾಪನನ್ನು ಅಧಿಪತಿಯನ್ನಾಗಿ ಮಾಡಿದರು. ರುದ್ರದೇವನಿಗೆ ಉದಯಗಿರಿಯ ಕುವರಿಯನ್ನು ಲಗ್ನಮಾಡಿ ಕೊಟ್ಟು, ಆ ರಾಜ್ಯವನ್ನು ಅವನಿಗೆ ದಯಪಾಲಿಸಿ, ಪಶ್ಚಾತ್ತಾಪದಿಂದ ದಗ್ಧನಾದ ರಾಮಯನನ್ನು ಅವನ ಮಂತ್ರಿಯನ್ನಾಗಮಾಡಿದರು ರಾಮಯನು ರಾಯರ ವಿಷಯವಾಗಿ ಕೃತಜ್ಞನಾಗಿ ರುದ್ರದೇವನೊಡನೆ ಸ್ವರಾಜ್ಯಕ್ಕೆ ಹೊರಟು ಹೋದನು ಪ್ರಹಾರೇಶ್ವರ-ರಾಮನಾಯ್ಕರು ಸ್ವಾಮಿಕಾರ್ಯವನ್ನು ಬಹು ಚನ್ನಾಗಿ ಸಾಧಿಸಿದ್ದರಿಂದ ರಾಯರು ಅವರಿಗೆ ಹೊಸ ಜಹಾಗೀರುಗಳನ್ನು ಹಾಕಿ ಕೊಟ್ಟರು. ಶಂಕರ ರಡ್ಡಿಯಂತೂ ರಾಯರ ವಿಶ್ವಾಸಕ್ಕೆ ಪಾತ್ರನಾಗಿ ಬಹು ಮರ್ಯಾದೆಯನ್ನು ಹೊಂದಿದನು ಬಳಿಕ ರಾಯರು ಜಯಭೇರಿಯನ್ನು ಹೊಡೆಯಿಸುತ್ತ ವಿಜಯನಗರವನ್ನು ಪ್ರವೇಶಿಸಿದರು ಸದಾಶಿವ ಮಂತ್ರಿಯು ತನ್ನ ಸ್ವಾಮಿಯನ್ನೂ, ಸ್ವಾಮಿನಿಯನ್ನೂ ಕೂಡಿಕೊಂಡು ತಮ್ಮ ನಗರಿಗೆ ಹೊರಟು ಹೋದನು. ಗಜಪತಿಗೂ, ರಾಯರಿಗೂ ಈ ಪ್ರಸಂಗದಿಂದ ಅನ್ಯೋನ್ಯ ಸಂಬಂಧವು ಬೆಳೆಯಿತು.

ಒಟ್ಟಿಗೆ ಹೇಳತಕ್ಕದ್ದೇನಂದರೆ, ಈ ಕಾದಂಬರಿಯ ಪ್ರಾರಂಭದ ಪ್ರಕರಣದಲ್ಲಿ ಬರೆದಂತೆ ಪ್ರಹಾರೇಶ್ವರ-ಪ್ರತಾಪ-ರುದ್ರದೇವ-ರಾಮನಾಯ್ಕ ಮೊದಲಾದವರು ಎಂಥ ಸುಮುಹೂರ್ತದಮೇಲೆ ವಿಜಯನಗರಕ್ಕೆ ಹೊರಟಿದ್ದರೋ ಏನೋ ಆ ವೇಳೆಯ ಪ್ರಭಾವದಿಂದ ಅವರಿಗೆ ಈ ಕಾದಂಬರಿಯಲ್ಲಿ ವರ್ಣಿತವಾದ ಪ್ರಸಂ

ಗವು ಒದಗಿ ಅವರು ಅನಾಯಾಸವಾಗಿ ವಿಜಯನಗರದ ಸಾರ್ವಭೌಮರ ಕೃಪೆಗೆ ಪಾತ್ರರಾದರು. ಇದರಿಂದ ಅವರು ಬಂದ ಕೆಲಸವು ಕೊನೆಗಂಡದ್ದಲ್ಲದೆ, ಕಲ್ಪನಾತೀತವಾದ ಲಾಭವುಂಟಾಯಿತು. ಈ ಅಪೂರ್ವ ಯೋಗದಿಂದ ಕನ್ನಡಿಗರ ಕಾರಸ್ಥಾನವು ಎಷ್ಟೆಂಬದು ಮುಸಲ್ಮಾನರಿಗೆ ನೆಲೆಹತ್ತದೆ ಹೋಯಿತು. ಅವರು ತಿಮ್ಮರಸನೂ, ಕೃಷ್ಣದೇವರಾಯನೂ ಬದುಕಿ ಇರುವವರೆಗೆ ನೆಮ್ಮದಿಯಾಗಿ ಇದ್ದರು. ಇದು ಕನ್ನಡಿಗರಾದ ಈ ಉಭಯತರ ಕಾರಸ್ಥಾನದ ಫಲವೇ ಎಂದು ಹೇಳಬಹುದು.

ಸಂಪೂರ್ಣ.